ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 3 ಶನಿವಾರ 2026

ಮೈಸೂರು ಮಿತ್ರ 46 ಅತ್ಯುತ್ತಮ ಪತ್ರಿಕೋದ್ಯಮ

ಸಂಪುಟ: 46 | ಸಂಚಿಕೆ: 256 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಏ.22ರಿಂದ 3 ದಿನ ಸಿಇಟಿ



ಬೆಂಗಳೂರು, ಜ.2(ಕೆಎಂಶಿ)– ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಪರೀಕ್ಷೆ (ಸಿಇಟಿ) ಏ.22ರಿಂದ 24ರವರೆಗೆ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ಪರೀಕ್ಷೆ ತೆಗೆದುಕೊಳ್ಳ ಬಯಸುವ ವಿದ್ಯಾರ್ಥಿಗಳು ಜನವರಿ 17ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದರು. ಏ.22ರಂದು ಹೊರನಾಡು ಮತ್ತು ಗಡಿನಾಡ ಕನ್ನಡಿಗರಿಗೆ ಕನ್ನಡ ವಿಷಯ ಪರೀಕ್ಷೆ, ಏ.23ರಂದು ಭೌತಶಾಸ್ತ್ರ, ರಸಾಯನಶಾಸ್ತ್ರ, ▶ 6ನೇ ಪುಟಕ್ಕೆ

ವಿರೋಧ–ಟೀಕೆಗಳಿಗೆ ಮಣಿದ ಸರ್ಕಾರ: ಕೋಗಿಲು ನಿರಾಶ್ರಿತರಿಗೆ ಮನೆ ಹಂಚಿಕೆ ತಡೆ!

ಬೆಂಗಳೂರು: ಕೋಗಿಲು ನಿರಾಶ್ರಿತರಿಗೆ ಮಾನವೀಯತೆಯ ದೃಷ್ಟಿಯಿಂದ ಮನೆಗಳನ್ನು ನೀಡುವ ನಿರ್ಧಾರಕ್ಕೆ ಜನರು ಹಾಗೂ ವಿಪಕ್ಷಗಳ ವಿರೋಧ ಹಾಗೂ ಟೀಕೆಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇದೀಗ ವಿರೋಧ–ಟೀಕೆಗಳಿಗೆ ಮಣಿದಿದ್ದು, ಮನೆ ಹಂಚಿಕೆ ನಿರ್ಧಾರಕ್ಕೆ ತಡೆ ನೀಡಿದೆ.

ಬೆಂಗಳೂರಿನ ಕೋಗಿಲು ಬಡಾವಣೆಯಲ್ಲಿ ಅಕ್ರಮ ಕಟ್ಟಡಗಳ ತೆರವು ಮಾಡಿದ್ದು, ಟೀಕೆಗೊಳಗಾದ ಬೆನ್ನಲ್ಲೇ ಸಂತ್ರಸ್ತರಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಆಶ್ರಯ ಯೋಜನೆ ಅಡಿ ಮನೆ ನೀಡುವುದಾಗಿ ಸರ್ಕಾರ ಹೇಳಿತ್ತು. ಅದರಂತೆ, ಜನವರಿ 2ಕ್ಕೆ ಮನೆ ಹಂಚಿಕೆ ▶ 6ನೇ ಪುಟಕ್ಕೆ

ಸಫಾರಿ ಆರಂಭಿಸಿ

ಅರಣ್ಯ ಸಚಿವರಿಗೆ ಸಿಎಂ ಸೂಚನೆ

ಬೆಂಗಳೂರು,ಜ.2(ಕೆಎಂಶಿ)– ನಾಗರಹೊಳೆ, ಬಂಡೀಪುರ ಸೇರಿದಂತೆ ರಾಜ್ಯದ ಪ್ರಮುಖ ಅರಣ್ಯಧಾಮಗಳಲ್ಲಿ ಸಫಾರಿ ಪುನರಾರಂಭಿಸಲು ಸರ್ಕಾರ ಮುಂದಾಗಿದೆ.

ಸಫಾರಿ ನಿರ್ಬಂಧದಿಂದ ಪ್ರವಾಸಿಗರು ಬಾರದೇ ಸ್ಥಳೀಯರಿಗೆ ಆದಾಯ ಇಲ್ಲದಂತಾಗಿರುವುದನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರುತ್ತಿದ್ದಂತೆ ಸಫಾರಿ ಪುನರಾಂಭಿಸಲು ಸಂಬಂಧಿಸಿದ ತಜ್ಞರ ಸಲಹೆ ಪಡೆಯಲು ಸೂಚಿಸಿದ್ದಾರೆ.

ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಸಂಬಂಧ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾನವ–ವನ್ಯಜೀವಿ ಸಂಘರ್ಷದ ದೂರು, ಅರಣ್ಯ ಪ್ರಾಣಿಗಳಿಗೆ ಆಗುತ್ತಿದ್ದ ತೊಂದರೆ ಹಿನ್ನೆಲೆಯಲ್ಲಿ ಸಫಾರಿ ನಿರ್ಬಂಧಿಸಲಾಗಿತ್ತು. ಆದರೆ ಈ ನಿರ್ಧಾರವನ್ನು ಪುನರ್ ಪರಿಶೀಲಿಸಲು ಪರಿಣಿತರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚಿಸಿ, ಅವರಿಂದ ಅಭಿಪ್ರಾಯ ಪಡೆದು ಸಫಾರಿ ಪುನರಾರಂಭಿಸುವ ಕುರಿತು ತೀರ್ಮಾನಿಸುವಂತೆ ತಿಳಿಸಿದರು.

ಪ್ರವಾಸೋದ್ಯಮಕ್ಕೆ ಪೆಟ್ಟು: ಮೈಸೂರು ಹಾಗೂ ಚಾಮರಾಜನಗರ ಭಾಗದಲ್ಲಿ ಹುಲಿ ದಾಳಿ ಹೆಚ್ಚಿದ್ದರ ಹಿನ್ನೆಲೆಯಲ್ಲಿ ಕಬಿನಿ(ನಾಗರಹೊಳೆ) ಹಾಗೂ ಬಂಡೀಪುರ ಅರಣ್ಯ ವ್ಯಾಪ್ತಿಯ ಸಫಾರಿಯನ್ನು ನಿರ್ಬಂಧಿಸುವಂತೆ ರೈತ ಸಂಘಟನೆಗಳು ಸೇರಿದಂತೆ ಒಂದು ವರ್ಗ ಆಗ್ರಹಪಡಿಸಿತ್ತು. ▶ 6ನೇ ಪುಟಕ್ಕೆ



ಹೊಸ ವರ್ಷ ಭಾರೀ ನಷ್ಟ

ಸಫಾರಿ ಬಂದ್ ಆಗಿರುವುದು ಹೊಸ ವರ್ಷಾಚರಣೆಯ ಆದಾಯವನ್ನೂ ಕಸಿದಿದೆ. ಪ್ರತಿವರ್ಷ ಬಂಡೀಪುರ ಹಾಗೂ ಕಬಿನಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ಗಳು ಮೂರ್‍ನಾಲ್ಕು ದಿನ ಸಂಪೂರ್ಣ ಭರ್ತಿಯಾಗುತ್ತಿದ್ದವು. ವಿದೇಶಿ ಪ್ರವಾಸಿಗರು, ವಿವಿಧ ರಾಜ್ಯಗಳ ಪ್ರವಾಸಿಗರು ತಿಂಗಳ ಹಿಂದೆಯೇ ಬುಕ್ ಮಾಡುತ್ತಿದ್ದರು. ಆದರೆ ಈ ಬಾರಿ ಈ ಎರಡೂ ರೆಸಾರ್ಟ್‌ಗಳಲ್ಲಿ ಶೇ.20ರಷ್ಟು ಮಾತ್ರ ಗ್ರಾಹಕರಿದ್ದರೆಂದು ತಿಳಿದುಬಂದಿದೆ. ಇನ್ನು ಖಾಸಗಿ ರೆಸಾರ್ಟ್‌ಗಳಿಗೂ ಭಾರೀ ನಷ್ಟವಾಗಿದೆ. ಅಲ್ಲದೆ ಜೀವನೋಪಾಯಕ್ಕಾಗಿ ರೆಸಾರ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಸ್ಥಳೀಯರಿಗೆ ಉದ್ಯೋಗ ಅಭದ್ರತೆ ಕಾಡುತ್ತಿದೆ.

ಕೊಟ್ಟ ಮಾತಿನಂತೆ ನಡೆಯಬೇಕು...!

- ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸೋನಿಯಾ ಗಾಂಧಿ ಕಿವಿಮಾತು
- ತಪ್ಪಿದರೆ ಮಧ್ಯಪ್ರದೇಶ, ರಾಜಸ್ತಾನ, ಪಂಜಾಬ್, ಹರಿಯಾಣ, ಛತ್ತೀಸ್‌ಘಡದಲ್ಲಿ ಪಕ್ಷಕ್ಕೆ ಆದ ಗತಿ ಕರ್ನಾಟಕದಲ್ಲಾಗುವ ಎಚ್ಚರಿಕೆ



ಬೆಂಗಳೂರು, ಜ.2(ಕೆಎಂಶಿ)–ಸಾರ್ವಜನಿಕ ಬದುಕಿನಲ್ಲಿ ಇರುವವರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂಬ ಸಲಹೆಯನ್ನು ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ತಮ್ಮ ಪುತ್ರ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ನೀಡಿದ್ದಾರೆ.

ಕರ್ನಾಟಕದಲ್ಲಿ ಅಧಿಕಾರ ಹಂಚಿಕೆ ಸಂಬಂಧ ಎದುರಾಗಿರುವ ಸಮಸ್ಯೆ ಹಿನ್ನೆಲೆಯಲ್ಲಿ ಸೋನಿಯಾ ಅವರು ರಾಹುಲ್ ಅವರಿಗೆ ಈ ಖಡಕ್ ಸಲಹೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಅಧಿಕಾರ ಹಸ್ತಾಂತರ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಮ್ಮನ್ನು ಜನವರಿ 7ರ ನಂತರ ದೆಹಲಿಗೆ ಕರೆಸುವ ಸಾಧ್ಯತೆ ಇದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತರೊಂದಿಗೆ ಹೇಳಿಕೊಂಡಿದ್ದಾರೆ.

ನನ್ನ ವಿಚಾರವನ್ನು ಸೋನಿಯಾ ಗಾಂಧಿ ಅವರು ರಾಹುಲ್ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಳಿ ಪ್ರಸ್ತಾಪಿಸಿದ್ದಾರೆ. ನನ್ನನ್ನೂ ಸಂಪರ್ಕಿಸಿ ಅಧಿಕಾರ ಹಸ್ತಾಂತರ ಕುರಿತಂತೆ ಭರವಸೆ ವ್ಯಕ್ತಪಡಿಸಿ, ಯಾರೂ ದುಡುಕಬೇಡಿ. ನನಗೆ ದಕ್ಕಬೇಕಾದ ಸ್ಥಾನ ದೊರೆಯಲಿದೆ ಎಂಬ ಆತ್ಮವಿಶ್ವಾಸದ ಮಾತುಗಳನ್ನು ಆಡಿದ್ದಾರೆ. ಮಧ್ಯಪ್ರದೇಶ, ರಾಜಾಸ್ತಾನ, ಪಂಜಾಬ್, ಹರಿಯಾಣ ಹಾಗೂ ಛತ್ತೀಸ್‌ಘಡ ರಾಜ್ಯಗಳಲ್ಲಿ ಅಧಿಕಾರ ಹಸ್ತಾಂತರ ಗೊಂದಲದಿಂದ ಚುನಾವಣೆಯಲ್ಲಿ ಪರಾಭವಗೊಂಡು ಪುನಃ ಅಧಿಕಾರ ಚುಕ್ಕಾಣಿ ಹಿಡಿಯಲು ಸಾಧ್ಯವಾಗಲಿಲ್ಲ. ▶ 6ನೇ ಪುಟಕ್ಕೆ

ಬಳ್ಳಾರಿಯ ಬಡಿದಾಟ ಪ್ರಕರಣ

ಯಾರ ಗನ್‌ನಿಂದ ಗುಂಡು ಹಾರಿತ್ತು ಎಂಬುದರ ತನಿಖೆ



ಸಿದ್ದರಾಮಯ್ಯ

ಬೆಂಗಳೂರು, ಜ.2– ಬಳ್ಳಾರಿಯಲ್ಲಿ ಕಳೆದ ರಾತ್ರಿ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಂಗಳೂರಿನಲ್ಲಿ ಮಾತನಾಡಿ, ಘಟನೆ ಬಗ್ಗೆ ತನಿಖೆ ಮಾಡಲು ಗೃಹ ಇಲಾಖೆಗೆ ಸೂಚಿಸಿದ್ದೇನೆ. ಬಿಜೆಪಿಯವರ ಗನ್‌ನಿಂದ ಬುಲೆಟ್ ಹಾರಿದೆಯೇ ಇಲ್ಲ ಕಾಂಗ್ರೆಸ್‌ನವರ ಗನ್‌ನಿಂದ ಬುಲೆಟ್ ಹಾರಿದೆಯೋ ಎಂದು ತಿಳಿಯಬೇಕಿದೆ. ತನಿಖೆ ಮಾಡಿ ವರದಿ ನೀಡಿ ಎಂದು ಹೇಳಿದ್ದೇನೆ ಎಂದರು.

ಶಾಸಕ ಭರತ್ ರೆಡ್ಡಿಯವರ ಆಪ್ತ ಸತೀಶ್ ರೆಡ್ಡಿಯವರು ಭದ್ರತೆಗೆ ಗನ್ ಇಟ್ಟುಕೊಂಡಿದ್ದಾರೆ. ಗಾಳಿಯಲ್ಲಿ ಗುಂಡು ಹಾರಿಸಿದಾಗ ಕಾರ್ಯಕರ್ತ ರಾಜಶೇಖರ್‌ಗೆ ತಗುಲಿ ಮೃತಪಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಗುಂಡು ಯಾರ ಬುಲೆಟ್‌ನಿಂದ ಹಾರಿದೆ ಎಂದು ಗೊತ್ತಾಗಬೇಕಿದೆ ಎಂದರು.

ರಾಹುಲ್ ಗಾಂಧಿ ಸುಳ್ಳು ಹೇಳಲ್ಲ: ಶೇ.83.61ರಷ್ಟು ಕರ್ನಾಟಕದ ಮತದಾರರು EVM ಬಗ್ಗೆ ವಿಶ್ವಾಸ ಹೊಂದಿದ್ದಾರೆಂದು ಸಮೀಕ್ಷೆಯೊಂದು ಬಹಿರಂಗಪಡಿಸಿದ್ದು, ಕಲಬುರಗಿಯಲ್ಲಿ ಅತೀ ಹೆಚ್ಚು ಮಂದಿ ಇವಿಎಂ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂಬ ಬಗ್ಗೆ ಕೇಳಿದಾಗ ಸಿಎಂ, ರಾಹುಲ್ ಗಾಂಧಿಯವರು ಯಾವತ್ತೂ ಸುಳ್ಳು ಹೇಳಿಲ್ಲ, ಅವರು ಸರಿಯಾಗಿ ಅಧ್ಯಯನ ಮಾಡಿ, ತನಿಖೆ ಮಾಡಿದ ನಂತರವೇ ಬಹಿರಂಗವಾಗಿ ಆರೋಪ ಮಾಡಿದ್ದಾರೆ ಎಂದರು.

ಗೃಹ ಸಚಿವರ ಹೇಳಿಕೆ: ಬಳ್ಳಾರಿ ಹಿಂಸಾಚಾರದ ಕುರಿತು ಮಾತನಾಡಿರುವ ಗೃಹ ಸಚಿವ ಪರಮೇಶ್ವರ್, ಮಹರ್ಷಿ ವಾಲ್ಮೀಕಿ ಪ್ರತಿಮೆಯ ಪ್ರಸ್ತಾವಿತ ಉದ್ಘಾಟನೆಗೆ ಸಂಬಂಧಿಸಿದ ಬ್ಯಾನರ್ ವಿಷಯಕ್ಕೆ ಜನಾರ್ದನ ರೆಡ್ಡಿ ಮತ್ತು ಶಾಸಕ ನಾರಾ ಭರತ್‌ರೆಡ್ಡಿ ಅವರ ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯಿತು. ಬ್ಯಾನರ್‌ಗಳನ್ನು ತೆಗೆದು ಹಾಕಲಾಯಿತು. ಇದು ಗುಂಪುಗಳ ನಡುವೆ ಕಲ್ಲು ತೂರಾಟಕ್ಕೆ ಕಾರಣವಾಯಿತು. ನಂತರ ಗುಂಡಿನ ದಾಳಿ ನಡೆದು ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ನಾನು ತನಿಖೆಗೆ ಆದೇಶಿಸಿದ್ದೇನೆ. ಚಿತ್ರದುರ್ಗ ದಾವಣಗೆರೆಯಿಂದ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದೆ. ಪರಿಸ್ಥಿತಿ ಈಗ ಶಾಂತಿಯುತವಾಗಿದೆ. ಕೆಲವರನ್ನು ಬಂಧಿಸಲಾಗಿದೆ ಎಂದರು.

ಗುಂಪು ಘರ್ಷಣೆಯಲ್ಲಿ ಗುಂಡೇಟಿಗೆ ಕಾಂಗ್ರೆಸ್ ಕಾರ್ಯಕರ್ತ ಬಲಿ; ನಾಲ್ಕು ಪ್ರಕರಣ ದಾಖಲು



ಹಿತೇಂದ್ರ

ಬಳ್ಳಾರಿ: ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ನಿವಾಸದ ಬಳಿ ನಡೆದ ಬ್ಯಾನರ್ ಗಲಾಟೆ ವೇಳೆ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಗುಂಡೇಟಿಗೆ ಬಲಿಯಾದ ಸಂಬಂಧ ನಾಲ್ಕು ಪ್ರಕರಣ ದಾಖಲಾಗಿದೆ ಎಂದು ರಾಜ್ಯದ ಸಹಾಯಕ ಪೊಲೀಸ್ ಮಹಾ ನಿರ್ದೇಶಕ ಹಿತೇಂದ್ರ ಶುಕ್ರವಾರ ತಿಳಿಸಿದರು.

ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಳ್ಳಾರಿಯಲ್ಲಿ ಬ್ಯಾನರ್ ವಿಚಾರಕ್ಕೆ ನಿನ್ನೆ ಸಂಜೆ 6.30ಕ್ಕೆ ಕಲ್ಲು ತೂರಾಟವಾಗಿದೆ. ನಂತರ ಮುಗಿಯಿತು ಅನ್ನುವಷ್ಟರಲ್ಲಿ ಮತ್ತೊಮ್ಮೆ 9 ಗಂಟೆಗೆ ಗಲಾಟೆ ನಡೆದಿದೆ. ಒಂದು ಗುಂಪಿನಿಂದ ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ಓರ್ವ ವ್ಯಕ್ತಿ ಸಾವನ್ನಪ್ಪಿದ್ದು, ಬಳಿಕ ಪೊಲೀಸರು ಅಶ್ರುವಾಯು ಸಿಡಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ ಎಂದರು.

ಘಟನೆ ಸಂಬಂಧ ಈಗಾಗಲೇ 5 ಗನ್ ಸೀಜ್ ಮಾಡಿದ್ದೇವೆ. ಇನ್ನಷ್ಟು ಜನರ ಗನ್ ವಶಕ್ಕೆ ಪಡೆದುಕೊಳ್ಳುತ್ತೇವೆ. ಯಾವ ಗನ್‌ನಿಂದ ಬುಲೆಟ್ ಹಾರಿದೆ. ಅದು ಯಾರದ್ದು, ಯಾರು ನಿಯಮ ಉಲ್ಲಂಘಿಸಿದ್ದಾರೆ ಎಂಬುದನ್ನು FSL ಪರೀಕ್ಷೆಯಿಂದ ತಿಳಿದುಕೊಳ್ಳಲಾಗುವುದು ಎಂದರು.

ಮೃತ ವ್ಯಕ್ತಿಯ ಮರಣೋತ್ತರ ಪರೀಕ್ಷೆ ಮುಗಿದಿದ್ದು, ಈಗಾಗಲೇ ಪ್ರಕರಣ ಸಂಬಂಧಿಸಿದಂತೆ 4 ದೂರು ದಾಖಲಾಗಿದೆ. ▶ 6ನೇ ಪುಟಕ್ಕೆ

ನಿನ್ನೆಯಷ್ಟೇ ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಪವನ್ ನೆಜ್ಜೂರ್ ಅಮಾನತು



ಪವನ್ ನೆಜ್ಜೂರ್

ಬೆಂಗಳೂರು: ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ ಕಾಂಗ್ರೆಸ್ ಕಾರ್ಯಕರ್ತ ಗುಂಡೇಟಿಗೆ ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಬ್ಯಾನರ್ ಗಲಾಟೆಯನ್ನು ಸರಿಯಾಗಿ ನಿಭಾಯಿಸಿಲ್ಲ ಮತ್ತು ಘಟನೆ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡಿಲ್ಲ ಎಂಬ ಕಾರಣ ನೀಡಿ, ನಿನ್ನೆಯಷ್ಟೇ ಬಳ್ಳಾರಿ ಎಸ್ಪಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಪವನ್ ನೆಜ್ಜೂರ್ ಅವರನ್ನು ಅಮಾನತುಗೊಳಿಸಲಾಗಿದೆ. ವಿಜಯನಗರ ಲೋಕಾಯುಕ್ತದಲ್ಲಿ ಎಸ್ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಪವನ್ ಅವರನ್ನು ಡಿ.31ರಂದು ಬಳ್ಳಾರಿ ಎಸ್‌ಪಿಯಾಗಿ ರಾಜ್ಯ ಸರ್ಕಾರ ವರ್ಗಾವಣೆ ಮಾಡಿತ್ತು. ಕಳೆದ ಒಂದೂವರೆ ವರ್ಷದಿಂದ ಬಳ್ಳಾರಿ ಎಸ್ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ.ಶೋಭಾರಾಣಿ ವಿ.ಜೆ.ಅವರನ್ನು ಮಂಡ್ಯ ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದ್ದು, ಇವರ ಸ್ಥಾನಕ್ಕೆ ಪವನ್ ನೆಜ್ಜೂರ್ ಅವರನ್ನು ವರ್ಗಾಯಿಸಲಾಗಿತ್ತು.

ಊಟಕ್ಕೆ ಕೂತಿದ್ದೆ...! ನನ್ನ ಏಳಿಸಿ, ಬೇರೆಯವರನ್ನ ಕೂರಿಸಿದರು...!! ಅವರಿಗೆ ನಾನೇ ಬಡಿಸಿದೆ...!!!

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ಕೈ ತಪ್ಪಿದ ಪ್ರಸಂಗವನ್ನು ಮಾರ್ಮಿಕವಾಗಿ ವಿವರಿಸಿದ ಎಸ್.ಎ.ರಾಮದಾಸ್

ಮೈಸೂರು,ಜ.2(ಎಂಟಿವೈ)–ಊಟಕ್ಕೆ ಕೂತಿದ್ದೆ... ನನ್ನ ಏಳಿಸಿ, ಬೇರೆಯವರನ್ನು ಕೂರಿಸಿದರು... ಅವರಿಗೆ ನಾನೇ ಬಡಿಸಿದೆ...! ಮಾಜಿ ಸಚಿವ ಎಸ್.ಎ. ರಾಮದಾಸ್ ಇದೇ ಮೊದಲ ಬಾರಿಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ಕೈ ತಪ್ಪಿದ್ದಕ್ಕೆ ಬೇಸರ ಹೊರ ಹಾಕಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ರಾಮದಾಸ್ ಅವರು ಸಕ್ರಿಯ ರಾಜಕಾರಣ ಅಥವಾ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಗಣ್ಯರು ಅಭಿಪ್ರಾಯಪಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಅವರು, ನಾನು ಸೇನಾಧಿಕಾರಿ ಮಗನಾಗಿದ್ದು, ಸೇನೆ ಸೇರಬೇಕೆಂದು ಸಿದ್ಧತೆ ನಡೆಸಿದ್ದೆ. ಆದರೆ, ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದೆ. 1994ರ ನ.8ರಂದು ಮತ ಎಣಿಕೆ ನಡೆದು ಫಲಿತಾಂಶ ಘೋಷಣೆಯಾಗಿ ನಾನು 8 ಸಾವಿರ ಮತಗಳ ಅಂತರದಿಂದ ಆಯ್ಕೆಯಾಗಿದ್ದೆ. ನನ್ನ ತಂದೆ–ತಾಯಿ ನನ್ನೊಂದಿಗೆ ಎಣಿಕಾ ಕೇಂದ್ರಕ್ಕೆ ಬಂದಿದ್ದರು. ಅವರು ನನಗೆ 'ರಾಜಕಾರಣ ಬಹಳ ಕೆಟ್ಟದ್ದು, ಇದರಲ್ಲಿ ನಿನ್ನ ಕೈ ಮತ್ತು ರಕ್ತ ಮಲೀನ ಮಾಡಿಕೊಳ್ಳಬೇಡ' ಎಂದಿದ್ದರು. ಅವರ ಮಾತಿಗೆ ಬದ್ಧನಾಗಿ ಶುದ್ಧ ರಾಜಕಾರಣ ಮಾಡಿದ್ದೇನೆ ಎಂದು ಎಸ್.ಎ.ರಾಮದಾಸ್ ಪ್ರತಿಪಾದಿಸಿದರು.



ಎಸ್.ಎ.ರಾಮದಾಸ್

ಕಳೆದ ವಿಧಾನಸಭಾ ಚುನಾವಣೆ ವೇಳೆ ನಾನು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೆ. ಊಟಕ್ಕೆ ಕುಳಿತಿದ್ದ ನನ್ನನ್ನ ಏಳಿಸಿ, ಬೇರೆಯವರನ್ನು ಕೂರಿಸಿದರು. ಆದರೂ ನನಗೇನೂ ಫೀಲಿಂಗ್ ಇಲ್ಲ. ಎಲ್ಲರಿಗೂ ನಾನೇ ಬಡಿಸಿದೆ. ಕಾರಣ ಶ್ರೀರಾಮ ನನಗೆ ಕೊಟ್ಟಂತಹ

> "ನಾನು ಇನ್ನು ಮುಂದೆ ಚುನಾವಣಾ ರಾಜಕೀಯದಲ್ಲಿ ಪಾಲ್ಗೊಳ್ಳುವುದಿಲ್ಲ. ಆದರೆ, ಸಮಾಜ ಮುಖಿ ಕೆಲಸದಲ್ಲಿ ಸದಾ ನಿರತನಾಗಿರುತ್ತೇನೆ. ಚುನಾವಣಾ ರಾಜಕೀಯದಲ್ಲಿ ಯುವಕರು ಮುಂದೆ ಬರಬೇಕು.
> –ಎಸ್.ಎ.ರಾಮದಾಸ್, ಮಾಜಿ ಸಚಿವರು.

ಒಂದು ದೊಡ್ಡ ಸಂದೇಶ. ಇಂದು ಗೆಲುವಿಗೆ ಸಂಬಂಧಪಟ್ಟಂತೆ ಬೇರೆ ತರ ವ್ಯಾಖ್ಯಾನ ಮಾಡಬಹುದು. ಆದರೆ, ನಾನು ಅವರ ಗೆಲುವಿಗೆ ಶ್ರಮಿಸಿದ್ದೆ ಎಂದು ಸ್ಪಷ್ಟಪಡಿಸಿದರು.

ಖರ್ಚಿಲ್ಲದೆ ಗೆಲ್ಲಿಸುತ್ತೇವೆ ಎಂದರು!: ಟಿಕೆಟ್ ಕೈ ತಪ್ಪಿದ್ದಕ್ಕೆ ಇಂದು ಉನ್ನತ ಸ್ಥಾನದಲ್ಲಿರುವ ಬೇರೊಂದು ಪಕ್ಷದ ಮುತ್ಸದ್ಧಿ ರಾಜಕಾರಣಿಯೊಬ್ಬರು ಖುದ್ದಾಗಿ ನನಗೆ ಕರೆ ಮಾಡಿ, ನಮ್ಮ ಪಕ್ಷಕ್ಕೆ ಬನ್ನಿ. ನಿಮ್ಮಿಂದ ಒಂದು ಪೈಸೆ ಖರ್ಚು ಮಾಡಿಸದೆ ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಭರವಸೆ ನೀಡಿದರು. ಆದರೆ, ನಾನು ಪಕ್ಷ ನನ್ನ ತಾಯಿ ಇದ್ದಂತೆ, ಪಕ್ಷಕ್ಕೆ ಮೋಸ ಮಾಡುವುದಿಲ್ಲ ಎಂದು ಅನ್ಯ ಪಕ್ಷದ ಆಹ್ವಾನವನ್ನು ತಿರಸ್ಕರಿಸಿದೆ. ▶ 6ನೇ ಪುಟಕ್ಕೆ

ಬಂಡಿಪಾಳ್ಯ ಬಳಿ ಬೆಂಗಳೂರು–ಊಟಿ ಹೆದ್ದಾರಿಯಲ್ಲಿ ನಿರ್ಮಾಣವಾಗುತ್ತಿರುವ

ಫ್ಲೈಓವರ್ ಜೆಎಸ್‌ಎಸ್ ಕಾಲೇಜುವರೆಗೆ ವಿಸ್ತರಣೆ



ಬೆಂಗಳೂರು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಂಡಿಪಾಳ್ಯ ಬಳಿ ಭರದಿಂದ ಸಾಗಿರುವ ಫ್ಲೈಓವರ್ ನಿರ್ಮಾಣ ಕಾಮಗಾರಿ.



> "ಹಲವು ವರ್ಷಗಳಿಂದ ಬಂಡಿಪಾಳ್ಯ ಎಪಿಎಂಸಿ ಬಳಿ ಬೆಂಗಳೂರು–ಊಟಿ ಹೆದ್ದಾರಿಯ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸಂಚಾರ ಸಮಸ್ಯೆ ಎದುರಾಗಿತ್ತು. ಸುಗಮ ಸಂಚಾರಕ್ಕೆ ಈ ಹಿಂದೆ ಅನುಮೋದನೆಯಾಗಿದ್ದ ಫ್ಲೈಓವರ್ ಕೇವಲ ರಿಂಗ್ ರೋಡ್ ಜಂಕ್ಷನ್‌ವರೆಗೆ ಮಾತ್ರ ಸೀಮಿತವಾಗಿತ್ತು. ನಾನು ಸಂಸದನಾಗಿ ಬಂದ ಮೇಲೆ ಅಲ್ಲಿಯ ಸಮಸ್ಯೆ ಅರಿತು ಪ್ರಾಧಿಕಾರದ ಗಮನ ಸೆಳೆದು 950 ಮೀಟರ್ ಉದ್ದದ ಫ್ಲೈಓವರ್ ಅನ್ನು 1.5 ಕಿ.ಮೀ.ವರೆಗೆ ವಿಸ್ತರಿಸಿ 2ನೇ ಹಂತದ ಹೆಚ್ಚುವರಿ ಕಾಮಗಾರಿಗೆ ಅನುಮೋದನೆ ಪಡೆಯಲಾಗಿದೆ. ಇಷ್ಟರಲ್ಲೇ ಕೆಲಸ ಆರಂಭಿಸಿ ಆರು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.
> –ಯದುವೀರ್ ಒಡೆಯರ್, ಮೈಸೂರು–ಕೊಡಗು ಸಂಸದ

ಮೈಸೂರು, ಜ.2(ಆರ್‌ಕೆ)– ಜೆಎಸ್‌ಎಸ್ ಕಾಲೇಜಿಂದ ಬಂಡಿಪಾಳ್ಯ ಎಪಿಎಂಸಿವರೆಗೆ ಬೆಂಗಳೂರು–ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಇನ್ನು ಮುಂದೆ ವಾಹನ ಸಂಚಾರ ಸುಗಮಗೊಳ್ಳಲಿದೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI)ವು ಕೆಲ ವರ್ಷಗಳ ಹಿಂದೆ ಬೆಂಗಳೂರು–ಊಟಿ ಹೆದ್ದಾರಿಯಲ್ಲಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ವಾಹನ ಸಂಚಾರ ದಟ್ಟಣೆ ನಿವಾರಣೆಗೆ ಫ್ಲೈಓವರ್ ನಿರ್ಮಿಸಲು ಯೋಜನೆ ರೂಪಿಸಿತ್ತು. ಅದರ ಪ್ರಕಾರ ಎಪಿಎಂಸಿ ಮಾರುಕಟ್ಟೆಯ ಎರಡನೇ ಗೇಟ್‌ನಿಂದ ರಿಂಗ್ ರೋಡ್ ಜಂಕ್ಷನ್‌ವರೆಗೆ 950 ಮೀಟರ್ ಫ್ಲೈಓವರ್ ನಿರ್ಮಾಣವಾಗುತ್ತಿತ್ತು. ಪ್ರಾಧಿಕಾರವು ಟೆಂಡರ್ ಮೂಲಕ 37.3 ಕೋಟಿ ರೂ. ವೆಚ್ಚದ ಫ್ಲೈಓವರ್ ಕಾಮಗಾರಿಯನ್ನು 4 ತಿಂಗಳ ಹಿಂದೆ ಆರಂಭಿಸಿ ಈಗ ಅಂತಿಮ ಹಂತ ತಲುಪಿದೆ. ಅದರಲ್ಲಿ 12x20 ಮೀಟರ್ ಅಗಲದ ಪ್ರಮುಖ ಪಥ, 1x20 ಮೀಟರ್ ಅಗಲದ 2 ಅಂಡರ್‌ಪಾಸ್‌ಗಳನ್ನು ನಿರ್ಮಿಸಲಾಗಿದೆ. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು–ಕೊಡಗು ಸಂಸದರಾಗಿ ಆಯ್ಕೆಯಾದ ಬಳಿಕ ಸ್ಥಳ ಪರಿಶೀಲಿಸಿದಾಗ ಕೇವಲ ಎಪಿಎಂಸಿಯಿಂದ ರಿಂಗ್ ರೋಡ್ ಜಂಕ್ಷನ್‌ವರೆಗೆ ಮಾತ್ರ ಫ್ಲೈಓವರ್ ನಿರ್ಮಾಣವಾದರೆ ವಾಹನ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಯಾಗುವುದಿಲ್ಲ, ಬದಲಾಗಿ ಸಮಸ್ಯೆ ಇನ್ನಷ್ಟು ಉಲ್ಬಣವಾಗುತ್ತದೆ ಎಂಬುದನ್ನು ಮನಗಂಡು, ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಹಿರಿಯ ಅಧಿಕಾರಿಗಳನ್ನು ಕರೆಸಿ, ಮತ್ತೊಮ್ಮೆ ಪರಿಶೀಲನೆ ನಡೆಸಿ ಫ್ಲೈಓವರ್ ಅನ್ನು ಇನ್ನು ಅರ್ಧ ಕಿ.ಮೀ. ▶ 6ನೇ ಪುಟಕ್ಕೆ

ನಗರ ಪ್ರದೇಶದ ಜನಸಂಖ್ಯೆ ಹೆಚ್ಚಳ ಸಮಸ್ಯೆ ನಿವಾರಣೆ ಸಂಬಂಧ ಸೂಕ್ತ ಸಲಹೆ ನೀಡಿ

ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿದ್ಯಾರ್ಥಿಗಳಿಗೆ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ

ಮೈಸೂರು, ಜ.2(ಎಂಕೆ)–ನಗರ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿದ್ಯಾರ್ಥಿಗಳು, ಸೂಕ್ತ ಸಲಹೆಗಳನ್ನು ನೀಡಲು ಒಗ್ಗಟ್ಟಿನೊಂದಿಗೆ ಕಾರ್ಯೋನ್ಮುಖರಾಗ ಬೇಕು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕರೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಪ್ರೊ.ಕೆ.ಎಸ್.ರಂಗಪ್ಪ ಸಭಾಂಗಣದಲ್ಲಿ 'ನಗರ ಪ್ರದೇಶ ಮೌಲ್ಯಮಾಪನ ಮತ್ತು ಹವಾಮಾನ ಬದಲಾವಣೆ' ಕುರಿತ ಎರಡು ದಿನಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನಿಂದಲೇ ಸೃಷ್ಟಿಯಾಗಿರುವ ಸಮಸ್ಯೆಗಳಿಗೆ ಮನುಷ್ಯರಾದ ನಾವೇ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ ಎಂದರು.

ರಾಜರ ಕಾಲದಲ್ಲಿ ಮೈಸೂರಿನ ರಸ್ತೆಗಳು ವಿಶಾಲವಾಗಿದ್ದವು. ವಾಹನಗಳ ಸಂಖ್ಯೆಯೂ ಕಡಿಮೆ ಇತ್ತು. ಆದರೆ, ನಂತರದ ವರ್ಷಗಳಲ್ಲಿ ನಗರದತ್ತ ವಲಸೆ ಬರು ವವರ ಸಂಖ್ಯೆ ಹೆಚ್ಚಾಗಿರುವುದರಿಂದ ಟ್ರಾಫಿಕ್ ಜಾಮ್, ಉಷ್ಣಾಂಶ ಹೆಚ್ಚಳ, ಮಳೆಯ ಕೊರತೆ ಇನ್ನಿತರೆ ಸಮಸ್ಯೆಗಳು ಗಂಭೀರ ಸಮಸ್ಯೆಗಳು ಸೃಷ್ಟಿಯಾಗಿವೆ. ಆದ್ದರಿಂದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿದ್ಯಾರ್ಥಿಗಳು, ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಬೇಕು. ಮೈಸೂರು ವಿವಿ ಮಾನಸಗಂಗೋತ್ರಿ ಕ್ಯಾಂಪಸ್ ಅನ್ನು ಕೂಡ ಉತ್ತಮವಾಗಿ ನಿರ್ವಹಣೆ ಮಾಡುವ ಮಾರ್ಗೋಪಾಯಗಳನ್ನು ನೀಡಬೇಕು ಎಂದು ಹೇಳಿದರು.



ಮೈಸೂರು ವಿವಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದಲ್ಲಿ ಕಾರ್ಯಾಗಾರವನ್ನು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಗ್ರಾಮೀಣ ಭಾಗದಲ್ಲಿ ಇಂದಿಗೂ ಶುದ್ಧ ಗಾಳಿ, ಶುದ್ದ ನೀರು ದೊರೆಯುತ್ತದೆ. ಆದರೆ, ಬದುಕನ್ನು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ನಗರ ಪ್ರದೇಶದ ಕಡೆ ಬರುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಜನಸಂಖ್ಯೆ ಹೆಚ್ಚಿದಂತೆ ನಿರ್ವಹಣೆಯ ಮಾರ್ಗಗಳು ಬದಲಾಗಬೇಕು. ಇಲ್ಲವಾದರೆ ಸಮಸ್ಯೆಗಳ ನಡುವೆಯೇ ಮುಂದುವರೆಯಬೇಕಾಗುತ್ತದೆ. ಹಾಗಾಗಿ ಬದಲಾವಣೆ ಮಾಡುವ ನಿರ್ಧಾರ ಕೈಗೊಳ್ಳಬೇಕು. ಎಲ್ಲರೂ ಒಂದಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಬಳಿಕ ಬೆಂಗಳೂರಿನ ಪುರವಂಕರ ಅಂಡ್ ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್‌ನ ಇಎಸ್‌ಜಿ (ಪರಿಸರ, ಸಾಮಾಜಿಕ ಮತ್ತು ಆಡಳಿತ) ಮುಖ್ಯಸ್ಥ ಡಾ.ಎಸ್.ಗೋಪಿಪ್ರಸಾದ್, ನಗರ ಪ್ರದೇಶದಲ್ಲಾಗುತ್ತಿರುವ ಹವಾಮಾನ ಬದಲಾವಣೆ, ಹಸಿರು ಮನೆಗಳ ನಿರ್ಮಾಣದಿಂದಾಗುವ ಪರಿಣಾಮ ಮತ್ತು ಪರಿಹಾರ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಎಸ್‌ಪಿಎ ನಿರ್ದೇಶಕ ಪ್ರೊ.ಪ್ರಮೋದ್ ಎಂ. ಗವಾರಿ, ಯೋಜನಾ ವಿಭಾಗದ ಮುಖ್ಯಸ್ಥ ಪ್ರೊ.ಎಚ್.ಎನ್.ನಾಗೇಂದ್ರ, ಸಂಚಾಲಕ ಡಾ.ಹೆಚ್.ಎಸ್.ಕುಮಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜ್ಞಾನಪ್ರಕಾಶ ಸ್ವಾಮೀಜಿ ವಿರುದ್ಧ ಸುಳ್ಳು ಆರೋಪಕ್ಕೆ ಖಂಡನೆ

ಅನಗತ್ಯ ಆರೋಪ ಮಾಡುವವರ ವಿರುದ್ಧ ಪ್ರಕರಣ ದಾಖಲಿಸುವ ಎಚ್ಚರಿಕೆ

ಮೈಸೂರು,ಜ.2(ಎಂಕೆ)– ಮೈಸೂರು ಗಾಂಧಿನಗರದಲ್ಲಿರುವ ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರ ವಿರುದ್ಧ ಸುಳ್ಳು ಆರೋಪ ಮಾಡಿದರೆ ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಎಚ್ಚರಿಸಿದ್ದಾರೆ.

ಜಿಲ್ಲೆಯ ದುದ್ದಗೆರೆ ಗ್ರಾಮದ 26 ಎಕರೆ 20 ಗುಂಟೆ ಜಮೀನಿನ ವಿಚಾರವಾಗಿ ಚೋರನಹಳ್ಳಿ ಶಿವಣ್ಣ ಸೇರಿ ಕೆಲವರು ಜ್ಞಾನಪ್ರಕಾಶ ಸ್ವಾಮೀಜಿ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಅವ್ಯವಹಾರದಿಂದ ಉಚ್ಚಾಟಿತರಾಗಿರುವ ಶ್ರೀ ಶಿವಲಿಂಗಸ್ವಾಮಿ, ಸುಳ್ಳು ಆರೋಪ ಮಾಡುತ್ತ ಸಮುದಾಯದ ಜನರಿಗೆ ನೋವುಂಟು ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.



ಎನ್.ಭಾಸ್ಕರ್

ದುದ್ದಗೆರೆ ಭಾಗದ ಕೆಲ ರೈತರು 1941ರಿಂದ ಇಲ್ಲಿವರೆಗೂ 26 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಅದರಲ್ಲಿ ಚೋರನಹಳ್ಳಿ ಶಿವಣ್ಣ 6 ಎಕರೆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದು, ಮಠಕ್ಕೆ ನಯಾ ಪೈಸೆಯನ್ನು ನೀಡಿಲ್ಲ. ಹಾಗಾಗಿ ಜ್ಞಾನಪ್ರಕಾಶ ಸ್ವಾಮೀಜಿಯವರು ಜಮೀನಿನ ಆಸ್ತಿಯನ್ನು ಸದ್ಬಳಕೆ ಮಾಡಿಕೊಂಡು ಶಿಕ್ಷಣ ಸಂಸ್ಥೆ ಆರಂಭಿಸಲು ಸ್ವಾಮೀಜಿ ಮುಂದಾಗಿರುವುದನ್ನು ಸಹಿಸದೇ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ. ಮಠದ ಹೆಸರಿನಲ್ಲಿಯೇ ಜಮೀನಿನ ದಾಖಲಾತಿ ಇದೆ. ಜಮೀನು ವಿವಾದ ಸಂಬಂಧ ಹೈಕೋರ್ಟ್‌ನಲ್ಲಿಯೂ ಮಠದ ಪರವಾಗಿ ತೀರ್ಪು ಬಂದಿದೆ. ಆದಾಗ್ಯೂ ಜ್ಞಾನಪ್ರಕಾಶ್ ಸ್ವಾಮೀಜಿ ವಿರುದ್ಧ ಆರೋಪಿಸುತ್ತಿರುವುದು ಸರಿಯಲ್ಲ. ಬೇಕಿದ್ದರೆ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಲಿ. ಇಲ್ಲವಾದರೆ ಆರೋಪಿಸುವವರ ವಿರುದ್ಧವೇ ಪ್ರಕರಣ ದಾಖಲಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಕೆ ನೀಡಿದ್ದಾರೆ.

2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ...



ಮೈಸೂರು ವಿಭಾಗೀಯ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಮೊಸಂಬಾಯನಹಳ್ಳಿ ಸಮೀಪದ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿ, ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಹೆಚ್.ಕೆ.ರಾಮು, ಶ್ರೀಮತಿ ಪ್ರಮೀಳಾರಾಮು, ಖಜಾಂಚಿ ಲಕ್ಷ್ಮಿ ಕಾಂತ್, ವ್ಯವಸ್ಥಾಪಕ ರಾಮಚಂದ್ರು, ಕಾರ್ಯದರ್ಶಿ ಜಿ.ಎಲ್.ಶಿವಣ್ಣ, ನಿರ್ದೇಶಕರಾದ ದಮಯಂತಿ, ರಾಜು, ಎನ್‌ಸಿಸಿ ರಾಜು, ವಕೀಲ–ಆಡಿಟರ್ ಗಂಗಾಧರಗೌಡ ಇನ್ನಿತರರು ಉಪಸ್ಥಿತರಿದ್ದರು.




ಮೈಸೂರು ತಾಲೂಕು ಗ್ರಾಮ ಆಡಳಿತ ಅಧಿಕಾರಿಗಳ ಸಂಘದ 2026ನೇ ಕ್ಯಾಲೆಂಡರ್ ಅನ್ನು ಮೈಸೂರು ತಾಲೂಕು ತಹಶೀಲ್ದಾರ್ ಮಹೇಶ್‌ಕುಮಾರ್ ಬಿಡುಗಡೆಗೊಳಿಸಿದರು. ಸಂಘದ ಅಧ್ಯಕ್ಷ ಎಂ.ವಿ.ಭಾಸ್ಕರ, ಉಪಾಧ್ಯಕ್ಷ ಜಗದೀಶ್, ಪ್ರಧಾನ ಕಾರ್ಯದರ್ಶಿ ಡಿ.ಮಹೇಶ, ಶಿರಸ್ತೇದಾರ್ ಎಂ.ನಿಂಗಪ್ಪ, ಟಿ.ಎನ್.ಲೋಕೇಶ್, ಪ್ರಶಾಂತ್ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರಿನ ಗಾಂಧಿನಗರದ ಶ್ರೀ ಧನಶಕ್ತಿ ಕೋ–ಆಪರೇಟಿವ್ ಸೊಸೈಟಿಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಈ ವೇಳೆ ಮಾಜಿ ಶಾಸಕ ಎನ್.ಮಹೇಶ್, ಮಾಜಿ ಮೇಯರ್ ಸಂದೇಶಸ್ವಾಮಿ, ಡಾ.ಅನಿಲ್ ಥಾಮಸ್, ಸಾಮಾಜಿಕ ಕಾರ್ಯಕರ್ತ ಪರಮಾನಂದ, ಯುವ ವಿಜ್ಞಾನಿ ಡಾ.ನವೀನ್ ಮೌರ್ಯ, ಧನಶಕ್ತಿ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಶರತ್ ಸತೀಶ್, ಸೊಸೈಟಿ ನಿರ್ದೇಶಕಿ ಹಾಗೂ ನಗರಪಾಲಿಕೆ ಮಾಜಿ ಸದಸ್ಯರಾದ ಡಾ.ಅಶ್ವಿನಿ, ನಿರ್ದೇಶಕರಾದ ದೇವರಾಜು, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ರಾಮಾನುಜಮ್



ಅರುಣ್‌ಕುಮಾರ್



ನಿಶಾಂತ್



ಶಶಾಂಕ್

ಮೈಸೂರು, ಜ.2– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜ.3ರಂದು ಶನಿವಾರ ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–287ರ ಅಂಗವಾಗಿ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂ ಅವರಿಂದ ವೇಣು ವಾದನ ಏರ್ಪಡಿಸಲಾಗಿದೆ.

ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂ ಅವರು ಅರಕಲಗೂಡು ತಾಲೂಕು ರುದ್ರಪಟ್ಟಣದವರು. ವಿದ್ವಾನ್ ಪಾಲ್‌ಘಾಟ್ ಕೆ.ವಿ. ನಾರಾಯಣಸ್ವಾಮಿಯವರ ಬಳಿ ಕರ್ನಾಟಕ ಸಂಗೀತ, ಪಂ. ಜಸರಾಜ್‌ರವರ ಬಳಿ ಹಿಂದೂಸ್ತಾನಿ ಸಂಗೀತದ ಶಿಷ್ಯವೃತ್ತಿ. 6ನೆಯ ವರ್ಷಕ್ಕೇ ಸಂಗೀತದ ಕಲಿಕೆ. 12ನೆಯ ವಯಸ್ಸಿನಲ್ಲಿಯೇ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಲ್ಲಿ ಸಾರ್ವಜನಿಕ ಕಛೇರಿ ನೀಡಿದ ಬಾಲಪ್ರತಿಭೆ. ಕಿರಿಯ ವಯಸ್ಸಿಗೇ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದು, ಫ್ರಾನ್ಸ್ ದೇಶದ ಅತ್ಯುತ್ಕೃಷ್ಟ ಸಾಂಸ್ಕೃತಿಕ ಪ್ರಶಸ್ತಿಗೆ ಭಾಜನರಾದದ್ದು ಇವರ ಕಲಾಜೀವನದ ಪ್ರಮುಖ ಘಟನೆಗಳು. ವೇಣುವಾದನವನ್ನು ಬಹುಮಟ್ಟಿಗೆ ಸ್ವತಃ ರೂಢಿಸಿಕೊಂಡ ಈ ವಿದ್ವಾಂಸರನ್ನು "ಸ್ವಯಮಾಚಾರ್ಯ"ರೆಂದು ಕರೆಯಬಹುದಾಗಿದೆ. ಇವರ ಪತ್ನಿ ಶ್ರೀಮತಿ ಶಿರೀಷಾರವರು ಭರತನಾಟ್ಯ ಕಲಾವಿದರು.

ವಯೋಲಿನ್ ವಾದನ ನೀಡಲಿರುವ ವಿದ್ವಾನ್ ನಿಶಾಂತ್ ಚಂದ್ರನ್, ಕಂಪ್ಯೂಟರ್ ವಿಜ್ಞಾನ, ಶಿಕ್ಷಣ–ಈ ಮೂರು ಆಯಾಮಗಳಲ್ಲೂ ತಜ್ಞತೆಯ ವಿಶಿಷ್ಟ ವ್ಯಕ್ತಿತ್ವ ವಯೊಲಿನ್ ವಿದ್ವಾಂಸರುಗಳಾದ ಸಂಗೀತಕಲಾನಿಧಿ ಎ.ಕನ್ಯಾಕುಮಾರಿ ಮತ್ತು ಪದ್ಮಭೂಷಣ ಪಿ.ಎಸ್.ನಾರಾಯಣಸ್ವಾಮಿಯವರ ಹಿರಿಯ ಶಿಷ್ಯರು. ತಿಲ್ಲೈಸ್ಥಾನಂ ರಾಮ ಅಯ್ಯಂಗಾರ್‌ರವರ ವಿಶಿಷ್ಟ ಶೈಲಿಯ ವಾರಸುದಾರರು. ಅಂತಾರಾಷ್ಟ್ರೀಯ ಖ್ಯಾತಿಯ ಸಿತಾರ್ ಮಾಂತ್ರಿಕ ಪಂ. ರವಿಶಂಕರ್‌ರವರು 2009ರಲ್ಲಿ ಲಾಸ್ ಏಂಜಲೀಸ್‌ನ ಹಾಲಿವುಡ್ ಚಾನಲ್‌ನಲ್ಲಿ ಕಾರ್ಯಕ್ರಮ ನೀಡಿದಾಗ ಅವರ ತಂಡದ ಭಾಗವಾಗಿದ್ದದ್ದು ಇವರ ಅತ್ಯುನ್ನತ ಸಾಧನೆ.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ಅರ್ಜುನ್ ಕುಮಾರ್ ಹಿರಿಯ ಮೃದಂಗ ಕಲಾವಿದರು. ತಂದೆ ವಿದ್ವಾನ್ ಅರ್ಜುನ್‌ರವರ ಬಳಿ ಪ್ರಾರಂಭಿಕ ಶಿಕ್ಷಣ, ಅನಂತರ ಲಯವಾದ್ಯ ಪ್ರವೀಣ ವಿದ್ವಾನ್ ಟಿ.ಎ.ಎಸ್.ಮಣಿಯವರಲ್ಲಿ ಶಿಕ್ಷಣ ಮುಂದುವರಿಕೆ. ಸಂಪ್ರದಾಯದಲ್ಲಿ ನಿಷ್ಠೆ, ನಾವೀನ್ಯತೆಯ ಅನ್ವೇಷಣೆ ಇವರ ವೈಶಿಷ್ಟ್ಯಗಳು. ಕೇಂದ್ರ ಸರ್ಕಾರದ ಶಿಷ್ಯವೇತನ ಪಡೆದು ಪದ್ಮಭೂಷಣ ಸಂಗೀತಕಲಾನಿಧಿ ಡಾ.ಉಮಯಾಳಪುರಂ ಕೆ.ಶಿವ ರಾಮನ್‌ರವರ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ.

ಘಟಂ ಸಹಕಾರ ನೀಡಲಿರುವ ವಿದ್ವಾನ್ ಜಿ.ಎಸ್.ರಾಮಾನುಜಂ, ಸಂಗೀತಗಾರರ ಮನೆತನದಿಂದ ಬಂದ ಪ್ರತಿಭಾನ್ವಿತ ಹಿರಿಯ ಕಲಾವಿದರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣ್ ರವರ ಶಿಷ್ಯರು. ದೇಶವಿದೇಶಗಳ ಹಲವಾರು ಕಚೇರಿಗಳಲ್ಲಿ ಖ್ಯಾತ ಸಂಗೀತಗಾರರಿಗೆ ಮೃದಂಗ ಹಾಗೂ ಘಟಂ ಸಹಕಾರ ನೀಡಿದ್ದಾರೆ.

ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ರೇಷ್ಮೆ ಸೀರೆಗಳು, ಕೈಮಗ್ಗ ವಸ್ತುಗಳ ಪ್ರದರ್ಶನ–ಮಾರಾಟ ಮೇಳ

ಮೈಸೂರು,ಜ.2–ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ವತಿಯಿಂದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ರೇಷ್ಮೆ ಸೀರೆಗಳು, ಕೈಮಗ್ಗ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಜ.4ರಿಂದ 17ರವರೆಗೆ ಏರ್ಪಡಿಸಲಾಗಿದೆ.

ಸಿಲ್ಕ್ ಫ್ಯಾಬ್ ಮೇಳದಲ್ಲಿ ದೇಶದ ಸುಮಾರು 60ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟಗೊಳ್ಳುತ್ತಿದೆ.

ಮೇಳವನ್ನು ಜ.5ರಂದು ಸಂಜೆ 4 ಗಂಟೆಗೆ ಕಂದಾಯ ಇಲಾಖೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಉದ್ಘಾಟಿಸು ವರು. ಈ ಮೇಳಕ್ಕೆ ಉಚಿತ ಪ್ರವೇಶವಿದ್ದು ಬೆಳಗ್ಗೆ 10ರಿಂದ ರಾತ್ರಿ 9ರ ತನಕ ಕೈಮಗ್ಗ ಉತ್ಪನ್ನಗಳನ್ನು ಖರೀದಿಸಲು ಅವಕಾಶವಿದೆ.

ಇಂದು ಸೌಹಾರ್ದ ಸಹಕಾರಿ ದಿನಾಚರಣೆ; ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಜ.2(ಎಂಟಿವೈ)– ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮಾನಿಕೇತನ ಕಲ್ಯಾಣ ಮಂಟಪದಲ್ಲಿ ಜ.3ರಂದು ಸಂಜೆ 4ಕ್ಕೆ ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಎಂ.ಎಂ.ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಡೈರಿ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಸಂಘಟಿತ ಕಾರ್ಮಿಕ ಕಾರ್ಡ್ ವಿತರಿಸಲಿದ್ದಾರೆ. ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಕಾನೂನು ಸಲಹೆಗಾರ ಎಸ್.ಟಿ.ಗುರುರಾಜ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಸಂಘದ ಅಧ್ಯಕ್ಷ ಎಂ.ಎಸ್.ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಂಘದ ಉಪಾಧ್ಯಕ್ಷ ಸಿ. ಅಭಿನಂದನ್ ಮಾತನಾಡಿ, ಪ್ರತಿಭಾ ಪುರಸ್ಕಾರ, ಛಾಯಾ ಸಾಧಕರಿಗೆ ಗೌರವ, ಉನ್ನತ ಶಿಕ್ಷಣ ಪಡೆದವರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ ಇರಲಿವೆ ಎಂದರು. ಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘದ ಪದಾಧಿಕಾರಿಗಳಾದ ಎಂ.ಎಸ್.ಶ್ರೀನಿಧಿ, ಜಿ.ಟಿ.ಸುರೇಶ್ ಕುಮಾರ್, ಎಚ್.ಎನ್.ಶ್ರೀನಿವಾಸ್ ಇದ್ದರು.

ನಾಳೆ ಲಯನ್ಸ್ ಇಂಟರ್‌ನ್ಯಾಷನಲ್ ಪ್ರಾಂತೀಯ ಸಮ್ಮೇಳನ

ಮೈಸೂರು,ಜ.2(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ ಜ.4ರಂದು ಬೆಳಗ್ಗೆ 8.30ಕ್ಕೆ ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ರ ಪ್ರಾಂತೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಲಯನ್ಸ್ ಸಂಸ್ಥೆಯ ಪ್ರಾಂತೀಯ ಅಧ್ಯಕ್ಷ ಪಿ.ಹೊನ್ನರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ರ ಪ್ರಾಂತೀಯ ಸಮ್ಮೇಳನದಲ್ಲಿ ರಂಗಾಯಣದ ಮಾಜಿ ನಿರ್ದೇಶಕ ಡಾ.ಹೆಚ್.ಜನಾರ್ಧನ್(ಜನ್ನಿ) 'ಮಾನವೀಯತೆ ಮೊದಲ ಆದ್ಯತೆ' ವಿಷಯ ಕುರಿತು ಮಾತನಾಡುವರು, ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಡಾ.ಎನ್.ಕೃಷ್ಣಗೌಡ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರಾಂತೀಯ ಅಧ್ಯಕ್ಷ ಲಯನ್ ಪಿ.ಹೊನ್ನರಾಜು ವಹಿಸಲಿದ್ದಾರೆ.

ಸಮ್ಮೇಳನದಲ್ಲಿ 1.75 ಲಕ್ಷ ರೂ. ಮೌಲ್ಯದ 35 ಕೃತಕ ಕಾಲನ್ನು ವಿಕಲಚೇತನರಿಗೆ ವಿತರಿಸಲಾಗುವುದು. ಸಂತೆ ಸರಗೂರಿನ ಶಾಲಾ ಕಟ್ಟಡ ಅಭಿವೃದ್ಧಿಗೆ 50 ಸಾವಿರ ರೂ.,ಗಳ ಚೆಕ್, ಓರ್ವ ಬಡ ಮಹಿಳೆಗೆ 1 ಹೊಲಿಗೆ ಯಂತ್ರ ವಿತರಿಸಲಾಗುವುದು. ಜೀವಮಾನ ಸಾಧನೆ ಪ್ರಶಸ್ತಿಗಳನ್ನು ಎಂ. ಪಂಚಲಿಂಗೇಗೌಡ, ವೀಣಾ ಅಶೋಕ್, ಎಚ್. ಖುಷಿ, ಕೆ.ಪಿ. ಶಿವಪ್ರಸಾದ್ ಹಾಗೂ ಲಯನ್ ಜೈಪ್ರಕಾಶ್ ಅವರಿಗೆ ಪ್ರದಾನ ಮಾಡುತ್ತಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಲಯನ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಎಂ.ಎನ್.ಜೈಪ್ರಕಾಶ್, ಎಂ.ವಿ. ನಂದೀಶ್, ಸಿ.ಶಂಕರ್ ಇನ್ನಿತರರಿದ್ದರು.

ನಿಧನ

ಎಸ್.ಕುಮಾರ್



ಮೈಸೂರು ಜ. 2– ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಎಸ್.ಕುಮಾರ್ (70) ಅವರು ಗುರುವಾರ (ಜ.1) ನಿಧನರಾದರು.

ಇವರು ಪತ್ನಿ ವಿನೋಧ ಕುಮಾರಿ, ಪುತ್ರ ಸತ್ಯನಾರಾಯಣ ಸ್ವಾಮಿ, ಪುತ್ರಿ ಕೆ. ಲಕ್ಷ್ಮೀ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ ಬನ್ನಿಮಂಟಪದ ಜೋಡಿ ತೆಂಗಿನಮರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.1.2026 ಶನಿವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಕೋ–ಆಪ್ಟೆಕ್ಸ್ :** ಸಂಕ್ರಾಂತಿ ಹಬ್ಬದ ಪ್ರಯುಕ್ತ ವಿಶೇಷ ಪ್ರದರ್ಶನ ಮಾರಾಟ ಮೇಳ, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ :** ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಮತ್ತು ಗಣಿತ ಸಂವಾದ ಕಾರ್ಯಕ್ರಮ, ಉಪಸ್ಥಿತರು: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ. ವೆಂಕಟರಾಮಯ್ಯ, ಪ್ರೊ.ಕೆ.ಎಸ್.ಮಲ್ಲೇಶ್, ಡಾ.ಭಾಗ್ಯಲಕ್ಷ್ಮಿ, ಪ್ರೊ.ಎಸ್.ಎನ್.ಹೆಗ್ಗಡೆ, ಪ್ರೊ.ರಂಗರಾಜನ್, ಪ್ರೊ.ಎಂ.ಎಸ್.ಚಂದ್ರಶೇಖರ್, ಸ್ಥಳ: ಮಾನಸಗಂಗೋತ್ರಿ ವಿಜ್ಞಾನ ಭವನ, ಬೆಳಗ್ಗೆ 10ರಿಂದ.
- **ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನಾ–ವಿಸ್ತರಣಾ ಕೇಂದ್ರ:** ಭಾರತದ ಸಂವಿಧಾನ ಮತ್ತು ಸಾಮಾಜಿಕ ನ್ಯಾಯ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ವಕೀಲ ಎಂ.ಶಿವಪ್ರಸಾದ್, ವಿಶೇಷ ಅತಿಥಿಗಳು: ಡಾ.ಚಂದ್ರಯ್ಯ ಗೋಪಾನಿ, ಅಧ್ಯಕ್ಷತೆ : ಕೇಂದ್ರದ ನಿರ್ದೇಶಕ ಪ್ರೊ. ಕೆ. ಸದಾಶಿವ, ಸ್ಥಳ: ಬಾಬೂ ಜಗಜೀವನರಾಮ್ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಸುಧರ್ಮಾ ಸಂಸ್ಕೃತ ದಿನಪತ್ರಿಕೆ:** ಸುಧರ್ಮಾ ಕನ್ನಡ ದಿನದರ್ಶಿನಿ ಲೋಕಾರ್ಪಣೆ ಸಮಾರಂಭ, ದಿನದರ್ಶಿನಿ ಬಿಡುಗಡೆ : ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಸ್.ಹೆಚ್. ನಿರ್ಮಲಾ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ, ಮುಖ್ಯ ಭಾಷಣಕಾರರು: ಪತ್ರಿಕೆ ಗೌರವ ಸಂಪಾದಕ ವಿದ್ವಾನ್ ಡಾ.ಸತ್ಯನಾರಾಯಣ, ಸ್ಥಳ: ಪತ್ರಕರ್ತರ ಭವನ, ಬೆಳಗ್ಗೆ 11.30ಕ್ಕೆ.
- **ನುಡಿ ಪ್ರತಿಷ್ಠಾನ:** ಬೊಗಸೆಯಲ್ಲಿ ಕುವೆಂಪು ಕೃತಿ ಮತ್ತು ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಪ್ರಾಸ್ತಾವಿಕ ನುಡಿ :ಪ್ರತಿಷ್ಠಾನ ಕಾರ್ಯಾಧ್ಯಕ್ಷ ಡಾ.ರಕ್ಷಿತ್, ಅಧ್ಯಕ್ಷತೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ.ತಳವಾರ, ಕೃತಿ ಕುರಿತು : ಹಿರಿಯ ಸಂಶೋಧಕರಾದ ಡಾ.ಮಾಲಿನಿ ಎನ್.ಅಭ್ಯಂಕರ್, ಉಪಸ್ಥಿತರು : ಡಾ.ಬಿ.ಜೆ. ಕನಕೇಶ ಮೂರ್ತಿ, ಡಾ. ಯಲ್ಲವ್ವ ಹೆಬ್ಬಳ್ಳಿ, ಸ್ಥಳ: ಪತ್ರಿಕಾ ಭವನ, ಮಧ್ಯಾಹ್ನ 12ಕ್ಕೆ
- **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಜಿಲ್ಲಾ ಪ್ರಚಾರ ಸಮಿತಿ ಸಭೆ, ಉದ್ಘಾಟನೆ: ಮಾಜಿ ಸಚಿವ ವಿನಯ್‌ಕುಮಾರ್‌ಸೊರಕೆ, ಮುಖ್ಯ ಅತಿಥಿಗಳು: ಎಂಎಲ್‌ಸಿ ಡಾ.ಯತೀಂದ್ರ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಸ್ಥಳ: ನಗರ ಕಾಂಗ್ರೆಸ್ ಭವನ, ಮಧ್ಯಾಹ್ನ 3ಕ್ಕೆ.
- **ಶ್ರೀ ನಟರಾಜ ಪಬ್ಲಿಕ್ ಸ್ಕೂಲ್ :** ನಟರಾಜ ವೈಭವ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ: ನಿತೇಶ್ ಪಾಟೀಲ್, ಮುಖ್ಯ ಅತಿಥಿಗಳು: ಡಿಡಿಪಿಐ ಡಿ.ಉಯದಕುಮಾರ್, ಅಮ್ಮ ಜಿ.ರಾಮಚಂದ್ರ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಕೂಲ್ ಪ್ರಿನ್ಸಿಪಾಲ್ ಪವಿತ್ರ, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3.30ಕ್ಕೆ.
- **ಸಾಧನ ಮಂದಿರ, ಮೈಸೂರು:** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.
- **ಶ್ರೀ ವಿವೇಕ ವಿದ್ಯಾಲಯ ಗ್ಲೋಬಲ್ ಇಂಗ್ಲೀಷ್ ಸ್ಕೂಲ್ :** ವಿವೇಕ ದರ್ಪಣಂ, ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಪ್ರಿನ್ಸಿಪಾಲ್ ಡಾ. ಪಿ.ಸುಮಾರಾಣಿ ಶಂಭು, ವೈಭವ್ ವಿ.ಬಾಡ್ಕರ್, ಅಧ್ಯಕ್ಷತೆ: ಸ್ಕೂಲ್ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ, ಸ್ಥಳ: ಸ್ಕೂಲ್ ಆವರಣ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ– ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಪ್ರಥಮ ಭಾಷೆ ಕನ್ನಡ, ಭಾಗವಹಿಸುತ್ತಾರೆ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಚಿನಕುರಳಿಯ ಎಸ್.ಟಿ.ಜಿ. ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕರಾದ ವಿ.ಶ್ರೀಧರ್, ಪ್ರಸ್ತುತಿ– ದಿಗ್ವಿಜಯ್ .ಬಿ., 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ವಿ. ರಮಾಮಣಿ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, 8.00 ಸವಿನೆನಪು, 9.30 ತ್ಯಾಗರಾಜರ ಆರಾಧನ ಮಹೋತ್ಸವದ ನೇರ ಪ್ರಸಾರ

- **ಫ್ಯೂಚರ್ ಫೌಂಡೇಷನ್ ಮಾಂಟೆಸ್ಸರಿ ಸ್ಕೂಲ್:** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಸಾಹಿತಿ ಡಾ. ಹಾಲತಿ ಸೋಮಶೇಖರ್, ಉಪಸ್ಥಿತರು : ಪ್ರಿನ್ಸಿಪಾಲ್ ಎನ್.ಎಂ. ಶಿವಪ್ರಕಾಶ್, ಉಪನ್ಯಾಸಕ ಎ.ಎಲ್. ಉಮೇಶ್, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 4.30ಕ್ಕೆ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–913, ಕಥೆ ಹೇಳುವವರು: ಶ್ರೀಮತಿ ಇಂದ್ರಾಣಿ ಜೆ, ಪ್ರಭಾರ ಮುಖ್ಯ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜ್ಯೋತಿನಗರ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಮಹರ್ಷಿ ಪಬ್ಲಿಕ್ ಸ್ಕೂಲ್ :** ಮಹರ್ಷಿ ಪರಂಪರೆ–32, ವಾರ್ಷಿಕೋತ್ಸವ– ಮಹರ್ಷಿ ಬಳಗದ ಮಹೋತ್ಸವ, ಸಾನ್ನಿಧ್ಯ: ಸ್ವಾಮಿ ಇಷ್ಟಾನಾಥಾನಂದಜೀ ಮಹಾರಾಜ್, ಗೌರವ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮಹರ್ಷಿ ಶಿಕ್ಷಣ ಸಂಸ್ಥೆ ಮ್ಯಾನೇಜಿಂಗ್ ಟ್ರಸ್ಟಿ ಡಾ. ಭವಾನಿ ಶಂಕರ್, ಸ್ಥಳ: ಮಹರ್ಷಿ ಸ್ಕೂಲ್ ಆವರಣ, ವಿಶ್ವೇಶ್ವರನಗರ, ಸಂಜೆ 4.45ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ – ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ :** ಪ್ರತಿ ಹುಣ್ಣಿಮೆಯಂದು ಜರುಗಲಿರುವ ಉಪನ್ಯಾಸ ಕಾರ್ಯಕ್ರಮ ತಿಂಗಳ ತಿಳಿವು, ಬೆಳಗ್ಗೆ 6 ರಿಂದ ರಮೇಶ ಹಾಗೂ ಡಿ.ಟಿ. ಗೋಪಿನಾಥ ತಂಡದವರಿಂದ ಭಜನೆ ಮತ್ತು ವಚನವೇದ, ಪಠಣ, ಭಜನಾ, ಸುಪ್ರಭಾತ, ಸಂಜೆ 6 ರಿಂದ ಸಂಗೀತ ಕಾರ್ಯಕ್ರಮ, ಸಂಜೆ 6.30 ರಿಂದ ಸಭಾ ಕಾರ್ಯಕ್ರಮ, ದಿವ್ಯ ಆಶೀರ್ವಾದ : ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ : ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವ ಜಯಾನಂದಜೀ ಮಹಾರಾಜ್, ಉಪಸ್ಥಿತರು : ಮಾಜಿ ಎಂಎಲ್‌ಸಿ ಡಿ. ಮಾದೇಗೌಡ, ಡಾ. ಎಸ್.ಪಿ. ಯೋಗಣ್ಣ, ಬಸವಣ್ಣ, ಎಸ್. ಪುರುಷೋತ್ತಮ್, ಪ್ರೊ.ಜಿ. ಚಂದ್ರಶೇಖರ್, ಕೆ. ಕೆಂಪರಾಜು, ಶ್ರೀಮತಿ ಅಮೃತ, ಬೋರೇಗೌಡ, ಸ್ಥಳ: ಪರಮಹಂಸ ಧ್ಯಾನ ಕೇಂದ್ರ, ರಾಮಕೃಷ್ಣನಗರ ವೃತ್ತದ ನೆಲಮಹಡಿ.
- **ದೀಕ್ಷಿತ್ ಆರೋಗ್ಯ ಧಾಮ :** ಆನಂದ ಆರೋಗ್ಯ ಪುಷ್ಯ ಹುಣ್ಣಿಮೆ ಅಂಗವಾಗಿ ಕೆ.ವಿ. ಮಹಾಬಲ ಅವರಿಂದ ಸಿತಾರ್ ವಾದನ, ಕಾರ್ತಿಕ್ ಕೃಷ್ಣ–ತಬಲ, ಡಾ. ಅಜಯ್ ಕೌಶಿಕ್ ಅವರಿಂದ ಸಾಮಾನ್ಯವಾಗಿ ವೃದ್ಧಾಪ್ಯದಲ್ಲಿ ಕಂಡು ಬರುವ ಸಂಧಿ–ಕೀಲುಗಳ ಸಮಸ್ಯೆಗಳು ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.
- **ಮೈಸೂರು ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–287ರ ಅಂಗವಾಗಿ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂ ಅವರಿಂದ ವೇಣು ವಾದನ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ನಿಶಾಂತ್ ಚಂದ್ರನ್–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಬಳ್ಳಾರಿ ಗಲಭೆ ಪ್ರಕರಣ

ಜನಾರ್ದನ ರೆಡ್ಡಿ, ಶ್ರೀರಾಮುಲುಗೆ ಪ್ರಾಣಾಪಾಯ; ಸೂಕ್ತ ರಕ್ಷಣೆಗೆ ಬಿಜೆಪಿ ಆಗ್ರಹ

- ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ವಿಪಕ್ಷ ನಾಯಕ ಅಶೋಕ್ ಒತ್ತಾಯ
- ಗೂಂಡಾ ಕಾಯ್ದೆಯಡಿ ಕಾಂಗ್ರೆಸ್ ಕಾರ್ಯಕರ್ತರ ಬಂಧನಕ್ಕೆ ಪಟ್ಟು

ಬೆಂಗಳೂರು, ಜ.2(ಕೆಎಂಶಿ)–ಮಾಜಿ ಸಚಿವ ಮತ್ತು ಶಾಸಕ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರಿಗೆ ಪ್ರಾಣಾಪಾಯವಿದ್ದು, ಪೊಲೀಸ್ ರಕ್ಷಣೆ ನೀಡಬೇಕು ಹಾಗೂ ಬಳ್ಳಾರಿಯಲ್ಲಿ ನಡೆದ ಅಹಿತಕರ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಆಗ್ರಹಿಸಿದ್ದಾರೆ.


ಆರ್.ಅಶೋಕ್

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಾರ್ದನ ರೆಡ್ಡಿ ಬೆಂಬಲಿಗರ ಮನೆಗೆ ಅಕ್ರಮವಾಗಿ ನುಗ್ಗಿದ ಕಾಂಗ್ರೆಸ್ ಕಾರ್ಯಕರ್ತರನ್ನು ಗೂಂಡಾ ಕಾಯ್ದೆಯಡಿ ಕೂಡಲೇ ಬಂಧಿಸಬೇಕು. ಬಳ್ಳಾರಿ ಘಟನಾವಳಿಯಿಂದ ಒಬ್ಬ ವ್ಯಕ್ತಿ ಪ್ರಾಣ ಕಳೆದುಕೊಳ್ಳಲು ಕಾರಣರಾದ ಶಾಸಕ ಭರತ್ ರೆಡ್ಡಿಯನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಜನಾರ್ದನ ರೆಡ್ಡಿ ಹತ್ಯೆಗೆ ಕಾಂಗ್ರೆಸ್ ನವರು ಸಂಚು ರೂಪಿಸಿದ್ದರು. ಬಳ್ಳಾರಿಯಲ್ಲಿ ಕಾಂಗ್ರೆಸ್ ಗೂಂಡಾಗಳು ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಮೇಲೆ ಗುಂಡಿನ ದಾಳಿ ಮಾಡಿರುವುದು ರಾಜ್ಯವನ್ನು ಬೆಚ್ಚಿ ಬೀಳಿಸಿದೆ.

ಹೊಸ ವರ್ಷಾಚರಣೆ ವೇಳೆ ದುರ್ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸರಿಗೆ ಸೂಚಿಸಿದ ಒಂದೇ ದಿನದಲ್ಲಿ ಬಳ್ಳಾರಿಯಲ್ಲಿ ಗುಂಡುಗಳ ದಾಳಿ ನಡೆದಿರುವುದು ಕಾನೂನು ಸುವ್ಯವಸ್ಥೆ ಕುಸಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಒಂದೆಡೆ ಪೊಲೀಸರು ಕಳ್ಳತನ ಮಾಡಿ ಸಿಕ್ಕಿ ಹಾಕಿಕೊಳ್ಳುತ್ತಿದ್ದಾರೆ. ಆಂಧ್ರ ಮಾದರಿಯ ರಕ್ತಚರಿತ್ರೆ ಕರ್ನಾಟಕಕ್ಕೂ ಕಾಲಿಟ್ಟಿದೆ. ರಾಜಕೀಯ ದ್ವೇಷದಿಂದ ಗುಂಡು ಹಾರಿಸುವ ಸಂಸ್ಕೃತಿ ಕರ್ನಾಟಕದಲ್ಲಿ ಇರಲಿಲ್ಲ. ಕಾಂಗ್ರೆಸ್‌ನವರು ಅದಕ್ಕೂ ನಾಂದಿ ಹಾಡಿದ್ದಾರೆ ಎಂದರು.

ಜನಾರ್ದನ ರೆಡ್ಡಿ ಮನೆ ಕಾಂಪೌಂಡ್ ಬಳಿ ಫ್ಲೆಕ್ಸ್ ಹಾಕಿದ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದೆ. ನಂತರ ಪೊಲೀಸರು ಫ್ಲೆಕ್ಸ್ ತೆರವುಗೊಳಿಸಿದ್ದಾರೆ.

ಇದರಿಂದ ಕೆರಳಿದ ಶಾಸಕ ಸತೀಶ್ ರೆಡ್ಡಿ ಬೆಂಬಲಿಗರು ರಸ್ತೆಯಲ್ಲೇ ಕಾಲ ಮೇಲೆ ಕಾಲು ಹಾಕಿ ಕುಳಿತು ಗೇಟ್ ಒಳಗೆ ನುಗ್ಗಿ ಫ್ಲೆಕ್ಸ್ ಕಟ್ಟಿಸಿದ್ದಾರೆ. ಈ ಬಗ್ಗೆ ದೂರು ನೀಡಿದ್ದರಲ್ಲಿ ತಪ್ಪೇನಿದೆ, ಘಟನೆ ನಡೆದಾಗ ಜನಾರ್ದನ ರೆಡ್ಡಿ ಮನೆಯಲ್ಲಿ ಇರಲಿಲ್ಲ. ಕರ್ನಾಟಕ ಆಂಧ್ರ ಮಾದರಿಗೆ ಹೋಗುವ ಸಂದೇಶವನ್ನು ರಾಜ್ಯ ಸರ್ಕಾರವು ಕೊಟ್ಟಂತಿದೆ.

ಗೂಂಡಾ ರಾಜ್ಯ: ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ಹೊಸ ವರ್ಷದ ಮೊದಲ ದಿನವೇ ಒಂದು ಜೀವ ಬಲಿಯಾಗಿರುವುದು ಗೂಂಡಾ ರಾಜ್ಯ ಎಂಬ ಸಂದೇಶ ರವಾನೆಯಾಗಿದೆ.

ಕಾಂಗ್ರೆಸ್ ಶಾಸಕ ಮತ್ತು ಅವರ ಕಾರ್ಯಕರ್ತರ ವಿರುದ್ಧ ದೂರು ದಾಖಲಿಸುವ ಬದಲು ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಮೇಲೆಯೇ ದೂರು ದಾಖಲಿಸುವ ಪ್ರಯತ್ನ ನಡೆದಿದೆ. ಘಟನೆಯಲ್ಲಿ ಇವರುಗಳು ಯಾವ ರೀತಿ ಭಾಗಿಯಾಗಿದ್ದಾರೆ. ಗುಂಡು ಹಾರಿಸಿದ್ದು ಯಾರು ಎಂದರು.

ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಇದೇ ವೇಳೆ ಸತೀಶ್ ರೆಡ್ಡಿ ಗೂಂಡಾವರ್ತಿ ಮಾಡಿದ್ದು, ಅವರನ್ನು ಬಂಧಿಸಿದ್ದೀರಾ, ಇವರನ್ನು ಏಕೆ ಬಂಧಿಸಲಿಲ್ಲ.

ಕಾಂಗ್ರೆಸ್ ನಾಯಕರು ಮತ್ತು ಶಾಸಕರನ್ನು ಬಂಧಿಸಬೇಕೇ ಹೊರತು ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರನ್ನಲ್ಲ. ಎಲ್ಲ ಕುಚೇಷ್ಟೆ ಕಾಂಗ್ರೆಸ್‌ನವರಿಂದ ಆಗಿದೆಯೇ ಹೊರತು ಬಿಜೆಪಿ ಪಕ್ಷದ ಶಾಸಕರ ಕಡೆಯಿಂದ ಆಗಿಲ್ಲ, ಇಂತಹ ಗೂಂಡಾ ವರ್ತನೆಯನ್ನು ನಿಲ್ಲಿಸಬೇಕು ಎಂದರು.

ಸರ್ಕಾರಿ ಪ್ರಾಯೋಜಕತ್ವದ ಕೃತ್ಯ: ಘಟನೆ ಸಂಬಂಧ ಟ್ವೀಟ್ ಮಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಮನೆ ಎದುರು ನಡೆದಿರುವ ಘಟನೆ ಸರ್ಕಾರಿ ಪ್ರಾಯೋಜಕತ್ವದ ಪೂರ್ವ ನಿಯೋಜಿತ ಕಾಂಗ್ರೆಸ್ ಗೂಂಡಾಗಳ ದುಷ್ಕೃತ್ಯವಾಗಿದ್ದು, ಸದರಿ ಘಟನೆಯನ್ನು ಖಂಡಿಸುವುದಾಗಿ ತಿಳಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣ ಕಾರ್ಯಕ್ರಮದ ಬ್ಯಾನರ್ ಅಳವಡಿಕೆ ನೆಪವಾಗಿಸಿಕೊಂಡು ಜನಾರ್ದನ ರೆಡ್ಡಿ ಮತ್ತು ಕುಟುಂಬವನ್ನು ಗುರಿಯನ್ನಾಗಿಸಿಕೊಂಡು ನಡೆಸಿದ ದುಷ್ಕೃತ್ಯವಾಗಿದ್ದು ಬಳ್ಳಾರಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ನಾಗರಿಕ ಸಮಾಜ ನೆಮ್ಮದಿಯಾಗಿ ಬದುಕುವ ವಾತಾವರಣ ಕಲುಷಿತಗೊಳಿಸಿ, ಭಯಗ್ರಸ್ಥ ನಗರವನ್ನಾಗಿಸಲು ಸ್ಥಳೀಯ ಶಾಸಕ ಮತ್ತು ಅವರ ಬೆಂಬಲಿಗರು ದುಷ್ಕೃತ್ಯಕ್ಕೆ ಇಳಿದಂತಿದೆ.


ಛಲವಾದಿ


ವಿಜಯೇಂದ್ರ

ಜನಾರ್ದನ ರೆಡ್ಡಿ ಬಿಜೆಪಿಗೆ ಮರು ಸೇರ್ಪಡೆ ನಂತರ ಸ್ಥಳೀಯವಾಗಿ ಪಕ್ಷ ಸಂಘಟನೆ ಪ್ರಬಲವಾಗುತ್ತಿರುವುದು, ಶ್ರೀರಾಮುಲು ಜೊತೆಗಿನ ಬಾಂಧವ್ಯ ಹಿಂದಿನಂತೆ ಬೆಸೆದಿರುವುದು ರಾಜಕೀಯ ದುಷ್ಟರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ.

ಸ್ಥಳೀಯ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿ ಮಾರ್ಪಟ್ಟಿರುವುದು ವಿಪರ್ಯಾಸ ಸ್ಥಳೀಯ ಪೊಲೀಸರು ಕಾಂಗ್ರೆಸ್ ಕೈಗೊಂಬೆಯಾಗಿದ್ದಾರೆ. ಮುನ್ನೆಚ್ಚರಿಕೆ ಕ್ರಮ ವಹಿಸಿದ್ದರೆ ದುಷ್ಕೃತ್ಯ ತಡೆಯಬಹುದಿತ್ತು.

ಶಾಸಕ ಜನಾರ್ದನ ರೆಡ್ಡಿ, ಮಾಜಿ ಸಚಿವ ಶ್ರೀರಾಮುಲು ಸೇರಿದಂತೆ ಬಿಜೆಪಿಯ ಪ್ರಮುಖ ನಾಯಕರಿಗೆ ಸೂಕ್ತ ಭದ್ರತೆ ನೀಡಬೇಕು. ಘಟನೆ ಕುರಿತು ರಾಜ್ಯ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗ ರಚಿಸಿ ತನಿಖೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಬಿಜೆಪಿ ರಾಜ್ಯ ಸಹ ಉಸ್ತುವಾರಿ ಸುಧಾಕರ ರೆಡ್ಡಿ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಸಕ ಜನಾರ್ದನ ರೆಡ್ಡಿ ಅವರಿಗೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು ಎಂದಿದ್ದಾರೆ.

ಕರ್ನಾಟಕದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ಹೆಚ್ಚಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಗೂಂಡಾರಾಜ್ ತಾಂಡವವಾಡುತ್ತಿದೆ. ಕಾಂಗ್ರೆಸ್ ಪ್ರೇರಿತ ಗೂಂಡಾ ವ್ಯವಸ್ಥೆಯಿಂದ ಸಮಸ್ಯೆ ಉಂಟಾಗುತ್ತಿದೆ.

ಕಾಂಗ್ರೆಸ್ ಶಾಸಕರೇ ಪೊಲೀಸ್ ಠಾಣೆಗೆ ತೆರಳಿ ಬೆದರಿಸಿ ಕಾನೂನನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಘಟನೆ ಹಿಂದಿರುವ ದುಷ್ಟಶಕ್ತಿಗಳನ್ನು ತಕ್ಷಣ ಬಂಧಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ.ಪರಮೇಶ್ವರ್ ಅವರನ್ನು ಆಗ್ರಹಿಸಿದ್ದಾರೆ.

ಮೆಕ್ಕೆಜೋಳ ಮಾರಾಟಕ್ಕೆ ರೈತರ ನೋಂದಣಿ; ಹಾಸನ ಪಶು ಆಹಾರ ಘಟಕದಲ್ಲಿ ಖರೀದಿ ಕೇಂದ್ರ

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಮಂಡ್ಯ ರೈತರಿಂದ 12 ಸಾವಿರ ಮೆಟ್ರಿಕ್ ಟನ್ ಮಾರಾಟ ಖಾತರಿ

- **ಸರ್ಕಾರದಿಂದ 2,400 ಕನಿಷ್ಟ ಬೆಂಬಲ ಬೆಲೆ**
- **ಈಗ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ 2,100 ರೂ. ಇದೆ**
- **ಕಳೆದ ವರ್ಷ 2,500ರಿಂದ 2,900ಕ್ಕೆ ಮಾರಾಟ**

ಮೈಸೂರು, ಜ.2(ಬಿಎಲ್‌ಯು)– ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಕನಿಷ್ಟ ಬೆಂಬಲ ಬೆಲೆ (ಎಂಎಸ್‌ಪಿ)ಯಡಿ 12 ಸಾವಿರ ಮೆಟ್ರಿಕ್ ಟನ್ ಮೆಕ್ಕೆಜೋಳ ಮಾರಾಟ ಮಾಡಲು ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಮುಕ್ತ ಮಾರುಕಟ್ಟೆಯಲ್ಲಿ ಮೆಕ್ಕೆಜೋಳದ ಬೆಲೆ ಕುಸಿತದಿಂದ ಚಿಂತಾಕ್ರಾಂತರಾಗಿದ್ದ ರೈತರು ಈಗ ನಿಟ್ಟುಸಿರು ಬಿಟ್ಟಿದ್ದಾರೆ.

ಈ ಬಾರಿ ಮುಂಗಾರಲ್ಲಿ ನಿರೀಕ್ಷೆಗಿಂತ ಹೆಚ್ಚು ಮಳೆಯಾಗಿದ್ದ ಹಿನ್ನೆಲೆಯಲ್ಲಿ ರೈತರ ಮೊಗದಲ್ಲಿ ಮಂದಹಾಸ ಮೂಡಿತ್ತು. ಹೆಚ್ಚು ಇಳುವರಿಯ ಕಾರಣ ಈ ವರ್ಷ ಬಂಪರ್ ಲಾಭ ಬರಬಹುದು ಎಂದು ರೈತರು ಸಂತಸದಲ್ಲಿದ್ದರು.

ಆದರೆ ಮಾರುಕಟ್ಟೆಗೆ ಹೋದಾಗ ರೈತರಿಗೆ ಶಾಕ್. ಈ ಬಾರಿ ಮೆಕ್ಕೆಜೋಳದ ಬೆಲೆ ಪಾತಾಳಕ್ಕೆ ಕುಸಿದಿತ್ತು. ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ ಬೆಲೆ 1,750 ರೂಪಾಯಿ. ಒಂದು ಎಕರೆಯಲ್ಲಿ ಮೆಕ್ಕೆಜೋಳ ಬೆಳೆಯಲು ಕನಿಷ್ಟ 30 ರಿಂದ 35 ಸಾವಿರ ರೂಪಾಯಿ ಖರ್ಚಾಗುತ್ತದೆ.

ಎಕರೆಗೆ ಬರುವ 15 ರಿಂದ 18 ಕ್ವಿಂಟಾಲ್ ಇಳುವರಿಯ ಮಾರಾಟ ಮಾಡಿದರೆ ಲಾಭವಿರಲಿ, ಹಾಕಿದ ಬಂಡವಾಳವೂ ಬರುವುದಿಲ್ಲ ಎಂದು ರೈತರು ತಲೆ ಮೇಲೆ ಕೈ ಹೊತ್ತು ಕೂತಿದ್ದರು. ಕಳೆದ ವರ್ಷ ಪ್ರತಿ ಕ್ವಿಂಟಾಲ್‌ಗೆ 2,500 ರಿಂದ 2,900 ರೂ. ಬೆಲೆ ಇತ್ತು. ಆದರೆ ಈ ಬಾರಿ ಮಾರುಕಟ್ಟೆಯಲ್ಲಿನ ಬೆಲೆಯಿಂದ ನಷ್ಟದ ಭೀತಿಯಲ್ಲಿದ್ದರು.

ಹಾಗಾಗಿ ರೈತರ ಪ್ರತಿಭಟನೆ ತೀವ್ರವಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಿಗಳ ಸಭೆ ಕರೆದು ಮೆಕ್ಕೆಜೋಳಕ್ಕೆ ಕನಿಷ್ಟ ಬೆಂಬಲ ಬೆಲೆ (ಕನಿಷ್ಟ ಬೆಂಬಲ ಬೆಲೆ) ಘೋಷಿಸಿದರು. ಅದರಂತೆ ಈಗ ರಾಜ್ಯ ಸರ್ಕಾರ ಒಂದು ಕ್ವಿಂಟಾಲ್ ಮೆಕ್ಕೆಜೋಳಕ್ಕೆ 2,400 ರೂಪಾಯಿ ದರ ನಿಗದಿ ಮಾಡಿದೆ.

ಈಗ ಮುಕ್ತ ಮಾರುಕಟ್ಟೆಯಲ್ಲಿ 1,750 ರೂಪಾಯಿ ಇದ್ದರೆ, ಬೆಂಬಲ ಬೆಲೆ 2,400 ರೂಪಾಯಿ. ಹಾಗಾಗಿ ನಿಟ್ಟುಸಿರು ಬಿಟ್ಟಿರುವ ರೈತರು 12 ಸಾವಿರ ಮೆಟ್ರಿಕ್ ಟನ್ ಮೆಕ್ಕೆ ಜೋಳ ಮಾರಾಟ ಮಾಡಲು ನೋಂದಣಿ ಮಾಡಿಕೊಂಡಿದ್ದಾರೆ.

ಕರ್ನಾಟಕ ಹಾಲು ಮಹಾ ಮಂಡಳಿಯ ನಿರ್ದೇಶನದ ಮೇರೆಗೆ ಹಾಸನ ಪಶು ಆಹಾರ ಘಟಕದಲ್ಲಿ ಖರೀದಿ ಕೇಂದ್ರ ಸ್ಥಾಪಿಸಲಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಮಡಿಕೇರಿ, ಚಿಕ್ಕಮಗಳೂರು ಜಿಲ್ಲೆಯ ರೈತರು ಇಲ್ಲಿ ಮೆಕ್ಕೆಜೋಳ ಮಾರಾಟ ಮಾಡಬೇಕಿದೆ.



ಶೇಕಡ 14ಕ್ಕಿಂತ ಹೆಚ್ಚು ತೇವಾಂಶವಿದ್ದರೆ ಖರೀದಿಸಲ್ಲ

ಸರ್ಕಾರ ನಿಗದಿ ಮಾಡಿರುವ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಮಾರಾಟ ಮಾಡಲು ಸರ್ಕಾರದ ಹತ್ತಾರು ನಿಯಮ ಪಾಲನೆ ಕಡ್ಡಾಯವಾಗಿದೆ.

ಖರೀದಿ ಕೇಂದ್ರಕ್ಕೆ ತಂದ ಸಂದರ್ಭದಲ್ಲಿ ಮೆಕ್ಕೆಜೋಳ ಶೇಕಡ 14ಕ್ಕಿಂತ ಹೆಚ್ಚು ತೇವಾಂಶ ಹೊಂದಿರಬಾರದು, ಮೆಕ್ಕೆಜೋಳ ತುಂಬಿರುವ ಗೋಣಿ ಚೀಲ ರೈತರದೆ ಆಗಿರಬೇಕು, ಸಾಗಾಣಿಕೆ ವೆಚ್ಚವನ್ನು ರೈತರೇ ಭರಿಸಬೇಕು ಎಂಬ ಕೆಲವು ಕಠಿಣ ನಿಯಮಗಳಿವೆ.

ರೈತರಿಗೆ ಸರಳ, ಸುರಕ್ಷಿತ ಹಾದಿ

ರಾಜ್ಯ ಸರ್ಕಾರ ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಲು ಹಲವು ಕಠಿಣ ನಿಯಮವನ್ನು ಹೇರಿದರೆ ದಲ್ಲಾಳಿಗಳು ಮೆಕ್ಕೆಜೋಳ ಖರೀದಿಗೆ ಹಾದಿ ಮಾಡಿಕೊಟ್ಟಂತಾಗುತ್ತದೆ. ಬೆಂಬಲ ಬೆಲೆಯಾಗಿ ರಾಜ್ಯ ಸರ್ಕಾರ 2,400 ರೂಪಾಯಿ ನಿಗದಿ ಮಾಡಿದ್ದರೆ ದಲ್ಲಾಳಿಗಳು 2000 ರಿಂದ 2,100 ರೂಪಾಯಿಗೆ ಖರೀದಿ ಮಾಡಬಹುದು.

ದಲ್ಲಾಳಿಗಳು ನೇರವಾಗಿ ರೈತರ ಮನೆ ಬಾಗಿಲಲ್ಲೇ ಖರೀದಿ ಮಾಡುತ್ತಾರೆ. ಆದರೆ, ತಕ್ಷಣ ಹಣ ಕೊಡುವುದಿಲ್ಲ, ನಂತರ ಹಣ ಕೊಡುತ್ತಾರೆ ಎಂಬ ಗ್ಯಾರಂಟಿಯೂ ಇರುವುದಿಲ್ಲ. ಹಾಗಾಗಿ ವಿಳಂಬವಾದರೂ ಸರಿ ಸರ್ಕಾರ ಸ್ಥಾಪಿಸಿರುವ ಖರೀದಿ ಕೇಂದ್ರದಲ್ಲೇ ಮೆಕ್ಕೆಜೋಳ ಮಾರಾಟ ಮಾಡಲು ರೈತರು ಮುಂದಾಗಿದ್ದಾರೆ. ಫ್ರೂಟ್ ಐಡಿ ಆಧಾರದ ಮೇಲೆ ಸರ್ಕಾರ ಮೆಕ್ಕೆಜೋಳ ಮಾರಾಟ ಮಾಡಿದ ರೈತರ ಬ್ಯಾಂಕ್ ಅಕೌಂಟ್‌ಗೆ ನೇರವಾಗಿ ಹಣ ಜಮಾ ಮಾಡುತ್ತದೆ. ಬೆಂಬಲ ಬೆಲೆಯಲ್ಲಿ ಖರೀದಿ ಮಾಡಿದ ಮೆಕ್ಕೆಜೋಳದಿಂದ ಪಶು ಆಹಾರ ತಯಾರು ಮಾಡಲು ಬಳಕೆ ಮಾಡಿಕೊಳ್ಳಲಾಗುತ್ತದೆ. ಹಿಂಡಿ ಸೇರಿದಂತೆ ಇತರೆ ಪೂರಕ ವಸ್ತುಗಳನ್ನು ಶೇಕಡ 75ರಷ್ಟು ಮಿಶ್ರಣ ಮಾಡಿದರೆ ಶೇಕಡ 25ರಷ್ಟು ಮೆಕ್ಕೆಜೋಳ ಮಿಶ್ರಣ ಮಾಡಲಾಗುತ್ತದೆ.

ಫ್ರೂಟ್ಸ್ ಐಡಿ ಇದ್ದರೆ ಮಾತ್ರವೇ ಮಾರಾಟ ಸಾಧ್ಯ

ಕೃಷಿ ಇಲಾಖೆಯ ಸಬ್ಸಿಡಿಗಳು, ಬೆಳೆ ವಿಮೆ, ಬಿತ್ತನೆ ಬೀಜ ಸೇರಿದಂತೆ ಯಾವುದೇ ಸೌಲಭ್ಯ ಪಡೆಯಲು ರೈತರು ಕಡ್ಡಾಯವಾಗಿ ಫ್ರೂಟ್ಸ್ ಐಡಿ (farmer Registration and unified Beneficiary Information System ID) ನೋಂದಣಿ ಮಾಡಿಕೊಂಡಿರಬೇಕು. ಮೆಕ್ಕೆಜೋಳವನ್ನು ಸರ್ಕಾರ ನಿಗದಿ ಮಾಡಿರುವ ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಲು ಫ್ರೂಟ್ಸ್ ಐಡಿ ಕಡ್ಡಾಯ. ಇದು ಸರ್ಕಾರ ರೂಪಿಸಿರುವ ವಿಶಿಷ್ಟ ಗುರುತಿನ ಸಂಖ್ಯೆಯಾಗಿದ್ದು, ರೈತರ ಮಾಹಿತಿಯನ್ನು ಸುಲಭವಾಗಿ ನಿರ್ವಹಿಸಲು ಮತ್ತು ನಕಲಿ ದಾಖಲೆ ತಡೆಯಲು ಇದು ಅನುಕೂಲಕಾರಿ. ಫ್ರೂಟ್ಸ್ ಸಂಖ್ಯೆಯನ್ನು ನೋಂದಾಯಿಸಿದ ನಂತರ ಇಂತಹ ದಿನಾಂಕದಂದು ಖರೀದಿ ಕೇಂದ್ರಕ್ಕೆ ಮೆಕ್ಕೆಜೋಳ ತರುವಂತೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುತ್ತದೆ. ಖರೀದಿ ಪ್ರಮಾಣವನ್ನು ಪ್ರತಿ ಎಕರೆಗೆ 18 ರಿಂದ 20 ಕ್ವಿಂಟಾಲ್‌ಗೆ ನಿಗದಿ ಮಾಡಲಾಗಿದೆ.

ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿಗೆ ಅಶ್ಲೀಲ ಕಮೆಂಟ್: ಟೆಕ್ಕಿ, ಆಟೋ ಡ್ರೈವರ್ ಬಂಧನ

ಬೆಂಗಳೂರು, ಜ.2– ನಟ ದರ್ಶನ್ ತೂಗುದೀಪ ಪತ್ನಿ ವಿಜಯಲಕ್ಷ್ಮಿ ವಿರುದ್ಧ ಅಶ್ಲೀಲ ಮತ್ತು ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪದ ಮೇಲೆ ಬೆಂಗಳೂರು ಪೊಲೀಸರು ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಆಟೋರಿಕ್ಷಾ ಚಾಲಕನನ್ನು ಬಂಧಿಸಿದ್ದಾರೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಸದ್ಯ ಜೈಲಿನಲ್ಲಿದ್ದಾರೆ. ಬೆಂಗಳೂರಿನ ಚಿಕ್ಕಬಾಣಾವರ ನಿವಾಸಿ ಆಟೋರಿಕ್ಷಾ ಚಾಲಕ ಚಂದ್ರಶೇಖರ್ ಬಿ.(45) ಮತ್ತು ದಾವಣಗೆರೆಯ ಸಾಫ್ಟ್‌ವೇರ್ ಎಂಜಿನಿಯರ್ ನಿತಿನ್(31) ಬಂಧಿತ ಆರೋಪಿಗಳು



ಡಿಸೆಂಬರ್ 24ರಂದು ವಿಜಯಲಕ್ಷ್ಮಿ ಅವರು ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರು ದಾಖಲಿಸಿದ್ದರು. ಕೆಲವು ವ್ಯಕ್ತಿಗಳು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಮತ್ತು ಅವರ ಕುಟುಂಬದ ವಿರುದ್ಧ ಕೀಳು ಮಟ್ಟದ ಅಶ್ಲೀಲ, ಅವಹೇಳನಕಾರಿ ಪೋಸ್ಟ್‌ಗಳು, ಕಾಮೆಂಟ್‌ಗಳು ಮತ್ತು ಸಂದೇಶಗಳನ್ನು ಪೋಸ್ಟ್ ಮಾಡುತ್ತಿದ್ದಾರೆ ಎಂದು ವಿಜಯಲಕ್ಷ್ಮಿ ದೂರು ನೀಡಿದ್ದರು.

ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ತನಿಖೆಯ ಸಮಯದಲ್ಲಿ, ಆರೋಪಿಗಳು ವಿಜಯಲಕ್ಷ್ಮಿ ಮತ್ತು ಅವರ ಕುಟುಂಬದ ವಿರುದ್ಧ ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮತ್ತು ಇತರ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಅಶ್ಲೀಲ ಸಂದೇಶಗಳನ್ನು ಪೋಸ್ಟ್ ಮಾಡಿರುವುದು ತಿಳಿದು ಬಂದಿದೆ. ತನಿಖೆ ಮುಂದುವರಿದಿದ್ದು ಉಳಿದ ಆರೋಪಿಗಳಿಗಾಗಿ ಹುಡುಕಾಟ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಮಗ : ಪಪ್ಪಾ ನಾನು ಸ್ಕೂಲಿಗೆ ಹೋಗಲ್ಲ, ಜಾಬ್ ಮಾಡ್ತೀನಿ.
ಅಪ್ಪ : ಯುಕೆಜಿ ಓದಿದ್ದೀಯಾ... ಏನ್ ಕೆಲ್ಸ ಮಾಡ್ತೀಯಾ?
ಮಗ : ಎಲ್‌ಕೆಜಿ ಹುಡುಗಿಯರಿಗೆ ಟ್ಯೂಶನ್ ಮಾಡ್ತೀನಿ!

ಮೈಸೂರು ಮಿತ್ರ

ಶನಿವಾರ, ಜನವರಿ 3, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕಾಲಾಯ ತಸ್ಮೈನಮಃ, ಸಮಯವೇ ಎಲ್ಲದಕ್ಕೂ ಉತ್ತರ ಕೊಡುತ್ತೆ. ಕಾಯುವ ತಾಳ್ಮೆ ಇರಬೇಕಷ್ಟೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಿಡಿ ಸಣ್ಣದಾದರೂ ಕಾಡೆಲ್ಲವನ್ನು ಸುಡುತ್ತದೆ.

ನಿಮ್ಮ ಪತ್ರಗಳು

ಮೈಸೂರಿನ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್‌ಗೆ ರೋಗಿಗಳ ಪರದಾಟ !

ಮಾನ್ಯರೆ,

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಐತಿಹಾಸಿಕ ಹಿನ್ನೆಲೆಯ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಪ್ರಾಂಶುಪಾಲರಾದ ಡಾ. ಶ್ರೀವತ್ಸ ಅವರ ನೇತೃತ್ವದಲ್ಲಿ ಎಲ್ಲಾ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ಸಿಬ್ಬಂದಿ, ರೋಗಿಗಳಿಗೆ ಉತ್ತಮ ಸೇವೆ ನೀಡುತ್ತಿದ್ದಾರೆ. ಕೆಲವಷ್ಟೇ ಔಷಧಿಗಳ ಜೊತೆಗೆ ಉಚಿತ ಚಿಕಿತ್ಸೆ ಲಭ್ಯವಿದ್ದು, ವಾರ್ಡ್‌ನಲ್ಲಿ ಅಡ್ಮಿಟ್ ಆದರೆ ಉಚಿತ ಊಟ- ಹಾಸಿಗೆ ವ್ಯವಸ್ಥೆಯೂ ಇದೆ.

ಆದರೆ, ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ವಿಭಾಗದಲ್ಲಿ ಮಾತ್ರ ಪ್ರತ್ಯೇಕ ಖಾಯಂ ವೈದ್ಯರಿಲ್ಲದೇ ರೋಗಿಗಳು ಪರದಾಡಬೇಕಾದ ಪರಿಸ್ಥಿತಿ ಇದೆ. ಇಲ್ಲಿ ನೋಂದಣಿ ಮಾಡಿಕೊಂಡ ನಿಗದಿತ ಸಂಖ್ಯೆಯ ರೋಗಿಗಳಿಗೆ ಒಬ್ಬ ವೈದ್ಯರು ಪ್ರತಿ ಗುರುವಾರ ಬೆಳಿಗ್ಗೆ ಸುಮಾರು 9ರಿಂದ 10ರವರೆಗೆ ಸ್ಕ್ಯಾನಿಂಗ್ ಮಾಡುತ್ತಾರೆ.

ಸಮಸ್ಯೆ ಏನೆಂದರೆ, ರೋಗಿಗಳು ಸ್ಕ್ಯಾನಿಂಗ್ ಮಾಡಿಸಲು 1 ವಾರ ಮುಂಚೆಯೇ ಬಂದು ಹೆಸರು ನೋಂದಾಯಿಸಬೇಕು. ಮುಂದಿನ ವಾರ ಸ್ಕ್ಯಾನಿಂಗ್‌ಗೆ ತಡವಾಗಿ ಬಂದರೆ ಅಥವಾ ತಪ್ಪಿಸಿಕೊಂಡರೆ ಮತ್ತೆ ಹೆಸರು ನೋಂದಾಯಿಸಿಕೊಂಡು ಮುಂದಿನ ಗುರುವಾರದವರೆಗೆ ಕಾಯಬೇಕು. ಅಲ್ಲದೇ ನಿಗದಿತ ಸಂಖ್ಯೆಯ ನೋಂದಣಿ ಮುಗಿದರೆ, ಮತ್ತೆ ಮುಂದಿನ ವಾರ ಬಂದು ಹೆಸರು ನೋಂದಾಯಿಸಿ, ಅದರ ನಂತರದ ಗುರುವಾರ ಸ್ಕ್ಯಾನಿಂಗ್ ಮಾಡಿಸಬೇಕು. ಇದಲ್ಲದೇ ಆ ಗುರುವಾರ (ಉದಾಹರಣೆಗೆ 2025 ಡಿಸೆಂಬರ್ 25ರ ಕ್ರಿಸ್‌ಮಸ್) ಸರ್ಕಾರಿ ರಜೆ ಇದ್ದರೆ, ಮತ್ತೆ 1 ವಾರದವರೆಗೆ ಕಾಯಬೇಕು.

ಅಲ್ಲದೇ, ಈ ವಿಭಾಗದಲ್ಲಿ ಯಾವುದೇ ಪೂರ್ಣಕಾಲಿಕ ಖಾಯಂ ವೈದ್ಯರಿರುವುದಿಲ್ಲ. ಬೇರೆ ವಿಭಾಗದ ವೈದ್ಯರೊಬ್ಬರು 1 ಗಂಟೆ ಬಂದು ಸ್ಕ್ಯಾನಿಂಗ್ ಮಾಡಿ ಹೋಗುತ್ತಾರೆ. ಒಂದು ವೇಳೆ ಇವರು ವೈಯಕ್ತಿಕ ಕಾರಣಗಳಿಂದ ತಡವಾಗಿ ಬಂದರೆ ಅಥವಾ ರಜೆ ಹಾಕಿದರೆ ಮುಗಿಯಿತು. 2026ರ ಜನವರಿ 1ರಂದು ಹಾಗೆಯೇ ಆಯಿತು. 2 ವಾರದ ಹಿಂದೆ ನೋಂದಣಿ ಮಾಡಿಕೊಂಡು ಸುಮಾರು 20ಕ್ಕೂ ಹೆಚ್ಚು ರೋಗಿಗಳು ಬೆಳಿಗ್ಗೆ 8.30ಕ್ಕೆ ಬಂದಿದ್ದರು. ಇವರಲ್ಲಿ ಬಹುತೇಕ ವಯಸ್ಸಾದವರೇ ಇದ್ದು, 2 ಗಂಟೆ ಕಾಲ ಬರಿಯ ನೀರು ಕುಡಿದುಕೊಂಡು ಕಾಯುತ್ತಿದ್ದರು. ಆದರೆ, ವೈದ್ಯರು ವೈಯಕ್ತಿಕ ಕಾರಣಗಳಿಂದ ಬರುತ್ತಿಲ್ಲವೆಂದು 10.30ರಲ್ಲಿ ಇಲ್ಲಿನ ಸಿಬ್ಬಂದಿ ತಿಳಿಸಿದಾಗ ರೋಗಿಗಳು ಸರ್ಕಾರಿ ವ್ಯವಸ್ಥೆ ಬಗ್ಗೆ ಹಿಡಿಶಾಪ ಹಾಕುತ್ತಾ, ಅಸಮಾಧಾನದಿಂದ ಹಿಂದಿರುಗಿದರು. 4 ವಾರದ ಹಿಂದೆಯೂ ನೋಂದಣಿ ಮಾಡಿಸಿದ್ದರೂ ಮೆಷಿನ್ ರಿಪೇರಿ ಕಾರಣಕ್ಕೆ ಸ್ಕ್ಯಾನಿಂಗ್ ಮುಂದೂಡಲಾಯಿತು. ಇಂತಹ ಮುಂದೂಡುವಿಕೆಯ ಘಟನೆಗಳು ಪುನರಾವರ್ತನೆಯಾಗುತ್ತಲೇ ಇದ್ದರೂ ರೋಗಿಗಳು ಮತ್ತು ಇಲ್ಲಿನ ಸಿಬ್ಬಂದಿ ಅಸಹಾಯಕರಾಗಿ ಪರಿಸ್ಥಿತಿ ಎದುರಿಸುತ್ತಲೇ ಇದ್ದಾರೆ.

ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಸಾವಿರಾರು ರೂ. ನೀಡಲು ಸಾಧ್ಯವಾಗದ ಆರ್ಥಿಕ ದುರ್ಬಲ ವ್ಯಕ್ತಿಗಳು ಇಲ್ಲಿ ಉಚಿತ ವ್ಯವಸ್ಥೆಯ ಕಾರಣ ದೂರದೂರುಗಳಿಂದ ಮುಂಜಾನೆಯೇ ಬಂದಿರುತ್ತಾರೆ. ತುರ್ತು ಚಿಕಿತ್ಸೆಯ ಸಲುವಾಗಿಯೇ ಸ್ಕ್ಯಾನಿಂಗ್ ಮಾಡಿಸುವಂತೆ ವೈದ್ಯರು ಸೂಚಿಸಿರುತ್ತಾರೆ. ಆದರೆ, ಇಂತಹ ಅವ್ಯವಸ್ಥೆಗಳಿಂದ ತಿಂಗಳುಗಟ್ಟಲೇ ಕಾದುಕೊಂಡಿರುವ ರೋಗಿಗಳ ಆರೋಗ್ಯ ಸ್ಥಿತಿ ಅಧೋಗತಿಯಾಗಿರುತ್ತದೆ.

ಈ ಬಗ್ಗೆ ಸ್ಥಾನಿಕ ವೈದ್ಯಾಧಿಕಾರಿ ಡಾ. ಶಶಿರೇಖಾ ಅವರು, ನಾವು ಮನವಿ ಮಾಡಿಕೊಂಡು, ಬೇರೊಂದು ವಿಭಾಗದ ವೈದ್ಯರಿಂದ ಸ್ಕ್ಯಾನಿಂಗ್ ಮಾಡಿಸುತ್ತಿದ್ದೇವೆ. ಅವರಿಗೆ ರಜೆ ಹಾಕದಂತೆ ಆದೇಶ ನೀಡಲಾಗುವುದಿಲ್ಲ. ಅವರ ಮರ್ಜಿಗೆ ನಾವು ಕಾಯಲೇಬೇಕು ಎಂದು ರೋಗಿಗಳೊಂದಿಗೆ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಇಂತಹ ಸಣ್ಣಪುಟ್ಟ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡದಿದ್ದರೂ ಗ್ರೇಟರ್ ಮೈಸೂರು ಮಾಡುತ್ತೇವೆಂದು ಜನಪ್ರತಿನಿಧಿಗಳು ಹೇಳುತ್ತಿರುವುದು ಹಾಸ್ಯಾಸ್ಪದವೆನಿಸುತ್ತದೆ. ಐತಿಹಾಸಿಕ ಹಿನ್ನೆಲೆಯ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್‌ಗೆ ಪ್ರತ್ಯೇಕ ಪೂರ್ಣಕಾಲಿಕ ವೈದ್ಯರೊಬ್ಬರನ್ನು ನೇಮಿಸದಿರುವುದು ಸರ್ಕಾರಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ಈಗಲಾದರೂ ಶಾಸಕರು, ಆರೋಗ್ಯ ಇಲಾಖೆಯ ಉನ್ನತಾಧಿಕಾರಿಗಳು ಕ್ರಮ ಕೈಗೊಂಡು, ಸ್ಕ್ಯಾನಿಂಗ್ ವಿಭಾಗಕ್ಕೆ ಪೂರ್ಣಕಾಲಿಕ ವೈದ್ಯರನ್ನು ನೇಮಿಸಿ, ಸಾರ್ವಜನಿಕರಿಗೆ ಪ್ರತಿನಿತ್ಯವೂ ಸೇವೆ ದೊರೆಯುವಂತೆ ಮಾಡಬೇಕೆಂದು ಆಗ್ರಹವಾಗಿದೆ.

– ಎಂ. ರಾಜ್, ಮೈಸೂರು

ತೆರೆದಿರುವ ರಾಜಕಾಲುವೆಗೆ ಸ್ಲ್ಯಾಬ್ ಅಳವಡಿಸಿ



ಮಾನ್ಯರೇ

ಮೈಸೂರಿನ ಕುಕ್ಕರಹಳ್ಳಿ ಕೆರೆಯಿಂದ ಜೆ.ಎಸ್.ಎಸ್ ಮಹಿಳಾ ಕಾಲೇಜಿನ ಮಾರ್ಗವಾಗಿ ಬಂದು ಕನ್ನೇಗೌಡನ ಕೊಪ್ಪಲು ಹಾಗೂ ಸರಸ್ವತಿಪುರಂನ ಅಪೋಲೋ ಆಸ್ಪತ್ರೆಯ ಹಿಂಭಾಗದ ಮೂಲಕ ಶ್ರೀರಾಂಪುರದ ಕಡೆಗೆ ಹರಿಯುವ ರಾಜಕಾಲುವೆಯು ಪ್ರಸ್ತುತ ಸ್ಥಳೀಯ ನಿವಾಸಿಗಳ ಆರೋಗ್ಯಕ್ಕೆ ದೊಡ್ಡ ಕಂಠಕವಾಗಿ ಪರಿಣಮಿಸಿದೆ. ಆಸ್ಪತ್ರೆಯ ಹಿಂಭಾಗದಲ್ಲಿ ಹಾದುಹೋಗುವ ಈ ಕಾಲುವೆಗೆ ಅಡ್ಡಲಾಗಿ ಅವೈಜ್ಞಾನಿಕವಾಗಿ ಡೆಕ್ ಪಿಲ್ಲರ್‌ಗಳನ್ನು ಅಳವಡಿಸಲಾಗಿದ್ದು, ಇದರಿಂದಾಗಿ ಮೋರಿಯಲ್ಲಿ ಹರಿದು ಬರುವ ಪ್ಲಾಸ್ಟಿಕ್ ಹಾಗೂ ಇನ್ನಿತರ ತ್ಯಾಜ್ಯಗಳು ಪಿಲ್ಲರ್‌ಗಳ ಸಂದಿಯಲ್ಲಿ ಸಿಲುಕಿಕೊಳ್ಳುತ್ತಿವೆ. ಪರಿಣಾಮವಾಗಿ ಕೊಳಚೆ ನೀರು ಸರಾಗವಾಗಿ ಹರಿಯದೆ ಒಂದೇ ಕಡೆ ನಿಂತು ಸಂಪೂರ್ಣ ಕೊಳೆತು ನಾರುತ್ತಿದ್ದು, ಸೊಳ್ಳೆ ಹಾಗೂ ವಿಷಕಾರಿ ಕ್ರಿಮಿ-ಕೀಟಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಈ ಅಸಹನೀಯ ದುರ್ನಾತ ಹಾಗೂ ನಿಂತ ನೀರಿನಿಂದಾಗಿ ಅಕ್ಕಪಕ್ಕದ ನೂರಾರು ಮನೆಗಳ ನಿವಾಸಿಗಳಿಗೆ ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಆದ್ದರಿಂದ ಸಂಬಂಧಪಟ್ಟ ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ನೀರಿನ ಹರಿವಿಗೆ ಅಡ್ಡಿಯಾಗಿರುವ ತ್ಯಾಜ್ಯವನ್ನು ತೆರವುಗೊಳಿಸುವುದರ ಜೊತೆಗೆ, ಸಾರ್ವಜನಿಕರ ಹಿತದೃಷ್ಟಿಯಿಂದ ತೆರೆದಿರುವ ಈ ರಾಜಕಾಲುವೆಗೆ ಸ್ಲ್ಯಾಬ್ ಅಳವಡಿಸುವ ಮೂಲಕ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಬೇಕೆಂದು ಮನವಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಮೂಗೂರು ಶ್ರೀ ತ್ರಿಪುರಸುಂದರಿ ಅಮ್ಮನ ಜಾತ್ರೆ; ಕೊಂಬೆ ಚಿಗುರುವುದು ಒಂದೇ ದಿನದಲ್ಲಿ!





03-01-2026ರಿಂದ ಪ್ರಾರಂಭವಾಗುವ ಮೂಗೂರು ಶ್ರೀ ತ್ರಿಪುರಸುಂದರಿ ಜಾತ್ರೆಯ ನಿಮಿತ್ತ ವಿಶೇಷ ಲೇಖನ

> ❝ ಮೂಗೂರಿನ ಜಾತ್ರಾ ಸಮಯದಲ್ಲಿ ನಡೆಯುವ ಚಿಗುರು ಕಡಿಯುವ ಹಬ್ಬದಂದು ವಿಸ್ಮಯವೆನಿಸುವ ವೈಶಿಷ್ಟವಿದೆ, ಮರದ ಒಂದು ಕೊಂಬೆಯನ್ನು ಸವರಿದರೆ ಅದು ಪುನಃ ಚಿಗುರಬೇಕಾದರೆ ಸುಮಾರು ದಿನಗಳು ಬೇಕಾಗುತ್ತದೆ ಆದರೆ, ಶ್ರೀತ್ರಿಪುರಸುಂದರಿ ಅಮ್ಮನವರ ರಥೋತ್ಸವದ ಮಧ್ಯರಾತ್ರಿ ಮೂಗೂರಿಂದ 2 ಕಿಮೀ ದೂರದ ಹೊಸಹಳ್ಳಿಯಲ್ಲಿ ಇರುವ ಪುರಾತನ ನೇರಳೆ ಮರದ ಒಂದು ಕೊಂಬೆ ಸವರಿದರೆ ಅದು ಮಾರನೇ ದಿನ ಸಾಯಂಕಾಲದ ವೇಳೆಗೆ ಚಿಗುರುವುದನ್ನು ಇಂದಿಗೂ ಕಾಣಬಹುದಾಗಿದೆ. ಇದು ಆದಿಶಕ್ತಿಯ ಪವಾಡವೆಂದು ಇಲ್ಲಿನವರು ಹೇಳುತ್ತಾರೆ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ:9916129654.

ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ತ್ರಿಪುರಸುಂದರಿ ಅಮ್ಮ, ಶಕ್ತಿದೇವತೆಯೂ, ಮಹಾಕಾಳಿಯೂ ಆಗಿ ಮೂಗೂರು ಗ್ರಾಮ ದೇವತೆಯಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಾ ಬಂದಿರುವ ತಾಯಿಯ ಜಾತ್ರಾ ಮಹೋತ್ಸವವು ಜನವರಿ 3ರಿಂದ 7ರವರೆಗೆ ಅತ್ಯಂತ ಭಕ್ತಿಪೂರ್ವಕ ಹಾಗೂ ಅದ್ಧೂರಿಯಾಗಿ ಜಗನ್ಮಾತೆಯನ್ನು ವಿಶೇಷವಾಗಿ ಪೂಜಿಸುತ್ತಾ ವಿಶೇಷ ಅಲಂಕಾರಗಳೊಂದಿಗೆ ವೈಭವಯುತವಾಗಿ ಎಲ್ಲಾ ಜಾತಿಧರ್ಮಗಳ ಕೋಮು ಸೌಹಾರ್ದತೆಯ ಸಾಕ್ಷಿಯಾಗಿ ನಡೆಯುವುದು. ಇದರಲ್ಲಿ ಗ್ರಾಮಸ್ಥರು, ಅದರಲ್ಲೂ ರೈತಾಪಿ ವರ್ಗ ನೆಲೆಸಿರುವ ಸುತ್ತಲಿನ ಹತ್ತಾರು ಹಳ್ಳಿಗಳ ಸಾವಿರಾರು ಭಕ್ತರು ಸುಗ್ಗಿಯ ಸಂಭ್ರಮದೊಂದಿಗೆ ಭಾಗವಹಿಸಿ ಶ್ರೀ ತ್ರಿಪುರ ಸುಂದರಿ ದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

ಮೈಸೂರಿನಿಂದ ಕೇವಲ 40 ಮತ್ತು ತಾಲೂಕು ಕೇಂದ್ರ ತಿ.ನರಸೀಪುರದಿಂದ 10 ಕಿ.ಮೀ ದೂರದಲ್ಲಿರುವ ಮೂಗೂರು, ರಮಣೀಯ ಪ್ರಕೃತಿಯ ಮಡಿಲಲ್ಲಿ ಇದ್ದು, ಗ್ರಾಮಕ್ಕೆ ಸೇರಿದ ಸುಮಾರು 5 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶವು ಕಬಿನಿ ಜಲಾಶಯದ ಅಚ್ಚುಕಟ್ಟಿಗೆ ಒಳಪಟ್ಟಿರುವುದರಿಂದ ವಿಶಾಲವಾದ ಬಯಲು ಯಾವಾಗಲೂ ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಪ್ರಮುಖ ಬೆಳೆಯಾಗಿ ಕಬ್ಬು ಮತ್ತು ಭತ್ತವನ್ನು ಬೆಳೆಯುತ್ತಾರೆ. ದೂರದ ಊರಿನಿಂದ ಪ್ರವಾಸಿಗರು ದೇವಿಯ ದರ್ಶನಕ್ಕೆ ನಿತ್ಯವೂ ನೂರಾರು ಸಂಖ್ಯೆಯಲ್ಲಿ ಬರುತ್ತಾರೆ. ಸೊಗಸಾದ ರಸ್ತೆಯ ಸಂಪರ್ಕವು ಜಿಲ್ಲಾ ಕೇಂದ್ರದಿಂದ ಇದೆ. ಈ ಊರಿಗೆ ಮೈಸೂರಿಂದ ಕೇವಲ ನಲವತ್ತು ನಿಮಿಷದ ಪ್ರಯಾಣ ಅಷ್ಟೆ.

ಮೂಗೂರಿನಲ್ಲಿ ಇರುವ ಕಬಿನಿ ನಾಲಾ ಉಪ ವಿಭಾಗದಲ್ಲಿ ಇಂಜಿನಿಯರ್ ಆಗಿ ಎರಡು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುವುದರಿಂದ ಆ ಭಾಗದ ಸಹೃದಯಿ ರೈತರ ಒಡನಾಟ ಬಲ್ಲವನಾಗಿ ಮೂಗೂರು ಜಾತ್ರಾ ವೈಭವವನ್ನು ಕಣ್ಣಾರೆ ಕಂಡ ಭಾವಾನುಭವ ಹಾಗೂ ಅಮ್ಮನ ಕೃಪೆಯಿಂದ ಬರೆದ ಲೇಖನವಿದು.

ಪುರಾತನ ಕಾಲದಿಂದಲೂ ಪ್ರಸಿದ್ಧವಾದ ಸ್ಥಳ ಮೂಗೂರು. ಶ್ರೀ ತ್ರಿಪುರಸುಂದರಿಯು ಮೂಕಾಸುರನನ್ನು ವಧಿಸಿದ ಸ್ಥಳವಾದ್ದರಿಂದ ಊರಿಗೆ ಮೂಕಾಸುರನ ಊರು ಹಾಗೂ ಮೂಗೂರು ಎಂಬುದಾಗಿ ಹೆಸರು ಬಂದಿದೆ. 4ನೇ ಶತಮಾನದಿಂದ 10ನೇ ಶತಮಾನದವರೆಗೆ ಗಂಗರು, 11ನೇ ಶತಮಾನದವರೆಗೆ ಚೋಳರು, ಹಾಗೂ 12ನೇ ಶತಮಾನದಲ್ಲಿ ಹೊಯ್ಸಳರು, ಚೋಳರನ್ನು ಸೋಲಿಸಿ, ಓಡಿಸಿದರು ಎನ್ನುತ್ತದೆ ಊರಿನ ಇತಿಹಾಸ. ಮೈಸೂರು ಅರಸರು ಸಹ ಮೂಗೂರನ್ನು ಆಳುತ್ತಾ ಬಂದಿರುವುದು ಉಲ್ಲೇಖನೀಯ.

ಊರಿನ ಮಧ್ಯಭಾಗದಲ್ಲಿ ಇರುವ ಶ್ರೀತ್ರಿಪುರ ಸುಂದರಿ ದೇವಸ್ಥಾನವು ತಿಬ್ಬಾದೇವಿಯ ಹೆಸರಿನಿಂದಲೂ ಪ್ರಜ್ವಲಿಸಿ ಭಕ್ತರ ಮನಸೂರೆಗೊಳ್ಳುತ್ತಿದೆ. ಎರಡು ಕಿಮೀ ದೂರದಲ್ಲಿ ಇರುವ ಸಣ್ಣ ಗ್ರಾಮ ಹೊಸಳ್ಳಿಯಲ್ಲಿ ಏಳು ಸೋದರಿಯರೊಂದಿಗೆ ವಾಸವಾಗಿದ್ದಳು ಎನ್ನುವುದು ಈ ಭಾಗದ ಜನತೆಯ ನಂಬಿಕೆ. ಇದು ಸತ್ಯವೂ ಇರಬಹುದು.

ಹಿಂದೆ ಮೂಗೂರಿನ ಪಾಳೇಗಾರನಾಗಿದ್ದ ಒಡ್ನ ಬಾಬಖಾನ್, ನಿರ್ಜನ ಪ್ರದೇಶ ಮತ್ತು ದಟ್ಟ ಕಾಡಾಗಿದ್ದ ಹೊಸಳ್ಳಿ ಗ್ರಾಮದ ಮೂಲಕ ಸೈನ್ಯ ಸಮೇತ ಪ್ರಯಾಣ ಮಾಡುತ್ತಿದ್ದಾಗ ಆಯಾಸಗೊಂಡು ನವಾಬನು ವಿಶ್ರಾಂತಿಗಾಗಿ ಶ್ರೀ ತ್ರಿಪುರಸುಂದರಿ ಅಮ್ಮ ನೆಲೆಸಿದ್ದಲ್ಲಿ ಬೀಡುಬಿಟ್ಟನಂತೆ. ಅಲ್ಲಿ ತಂಪು ನೀಡುವ ಮರಗಳು ಮತ್ತು ಒಂದು ಕೆರೆ ಇದ್ದುದರಿಂದ ನೀರಿನ ಸೌಕರ್ಯ ಚೆನ್ನಾಗಿರುವುದೆಂದು, ವಿರಮಿಸಲು ಯೋಗ್ಯ ಸ್ಥಳವೆಂದು ಸೈನಿಕರೊಂದಿಗೆ ತಂಗಿದನು. ಅಲ್ಲೇ ನೀರಿನಿಂದ ಸುತ್ತುವರಿದ ಪುರಾತನವಾದ ನೇರಳೆ ಮರವೊಂದಿತ್ತು. ನವಾಬನ ಸೈನಿಕರು ಕುದುರೆಗಳಿಗೆ ಹುರುಳಿ ಬೇಯಿಸುವುದಕ್ಕಾಗಿ ಒಲೆ ನಿರ್ಮಿಸಲು ಕಲ್ಲನ್ನು ಹುಡುಕುವಾಗ ಅಲ್ಲಿಯೇ ಕಂಡ ನೆಲದ ಕಲ್ಲುಗಳನ್ನು ಕಂಡು ಕೀಳಲು ಪ್ರಯತ್ನಿಸಿದಾಗ ಅದು ಬಾರದೆ, ಕೊನೆಗೆ ಅವರು ಅಲ್ಲಿಯೇ ಕಲ್ಲು ಪ್ರತಿಮೆಗಳಂತೆ ನಿಂತರೆಂದು, ಕುದುರೆಗಳು ನೀರು ಕುಡಿಯಲು ಹೋಗಿ ಅವುಗಳ ಕಾಲುಗಳು ಹೂತು ಕೊಂಡವೆಂದು ವಿಶ್ರಮಿಸುತ್ತಿದ್ದ ನವಾಬನಿಗೆ ಉಳಿದ ಸೈನಿಕರು ತಿಳಿಸಲಾಗಿ, ದಿಗ್ಭ್ರಾಂತನಾದ ನವಾಬನು ವಿಮೋಚನೆಗಾಗಿ ಮಂಡಿಯೂರಿ ದೇವರಲ್ಲಿ ಬಹಳ ಭಕ್ತಿಯಿಂದ ಪ್ರಾರ್ಥಿಸಿದನಂತೆ. ಕೋರಿಕೆಯ ಫಲದಿಂದ ಸೈನಿಕರು ಮತ್ತು ಕುದುರೆಗಳು ಸಮಸ್ಯೆಯಿಂದ ಪಾರಾದವಂತೆ.

ಊಟೋಪಚಾರಗಳು ಆದ ನಂತರ ರಾತ್ರಿ ಎಲ್ಲರೂ ಗಾಢನಿದ್ರೆಯಲ್ಲಿದ್ದಾಗ ನವಾಬನಿಗೆ ಶ್ರೀ ತ್ರಿಪುರ ಸುಂದರಿಯು ಕಾಣಿಸಿಕೊಂಡಳಂತೆ. ನವಾಬನು ಯಾರೆಂದು, ಕೇಳಲಾಗಿ ನಾನು ಶ್ರೀ ತ್ರಿಪುರ ಸುಂದರಿ, ನನ್ನ ಏಳು ಸೋದರಿಯರೊಂದಿಗೆ ಇಲ್ಲಿ ನೆಲೆಸಿರುವುದಾಗಿ ತಿಳಿಸಿದಳು. ಆಗ ನವಾಬನು; ನೀನು ಸತ್ಯದೇವತೆಯಾಗಿದ್ದರೆ, ಶಕ್ತಿ ಎನ್ನುವುದು ನಿನ್ನಲ್ಲಿದ್ದರೆ 12 ವರ್ಷದಿಂದ ಒಣಗಿರುವ ಜೋಳದ ಕಡ್ಡಿಯನ್ನು ತರಿಸಿ ತಲೆಕೆಳಗಾಗಿ ನೆಡಿಸುತ್ತೇನೆ. ಅದು ಒಂದು ರಾತ್ರಿಯಲ್ಲಿ ಚಿಗುರಿ ತೆನೆಬಿಡಬೇಕು ಮತ್ತು ನನ್ನ ಕುದುರೆಗಳನ್ನು ಕಟ್ಟಿರುವ ಗೂಟಗಳು ಚಿಗುರಬೇಕು. ಆಗ ನೀನು ಸತ್ಯದೇವತೆಯೆಂದು ನಂಬುತ್ತೇನೆ ಹಾಗೂ ನನ್ನ ರಾಜಧಾನಿಯಾದ ಮೂಗೂರಿನಲ್ಲಿ ಸುಂದರ ದೇವಾಲಯವನ್ನು ಕಟ್ಟಿಸುವುದಾಗಿ ವಾಗ್ದಾನ ಮಾಡುತ್ತೇನೆ, ಎಂದನಂತೆ. ದೇವಿ ಆಗಲೆಂದು ಒಪ್ಪಿಗೆ ಕೊಟ್ಟ ಮರುಕ್ಷಣ ಕುತೂಹಲಗೊಂಡ ನವಾಬ ಸೈನಿಕರನ್ನು ಕಳುಹಿಸಿ ಒಂದು ಒಣ ಜೋಳದ ಕಡ್ಡಿಯನ್ನು ತರಿಸಿ ನೆಟ್ಟು ಅದಕ್ಕೆ ಯಾರೂ ನೀರು ಹಾಕದಂತೆ ಕಟ್ಟಪ್ಪಣೆ ಮಾಡಿ ಕಾವಲಿರಿಸುತ್ತಾನೆ. ಹಾಗೆಯೇ ನವಾಬನು ಇದನ್ನು ಪರೀಕ್ಷಿಸಲು ತಾನೇ ಕಾದು ಕುಳಿತನು. ಮಧ್ಯರಾತ್ರಿ ವೇಳೆಯಲ್ಲಿ ಜೋಳದ ಕಡ್ಡಿ ಚಿಗುರುವುದನ್ನು ನೋಡಿ ನವಾಬನಿಗೆ ಕಣ್ಣು ಕೋರೈಸಿ ಸಿಡಿಲು ಬಡಿದಂತೆ ಆಯಿತು. ಸೈನಿಕರು ಆಶ್ಚರ್ಯಚಕಿತರಾದರು. ಆಗ ನವಾಬನು ದೇವಿಯನ್ನು ಹೊಗಳಿ ಕೊಂಡಾಡಿದನು. ತನ್ನ ವಾಗ್ದಾನದಂತೆ ತಾನು ಕಂಡ ಆ ದಿವ್ಯಮೂರ್ತಿಯಂತೆಯೇ ವಿಗ್ರಹಮಾಡಿಸಿ ಮೂಗೂರಿನಲ್ಲಿ ಪ್ರತಿ ಷ್ಠಾಪಿಸಿದನಂತೆ. ಮೂಗೂರಲ್ಲಿ ಬಂದು ನೆಲೆಸಿದ ಶ್ರೀತ್ರಿಪುರ ಸುಂದರಿಯು ಜಗನ್ಮಾತೆಯಾಗಿ ಭಕ್ತರ ಕೃಪೆಗೆ ಪಾತ್ರಳಾಗಿದ್ದಾಳೆ. ಮುಸಲ್ಮಾನ ಪಾಳೇಗಾರನು ಕಟ್ಟಿಸಿದ ದೇವಸ್ಥಾನವಾದ್ದರಿಂದ ಜಾತ್ರೆಯ ಮೊದಲನೇ ದಿನ ಅಪ್ರದಕ್ಷಿಣೆಯಾಗಿ ಮೆರವಣಿಗೆ ಬರುತ್ತದೆ ಹಾಗೂ ಇಲ್ಲಿ ತೆಪ್ಪೋತ್ಸವದ ನಂತರ ಜಾತ್ರಾ ಮಹೋತ್ಸವ ನಡೆಯುವುದು ಪದ್ಧತಿ. ನವಾಬನ ನೆನಪಾಗಿ ದೇವಸ್ಥಾನದ ಅಂಗಳದಲ್ಲಿ ಇಂದಿಗೂ ಇವನ ಮೂರ್ತಿ ಕಾಣಬಹುದಾಗಿದೆ.

ಇಲ್ಲಿ ನಡೆಯುವ ಚಿಗುರು ಕಡಿಯುವ ಹಬ್ಬದಂದು ವಿಸ್ಮಯವೆನಿಸುವ ವೈಶಿಷ್ಟವಿದೆ. ಮರದ ಒಂದು ಕೊಂಬೆಯನ್ನು ಸವರಿದರೆ ಅದು ಪುನಃ ಚಿಗುರಬೇಕಾದರೆ ಸುಮಾರು ದಿನಗಳು ಬೇಕಾಗುತ್ತದೆ. ಆದರೆ ಶ್ರೀ ತ್ರಿಪುರಸುಂದರಿ ಅಮ್ಮನವರ ರಥೋತ್ಸವದ ಮಧ್ಯರಾತ್ರಿ ಮೂಗೂರಿನಿಂದ ಎರಡು ಕಿಮೀ ದೂರದ ಹೊಸಹಳ್ಳಿಯಲ್ಲಿರುವ ಪುರಾತನವಾದ ನೇರಳೆ ಮರದ ಒಂದು ಕೊಂಬೆ ಸವರಿದರೆ ಅದು ಮಾರನೇ ದಿನ ಸಾಯಂಕಾಲದ ವೇಳೆಗೆ ಚಿಗುರುವುದನ್ನು ಇಂದಿಗೂ ಕಾಣಬಹುದಾಗಿದೆ. ಇದು ಆದಿಶಕ್ತಿಯ ಪವಾಡವೆಂದು ಇಲ್ಲಿನವರು ಹೇಳುತ್ತಾರೆ.

ನೇರಳೆ ಮರದಲ್ಲಿ ಚಿಗುರು ಕಡಿಯುವ ವ್ಯಕ್ತಿ ಅಮ್ಮನ ಪೂಜೆಯನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನೆರವೇರಿಸಿ ನೇರಳೆ ಮರ ಇರುವ ಹೊಸಹಳ್ಳಿಗೆ ಮಧ್ಯರಾತ್ರಿಯಲ್ಲಿ ಹೋಗುತ್ತಾನೆ. ಅಮ್ಮನವರ ಸಹೋದರಿಯರು ನೆಲೆಸಿರುವರು ಎಂದು ನಂಬಿರುವ ನೇರಳೆ ಮರಕ್ಕೆ ಪೂಜೆ ಮಾಡಿ, ಮರ ಹತ್ತಿ ತನಗೆ ತೋರಿದ ಕೊಂಬೆಯನ್ನು ಸವರಿ ನಂತರ ಅದಕ್ಕೆ ಅರಿಶಿನದ ಬಟ್ಟೆ ಕಟ್ಟಿ ಹಿಂತಿರುಗುವನು. ಮರುದಿನ ಸುಮಾರು ನಾಲ್ಕು ಗಂಟೆ ಸಮಯಕ್ಕೆ ಕಡಿದ ಕೊಂಬೆ ಚಿಗುರಲಾರಂಬಿಸುತ್ತದೆ. ಇದೇ ಸಮಯದಲ್ಲಿ ಮೂಗೂರಿನಲ್ಲಿ ಅಮ್ಮನವರ ಹೂವಿನ ಪಲ್ಲಕ್ಕಿ ಉತ್ಸವ ಹೊರಡುವುದು. ಚಿಗುರನ್ನು ಕಿತ್ತು ಹೊಂಬಾಳೆಯಲ್ಲಿ ಮುಚ್ಚಿ ಬೆಳ್ಳಿ ತಟ್ಟೆಯಲ್ಲಿ ಇಟ್ಟು ವಾದ್ಯ ಸಮೇತ ಮೂಗೂರಿಗೆ ತರುವರು.

ಕೊಂಬೆಯಲ್ಲಿ ಚಿಗುರು 7, 11 ಸಂಖ್ಯೆಯಲ್ಲಿ ಒಡೆದರೆ ನಾಡಿಗೆ ಅಶುಭವೆಂದು, 5, 9, 12 ಸಂಖ್ಯೆಯಲ್ಲಿ ಒಡೆದರೆ ನಾಡಿಗೆ ಶುಭವೆಂದು ಹೇಳುತ್ತಾರೆ. ಪವಾಡವೆಂಬಂತೆ ಹೀಗೆ ಒಂದೇ ದಿನದಲ್ಲಿ ಕೊಂಬೆಯಲ್ಲಿ ಮೂಡಿದ ಚಿಗುರು ಬಂಗಾರದ ರೇಖೆಯಂತೆ ಹೊಳೆಯುತ್ತಿರುತ್ತದೆ ಮತ್ತು ಕೋಮಲವಾಗಿರುತ್ತದೆ. ಹೀಗೆ ಮೂಡಿದ ಚಿಗುರನ್ನು ಕಿತ್ತು ಮೈಸೂರು ಮಹಾರಾಜರ ಅರಮನೆಗೆ ಕಳುಹಿಸುವ ಪದ್ಧತಿ ಇದೆ.

ಮೂಗೂರಿನಲ್ಲಿ ನವಾಬನು ಸಣ್ಣದಾಗಿ ದೇವಸ್ಥಾನವನ್ನು ಕಟ್ಟಿಸಿದ್ದ. ಕಾಲಾನಂತರ ಅರಸುಮನೆತನದವರು ಸುತ್ತಲೂ ಅನೇಕ ದೇವರ ಚಿತ್ರಕಲೆಗಳಿರುವ ಪ್ರಾಕಾರವನ್ನು ಕಟ್ಟಿಸಿದರು. ಮಧ್ಯದ ಗುಡಿಯಲ್ಲಿರುವ ಶ್ರೀ ತ್ರಿಪುರಸುಂದರಿಯ ಮೂಲ ವಿಗ್ರಹವು ಪ್ರಕಾಶಿಸುತ್ತದೆ. ಕೈಯ್ಯಲ್ಲಿ ಶಂಖ, ಚಕ್ರಗಳು ಮತ್ತು ಅಭಯ ನೀಡುತ್ತಿರುವ ಹಸ್ತವು ಭಕ್ತರನ್ನು ಆಕರ್ಷಿಸುತ್ತದೆ. ಬಲಗಡೆಯಲ್ಲಿ ಶ್ರೀಮಹಾಗಣಪತಿ ಮತ್ತು ಸಪ್ತಕನ್ನಿಕೆಯರು ಇದ್ದಾರೆ. ದೇವಸ್ಥಾನದ ದಕ್ಷಿಣ ದಿಕ್ಕಿಗೆ ಒಂದು ಬಾಗಿಲಿದೆ, ಇದನ್ನು ಪ್ರತೀ ಜಾತ್ರೆಗೊಮ್ಮೆ ತೆರೆಯಲಾಗುತ್ತದೆ. ಪ್ರಾಕಾರದ ಮೇಲೆ ಹತ್ತಿ ನೋಡಿದರೆ ದೂರದಲ್ಲಿ ಚಾಮುಂಡಿಬೆಟ್ಟ, ಬಿಳಿಗಿರಿರಂಗನಬೆಟ್ಟ, ತಲಕಾಡು, ಮುಡುಕುತೊರೆ ಮತ್ತು ಸುತ್ತಮುತ್ತ ರಾತ್ರಿವೇಳೆ ಮಿನುಗುವ ದೀಪಗಳು ಮನೋಹರವಾಗಿ ಕಾಣುವುದುಂಟು.

ಈ ಸಂದರ್ಭದಲ್ಲಿ ಪುರಾಣಗಳಲ್ಲಿ ಹೇಳಿರುವ ಶ್ರೀತ್ರಿಪುರಸುಂದರಿ ಅಮ್ಮನ ಸಹೋದರಿಯರನ್ನ ನೆನೆಯಲೇಬೇಕು: ಮೂಗೂರಿನ ತಿಬ್ಬಾದೇವಿ, ಸೋಸಲೆಯ ಶ್ರೀಹೊನ್ನಾದೇವಿ, ಬನ್ನೂರಿನ ಶ್ರೀಹೇಮಾಂದ್ರದೇವಿ, ಹಂಚಿತಾಳುವಿನ ಮಂಚಾದೇವಿ, ಕಳಲೆಯ ಕೈವಲ್ಯದೇವಿ, ಅರಕೂಟಗಲಿನ ಶ್ರೀಕೊಟಗಲದೇವಿ, ಬೆಳಗೊಳದ ಶ್ರೀಹಿರಿದೇವಿಯರು.

ಶ್ರೀ ತ್ರಿಪುರಸುಂದರಿ ದೇವಸ್ಥಾನದಲ್ಲಿ ನಿತ್ಯವೂ ಪೂಜೆಗಳು ನಡೆಯುತ್ತವೆ. ಈ ಊರಿನ ಬೀದಿಗಳಲ್ಲಿ ಪಸರಿಸುವ ಧನಾತ್ಮಕ ಹವಾಗುಣ, ಗಂಟೆಯ ನಾದದೊಂದಿಗೆ ಬೆರೆತ ಮಂತ್ರಘೋಷಗಳ ಓಂಕಾರ, ಕರ್ಪೂರದ ಘಮ, ಶ್ರೀಗಂಧದ ಪರಿಮಳ ಮತ್ತು ಫಲ-ಪುಷ್ಪಗಳ ಸುವಾಸನೆ ಎಂಥಹವರ ಹೃನ್ಮನಗಳನ್ನು ಹಗುರಗೊಳಿಸಿ ನಿರುಮ್ಮಳಗೊಳಿಸುವ ಶಕ್ತಿ ಇಲ್ಲಿದೆ. ಪ್ರತಿ ಶುಕ್ರವಾರ ಅಮ್ಮನಿಗೆ ಅಭಿಷೇಕ ನೆರವೇರುತ್ತದೆ. ಕಾರ್ತಿಕ ಮಾಸಗಳಲ್ಲಿ ಸೋಮವಾರದ ದಿನಗಳಲ್ಲಿ ವಿಶೇಷ ಪೂಜೆ ನಡೆಯುವುದು.

ಊರು ಅಭಿವೃದ್ಧಿಗೊಂಡಂತೆ ಗ್ರಾಮದ ಸುತ್ತಾ ಮೂರು ಕಬಿನಿ ವಿತರಣಾ ನಾಲೆಗಳು ಹರಿದು ಸಾವಿರಾರು ಎಕರೆ ಅಚ್ಚುಕಟ್ಟಿಗೆ ನೀರುಣಿಸುತ್ತಿವೆ. ಗ್ರಾಮದ ಪಕ್ಕ ಮಳೆಗಾಲದಲ್ಲಿ ತುಂಬಿ ಹರಿಯುವ ಮೂಗೂರು ಅಡ್ಡಹಳ್ಳ ಮತ್ತು ಸುಮಾರು 40 ಎಕರೆ ವಿಸ್ತೀರ್ಣವುಳ್ಳ ಸುಂದರವಾದ ಬಾಬಾಕೆರೆ ದೇವಸ್ಥಾನದ ಹಿಂಭಾಗದಲ್ಲಿದೆ. ದೂರದಲ್ಲಿ ಕಾಣುವ ಬೆಟ್ಟ-ಗುಡ್ಡಗಳು, ಸಮತಟ್ಟಾದ ಹೊಲ-ಗದ್ದೆಗಳು ಎಲ್ಲವೂ ಕಾವ್ಯದಲ್ಲಿ ಓದಿದ ಪಂಪನ ಬನವಾಸಿ ಯಂತೆ ಮುಗೂರು ಸುಂದರವಾಗಿದೆ. ಇದರ ಪರಿಣಾಮವೇ ಇಲ್ಲಿ ಹುಟ್ಟಿದ ಬಹಳಷ್ಟು ಜನರು ಸಾಧಕರಾಗಿ ಪ್ರಸಿದ್ಧಿಹೊಂದಿದ್ದಾರೆ.

ಪ್ರತೀ ವರ್ಷ ಜನವರಿ ತಿಂಗಳಲ್ಲಿ ಜಾತ್ರೆಯು ವೈಭವಯುತವಾಗಿ ಯಾವುದೇ ತಾರತಮ್ಯ ವಿಲ್ಲದೆ ನಡೆಯುತ್ತದೆ. ಅಮ್ಮನ ಜಾತ್ರಾ ಸಂಭ್ರಮ ವನ್ನು ಕಣ್ತುಂಬಿಕೊಳ್ಳಲು ಭೇಟಿ ಕೊಡಲೇಬೇಕಿರುವ ಪುಣ್ಯಸ್ಥಳ ಮೂಕನ-ಊರು-ಮೂಗೂರು. ಶ್ರೀತ್ರಿಪುರ ಸುಂದರಿ ದೇವಿಯು 5, 9, 12 ಸಂಖ್ಯೆಯಲ್ಲಿ ಚಿಗುರೊಡೆದು ನಾಡಿಗೆ ಶುಭ, ಹೊಸ ವರ್ಷಕ್ಕೆ ಸಮೃದ್ಧ ಮಳೆ-ಬೆಳೆ ಆಗಿ, ಯಾವುದೇ ಅಹಿತಕರ ಘಟನೆಗಳು ರಾಜ್ಯ ಹಾಗೂ ದೇಶದಲ್ಲಿ ನಡೆಯದಿರಲಿ ಮತ್ತು ಜನತೆಗೆ ಸುಖ-ಶಾಂತಿ ನೀಡಲೆಂದು ಪ್ರಾರ್ಥಿಸೋಣ.

ಸಮಸ್ತ ಓದುಗರಿಗೆ ಹೊಸ ವರ್ಷದ ಹಾರ್ಧಿಕ ಶುಭಾಷಯಗಳು.

ಮೈಸೂರು ನಗರಾದ್ಯಂತ ಸೈಬರ್ ವಂಚನೆ ಬಗ್ಗೆ ಅರಿವು

ಸಾಮಾಜಿಕ ಜಾಲತಾಣಗಳಲ್ಲಿ, ಹೆಚ್ಚು ಜನರು ಸೇರುವ ಸ್ಥಳಗಳಲ್ಲಿ ಸೈಬರ್ ಪೊಲೀಸರಿಂದ ತಿಳುವಳಿಕೆ



ಕುಕ್ಕರಹಳ್ಳಿ ಕೆರೆಯಲ್ಲಿ ವಾಕಿಂಗ್, ಜಾಗಿಂಗ್ ಮಾಡಲು ಬಂದ ಸಾರ್ವಜನಿಕರಿಗೆ ಸೈಬರ್ ಪೊಲೀಸರು ಜಾಗೃತಿ ಮೂಡಿಸುತ್ತಿರುವುದು.

> ❝ ಸೈಬರ್ ವಂಚನೆಯಲ್ಲಿ ಪ್ರಮುಖವಾಗಿ ಹಿರಿಯ ನಾಗರಿಕರು, ಮಹಿಳೆಯರು ಟಾರ್ಗೆಟ್ ಆಗುತ್ತಿರುವ ಹಿನ್ನೆಲೆಯಲ್ಲಿ ಅದನ್ನು ತಪ್ಪಿಸುವ ಸಲುವಾಗಿ ವಿಶೇಷವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಇದಕ್ಕೆ ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.
>
> –ಸೀಮಾ ಲಾಟ್ಕರ್, ಆಯುಕ್ತ, ಮೈಸೂರು ನಗರ ಪೊಲೀಸ್

ಮೈಸೂರು,ಜ.2(ಜಿಎ)–ಸೈಬರ್ ವಂಚನೆ ಸುಳಿಗೆ ಹಿರಿಯ ನಾಗರಿಕರು, ವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಸಿಲುಕುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಸೈಬರ್ ಪೊಲೀಸರು ಮೈಸೂರು ನಗರದಾದ್ಯಂತ ವಿಶೇಷವಾಗಿ ಅರಿವು ಮೂಡಿಸಲು ಮುಂದಾಗಿದ್ದಾರೆ.

ಅಲ್ಪ ಅವಧಿಯಲ್ಲಿ ಹೆಚ್ಚು ಹಣಗಳಿಸುವ ಉದ್ದೇಶದಿಂದ ವಿದ್ಯಾವಂತರು ಆನ್‌ಲೈನ್‌ನಲ್ಲಿ ಗೇಮಿಂಗ್, ಶೇರ್ ಮಾರುಕಟ್ಟೆ, ಹಣ ಹೂಡಿಕೆ, ಹಣ ಡಬಲಿಂಗ್ ಸೇರಿದಂತೆ ನಾನಾ ಮಾರ್ಗದಲ್ಲಿ ಹಣ ಗಳಿಸುವ ಮಾರ್ಗ ಅನುಸರಿಸಿ ಸೈಬರ್ ಜಾಲಕ್ಕೆ ಸಿಲುಕುತ್ತಿದ್ದಾರೆ. ಈ ರೀತಿಯ ಪ್ರಕರಣಗಳಲ್ಲಿ ನಗರ ಪ್ರದೇಶದ ವಿದ್ಯಾವಂತರು, ಹಿರಿಯರು ಸೈಬರ್ ವಂಚಕರ ಪ್ರಮುಖ ಟಾರ್ಗೆಟ್ ಆಗಿರುವುದರಿಂದ ಅವರಿಗೆ ಅರಿವು ಮೂಡಿಸಲು ಪೊಲೀಸರು ನಾನಾ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಜನರು ಹೆಚ್ಚು ಸಾಮಾಜಿಕ ಜಾಲತಾಣದಲ್ಲಿ ಸಮಯ ಕಳೆಯುವ ಉದ್ದೇಶದಿಂದ ಪೊಲೀಸ್ ಇಲಾಖೆಯೂ ಸಾಮಾಜಿಕ ಜಾಲತಾಣದಲ್ಲಿ ಅರಿವು ಮೂಡಿಸಿದ್ದು, ಅದರ ಮುಂದುವರೆದ ಭಾಗವಾಗಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನಿರ್ದೇಶನದಂತೆ ಇತ್ತೀಚೆಗೆ ನಗರ ಪ್ರದೇಶದಲ್ಲಿ ಹೆಚ್ಚು ಸಾರ್ವಜನಿಕರು ಸೇರುವ ಸ್ಥಳದಲ್ಲಿ ಜನರಿಗೆ ಸೈಬರ್ ವಂಚನೆಗಳ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ.

ಪ್ರಮುಖವಾಗಿ ಚಾಮುಂಡಿಬೆಟ್ಟ, ಕುಕ್ಕರಹಳ್ಳಿ ಕೆರೆ, ಲಿಂಗಾಬುದಿ ಕೆರೆ, ಶಿವಾಜಿ ಉದ್ಯಾನವನ ಸೇರಿದಂತೆ ಪ್ರಮುಖ ಉದ್ಯಾನವನಗಳಿಗೆ ಮುಂಜಾನೆ ವಾಕಿಂಗ್, ಜಾಗಿಂಗ್ ಮಾಡಲು ಬರುವ ಸಾರ್ವಜನಿಕರಿಗೆ ಸೈಬರ್ ಪೊಲೀಸರು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಜಾಗೃತಿ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು, ಮಹಿಳೆಯರಿಗೆ ಡಿಜಿಟಲ್ ಅರೆಸ್ಟ್, ಹಣ ಹೂಡಿಕೆ, ಕೆಲಸ ಕೊಡಿಸುವುದಾಗಿ ವಂಚನೆ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ವಂಚನೆಗೆ ಸಿಲುಕಿದಾಗ ತಕ್ಷಣ ಸಹಾಯವಾಣಿ 1930ಗೆ ಕರೆ ಮಾಡಿ ಎಂದು ತಿಳಿಸಿ, ಸೈಬರ್ ವಂಚನೆ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತ ಕರಪತ್ರಗಳನ್ನು ವಿತರಿಸಲಾಗುತ್ತದೆ. ಕೆಲವು ಹಿರಿಯರು, ಮಹಿಳೆಯರು ತಮಗೆ ಈ ಹಿಂದೆ ಆಗಿದ್ದ ಸೈಬರ್ ವಂಚನೆಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿ ಸಲಹೆ ಪಡೆದುಕೊಂಡು ಪೊಲೀಸರ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ವಿದ್ಯಾರ್ಥಿಗಳಿಗಾಗಿ 'ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ; ಮೈಸೂರು ಆಕಾಶವಾಣಿಯಿಂದ ವಿಶೇಷ ಸರಣಿ ಕಾರ್ಯಕ್ರಮ

ಮೈಸೂರು, ಜ.2–ಮೈಸೂರು ಆಕಾಶವಾಣಿ (ಎಫ್‌ಎಂ 100.6) 2026ನೇ ವರ್ಷಕ್ಕೆ ಕಾಲಿಟ್ಟಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗಾಗಿ 'ಪರೀಕ್ಷೆಗಾಗಿ ಸಿದ್ಧರಾಗೋಣ ಬನ್ನಿ' ವಿಶೇಷ ಬಾನುಲಿ ಕಾರ್ಯಕ್ರಮ ಪ್ರಸಾರ ಮಾಡಲಾಗುತ್ತಿದೆ. ಈ ಕಾರ್ಯಕ್ರಮ ಯುವವಾಣಿಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಪ್ರತಿ ಸೋಮವಾರ ಮತ್ತು ಗುರುವಾರ ರಾತ್ರಿ 8 ಗಂಟೆಗೆ ಅನುಭವಿ ಪ್ರಾಧ್ಯಾಪಕರೊಂದಿಗೆ ಸಂವಾದ, ಸಂದರ್ಶನ ನಡೆಸಲಾಗುವುದು. ಇದರ ಮರುಪ್ರಸಾರವನ್ನು ಪ್ರತಿ ಬುಧವಾರ ಮತ್ತು ಶನಿವಾರ ಬೆಳಿಗ್ಗೆ 8.30ಕ್ಕೆ ಪ್ರಸಾರ ಮಾಡಲಾಗುವುದು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಪ್ರತಿ ಭಾನುವಾರ ಬೆಳಗ್ಗೆ 10.30 ಗಂಟೆಯಿಂದ 11.15ರವರೆಗೆ ಅನುಭವಿ ಶಿಕ್ಷಕರೊಂದಿಗೆ ಸಂವಾದ, ಸಂದರ್ಶನ ನಡೆಸಲಾಗುವುದು. ಇದರ ಮರುಪ್ರಸಾರವನ್ನು ಪ್ರತಿ ಬುಧವಾರ ರಾತ್ರಿ 8ಕ್ಕೆ ಪ್ರಸಾರ ಮಾಡಲಾಗುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ವಿದ್ಯಾವಂತನಿಗಿರುವ ಗೌರವ ಯಾವ ನಟ, ರಾಜಕಾರಣಿಗೂ ಇಲ್ಲ

● ನಟ ದುನಿಯಾ ವಿಜಯ್ ಘಂಟಾಘೋಷ ● ಗಂಗೋತ್ರಿಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವದಲ್ಲಿ ಭಾಗಿ

ಮೈಸೂರು, ಜ.2(ವಿವಿಹೆಚ್)– ಸಂವಿಧಾನ ಮೂಲ ಆಶಯ 'ಸಮಾನತೆ' ಆದರಿಸಿ 'ಲ್ಯಾಂಡ್ ಲಾರ್ಡ್' ಚಿತ್ರ ನಿರ್ದೇಶಿಸಿದ್ದು, ಇದೇ ಜ.23 ರಂದು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದೇವೆ ಎಂದು ನಟ, ನಿರ್ದೇಶಕ ದುನಿಯಾ ವಿಜಯ್ ತಿಳಿಸಿದರು.

ದಲಿತ ವಿದ್ಯಾರ್ಥಿ ಪರಿಷತ್, ದಲಿತ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿರುವ ಕ್ಲಕ್ ಟವರ್ ಬಳಿ ಶುಕ್ರವಾರ ಆಯೋಜಿಸಲಾಗಿದ್ದ ಭೀಮಾ ಕೋರೆಗಾಂವ್ ಯುದ್ಧದ ವಿಜಯೋತ್ಸವ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಮೇಲಿನ ಗೌರವದಿಂದ ನಾನು ಮಾಡುವ ಎಲ್ಲಾ ಸಿನೆಮಾದಲ್ಲಿ ಅವರ ವಿಚಾರ ಗಳನ್ನು ಅಳವಡಿಸಿಕೊಂಡಿದ್ದೇನೆ. ಸಂವಿಧಾನದ ಮಹತ್ವ ರಾಜ್ಯದ ಪ್ರತೀ ಹಳ್ಳಿ, ಹಳ್ಳಿಗೂ ತಲುಪಬೇಕು. ಸಿನಿಮಾ ಮೂಲಕ ತಿಳುವಳಿಕೆ ನೀಡುವುದಾದರೆ ಸಂವಿಧಾನದ ಬಗ್ಗೆ, ಸಮಾನತೆಯ ಬಗ್ಗೆ ತಿಳಿಯಪಡಿಸಬೇಕೆಂಬ ಉದ್ದೇಶ ಹೊಂದಿರುವುದಾಗಿ ಅವರು ಹೇಳಿದರು.

ವಿದ್ಯೆಗೆ ಇರುವ ಮಹತ್ವ ಯಾವ ಸಿನಿಮಾ ನಟನಿಗೂ ಇಲ್ಲ, ರಾಜಕಾರಣಿಗೂ ಇಲ್ಲ. ವಿದ್ಯಾವಂತನಿಗೆ ಮಾತ್ರ ಹೆಚ್ಚಿನ ಗೌರವ ಸಿಗುತ್ತದೆ ಎಂಬ ಉದ್ದೇಶದಿಂದ ನಾನು ಮಾಡುವ ಪ್ರತೀ ಸಿನಿಮಾದಲ್ಲಿ ಬಾಬಾ ಸಾಹೇಬರ ವಿಷಯಗಳನ್ನು ಅಳವಡಿಸಿ



ನಟ ದುನಿಯಾ ವಿಜಯ್ ಗಿಡಕ್ಕೆ ನೀರೆರೆಯುವ ಮೂಲಕ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಎದೆ ತಟ್ಟಿ ಸಿನಿಮಾ ಮಾಡುತ್ತಿದ್ದೇನೆ. ಅದೇ ಕಾರಣಕ್ಕೆ ಕೆಲವರಲ್ಲಿ ಅಸೂಯೆಯೂ ಇದೆ. ಅಂಬೇಡ್ಕರ್ ವಿಚಾರಗಳನ್ನು ಪಾಲಿಸಿದರೆ ಬದುಕಿನಲ್ಲಿ ಜಯಿಸಬಹುದು ಎಂದು ಸಂತಸ ವ್ಯಕ್ತಪಡಿಸಿದರು.

ಬಾಬಾ ಸಾಹೇಬರ ತತ್ವ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡಿದ್ದೇನೆ. ಚಿತ್ರರಂಗದಲ್ಲಿಯೂ ನಿರಂತರ ಶೋಷಣೆಗಳು ನಡೆಯುತ್ತಿದ್ದವು. ಭೀಮಾ ಚಿತ್ರದ ಮೂಲಕ ನನ್ನ ಹೆಸರನ್ನು ಭೀಮಾ ಎಂದು ಕರೆಸಿಕೊಳ್ಳಲು ಆರಂಭಿಸಿದಾಗ ನನ್ನ ಮೇಲಿನ ಶೋಷಣೆ ನಿಂತು ಹೋದವು ಎಂದು ತಮ್ಮ ಮೇಲಿನ ದೌರ್ಜನ್ಯದ ಕುರಿತು ಪ್ರಸ್ತಾಪಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, 208 ವರ್ಷಗಳ ಹಿಂದೆ ಮಹಾರ್ ಸೈನಿಕರು ಶೈಕ್ಷಣಿಕ ಅಸಮಾನತೆ, ಸಾಮಾಜಿಕ ಅನ್ಯಾಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರು. ಆ ಹೋರಾಟಕ್ಕೆ ಸಂಘಟನೆ ಹಾದಿಯನ್ನು ತುಳಿದರು. ಆದರೆ ಇಂದು ನಾಯಕತ್ವಕ್ಕಾಗಿ ಸಂಘಟನೆ ಮಾಡಲಾಗುತ್ತಿದೆ. ಎಲ್ಲರೂ ಒಗ್ಗಟ್ಟಾಗಿ ಹೋರಾಡಿ, ಸಮ ಸಮಾಜ ನಿರ್ಮಾಣ ಮಾಡಲು ಸಂಘಟನೆ ಮಾಡಲು ಯಾರೂ ಮುಂದೆ ಬರುತ್ತಿಲ್ಲ. ಅಂಬೇಡ್ಕರ್ ವಿಚಾರಧಾರೆಗಳು, ಅಂಬೇಡ್ಕರ್ ಆಶಯಗಳಿಗೆ ಧಕ್ಕೆ ಉಂಟು ಮಾಡಲಾಗುತ್ತಿದೆ ಎಂದು ಬೇಸರಿಸಿದರು.

ವಿದ್ಯಾರ್ಥಿಗಳು ರಾಜಕೀಯ ದೊಂಬರಾಟಕ್ಕೆ ಸಿಲುಕಿ, ತಮ್ಮ ಮೂಲ ಆಶಯಗಳನ್ನು ಮರೆತಿದ್ದಾರೆ. ಭೀಮ ಕೋರೆಗಾಂವ್ ಯುದ್ಧದ ವಿಜಯ ಯಾತ್ರೆಯನ್ನು ಪಠ್ಯಪುಸ್ತಕದಲ್ಲಿ ಸೇರಿಸುವಂತೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಬೇಕು. ಆ ಮೂಲಕ ಮಹಾನ್ ನಾಯಕ ಜೀವನಗಾಥೆಯನ್ನು ಮುಂದಿನ ಪೀಳಿಗೆ ಓದುವಂತೆ ಮಾಡಬೇಕಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ದಲಿತರು ಈ ದೇಶದ ಆಳುವ ದೊರೆಯಾಗಬೇಕು ಎಂದು ಸಂದೇಶ ನೀಡಿದ್ದರು. ಆದರೆ ನಾವು ವಿದ್ಯಾವಂತರಾದರೂ ಗುಲಾಮರ ಮನಸ್ಥಿತಿಯಲ್ಲಿಯೇ ಕಾಲ ಕಳೆಯುತ್ತಿದ್ದೇವೆ. ಅಂಬೇಡ್ಕರ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದಾಗ ಆಳುವ ದೊರೆಯಾಗುತ್ತೇವೆ. ಆದರೆ, ಇಂದು ನಾವು ಬೇಡುವ ಭಿಕ್ಷುಕರಾಗಿ ಉಳಿದಿದ್ದೇವೆ. ಹೆಸರಿಗೆ ಬಹುಸಂಖ್ಯಾತರಾಗಿದ್ದು, ಸಂಕುಚಿತ ಭಾವನೆ ನಮ್ಮನ್ನು ಗುಲಾಮಗಿರಿಯತ್ತ ದೂಡುತ್ತಿದೆ. ಮಹಾರ್ ಸೈನಿಕರ ಹೋರಾಟದಿಂದ ಸ್ಫೂರ್ತಿ ಪಡೆದು, ರಾಜಕೀಯ ಸ್ಥಾನಮಾನ ಪಡೆಯುವತ್ತ ಚಿತ್ತ ನೆಡಬೇಕು ಎಂದು ಸಲಹೆ ನೀಡಿದರು.

> ಕೋರೆಗಾಂವ್ ವಿಜಯ ಯಾತ್ರೆಯನ್ನು ಶಾಲಾ ಹಂತದಲ್ಲಿಯೇ ಮಕ್ಕಳಿಗೆ ತಿಳಿಸಿಕೊಡುವ ಕೆಲಸ ಮಾಡಬೇಕಿದೆ. ರಾಜ್ಯದ ಪ್ರತಿ ಸರ್ಕಾರಿ ಶಾಲೆಗಳ ಮುಂದೆ ಕೋರೆಗಾಂವ್ ವಿಜಯಸ್ತಂಭ ಸ್ಥಾಪನೆ ಮಾಡಿ, ಪುಟ್ಟ ಮಕ್ಕಳಿಗೆ ವಿಜಯೋತ್ಸವದ ಅರ್ಥ ತಿಳಿಸುವ ಕೆಲಸ ಮಾಡಬೇಕು.
> -ದುನಿಯ ವಿಜಯ್, ನಟ

ಮಾಜಿ ಶಾಸಕ ಹರ್ಷವರ್ಧನ್, ಚಿಂತಕ ಬಿ.ಆರ್.ರಂಗಸ್ವಾಮಿ, ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ್, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಶಿವಶಂಕರ್, ಮಾಜಿ ಸದಸ್ಯ ಜಟ್ಟಿಹುಂಡಿ ಬಸವರಾಜ್, ಐಎಎಸ್, ಕೆಎಎಸ್ ತರಬೇತಿದಾರ ದೇವರಾಜ ಒಡೆಯರ್, ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯ ಸುರೇಶ್, ಮುಖಂಡರಾದ ಮಣಿಯಯ್ಯ ಭುಗತಹಳ್ಳಿ, ಜೆಟ್ಟಿಹುಂಡಿ ಬಸವರಾಜ್, ಮರಿದೇವಯ್ಯ, ಚಂದ್ರ ನಾಯಕ, ಶಿವಸ್ವಾಮಿ, ದಲಿತ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಹೆಚ್.ಪಿ.ವಿಶ್ವಪ್ರಸಾದ್, ಮೈಸೂರು ವಿವಿ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ರಮೇಶ್ ಕೊಳತ್ತೂರು ಉಪಸ್ಥಿತರಿದ್ದರು.

ನೈಸ್ ಸಂಸ್ಥೆಗೆ ತಕ್ಕ ಪಾಠ ಕಲಿಸುವುದು ಗೊತ್ತಿದೆ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಜ.2– ನೈಸ್ ಸಂಸ್ಥೆಯ ಕೆಲವು ಕೆಐಎಡಿಬಿ ಜಾಗವನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದೆವು. ಇದಕ್ಕೆ ಅವರು ತಕರಾರು ಎತ್ತಿದ್ದಾರೆ. ನೈಸ್‌ನವರು ತಾವು ಸರ್ಕಾರಕ್ಕಿಂತ ದೊಡ್ಡವರು ಎಂದು ಭಾವಿಸಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸುವುದು ನಮಗೆ ಗೊತ್ತಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುರುವಾರ ಹೇಳಿದ್ದಾರೆ.



ಡಿಕೆ.ಶಿವಕುಮಾರ್ ಬೆಂಗಳೂರಿನ ಚಲ್ಲಘಟ್ಟ ಹಾಗೂ ಭೀಮನಕುಪ್ಪೆಯ ಕೆಂಪೇಗೌಡ ಬಡಾವಣೆ ಸಮೀಪ ಸ್ಕೈಡೆಕ್ ನಿರ್ಮಾಣದ ಸ್ಥಳ ಪರಿಶೀಲನೆ ಹಾಗೂ ರಸ್ತೆ ಕಾಮಗಾರಿ ಪರಿಶೀಲನೆ ನಡೆಸಿದರು.

500 ಕೋಟಿ ರೂ. ಮೌಲ್ಯದ ಸ್ಕೈಡೆಕ್ ಯೋಜನೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಅವರು, ಭೂಮಿ ಲಭ್ಯತೆ, ವಿನ್ಯಾಸ ಸಾಧ್ಯತೆ, ಏರ್‌ಸ್ಪೇಸ್ ನಿರ್ಬಂಧಗಳು ಹಾಗೂ ಯೋಜನೆ ಅನುಷ್ಠಾನದ ಅವಧಿ ಕುರಿತು ಮಾಹಿತಿ ಪಡೆದರು.


ಬಳಿಕ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಹಾಗೂ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (NICE)ಗೆ ಸಂಬಂಧಿಸಿದ ಭೂ ವಿವಾದಗಳ ಕುರಿತು ಮಾತನಾಡಿದ ಅವರು, ಕಾನೂನು ವ್ಯವಹಾರ ಎದುರಾದರೆ ಪರ್ಯಾಯ ಭೂ ಜಾಗಗಳನ್ನು ಪರಿಶೀಲಿಸುವುದಾಗಿ ಹೇಳಿದರು.

ನೈಸ್ ಸಂಸ್ಥೆ ಸರ್ಕಾರಕ್ಕಿಂತ ನಾವೇ ದೊಡ್ಡವರು ಎಂಬ ಭ್ರಮೆಯಲ್ಲಿದೆ. ಅವರಿಗೆ ಸೂಕ್ತ ಪಾಠ ಕಲಿಸುವುದು ನನಗೆ ತಿಳಿದಿದೆ ಎಂದು ಕಿಡಿಕಾರಿದರು. ಯೋಜನೆಗೆ ಅಗತ್ಯವಿರುವ ಒಂದು ಭೂಮಿಗೆ ಸರ್ಕಾರ ನೈಸ್‌ನಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್‌ಒಸಿ) ಕೋರಿದೆ. ನಾವು ಅವರ ಬಳಿ ಎನ್‌ಒಸಿ ಮಾತ್ರ ಕೇಳಿದ್ದೇವೆ. ಆದರೆ, ಅವರು ಅದನ್ನು ನೀಡಿಲ್ಲ. ಆದರೂ, ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದು ತಿಳಿಸಿದರು.

ಯೋಜನೆಗಾಗಿ ಬಿಡಿಎ ವ್ಯಾಪ್ತಿಯಲ್ಲಿರುವ ಭೂಮಿ ಅಂತಿಮಗೊಳಿಸಲಾಗಿದ್ದು, ಬಿಡಿಎ ಯೋಜನೆಯನ್ನು ಜಾರಿಗೊಳಿಸಲಿದೆ. ಸ್ಕೈಡೆಕ್‌ಗಾಗಿ ನಾವು ಬೇರೆ ಕಡೆ ಬಿಡಿಎ ಜಾಗ ಗುರುತಿಸಿದ್ದೇವೆ. ವಿಮಾನ ಹಾರಾಟದ ಟವರ್ ಸಮಸ್ಯೆ ಇರುವ ಕಾರಣ ಇದನ್ನು ಸೂಕ್ತ ಜಾಗದಲ್ಲಿ ನಿರ್ಮಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಜನಾರ್ದನ ರೆಡ್ಡಿ ನಿವಾಸದಲ್ಲಿ ಮತ್ತೊಂದು ಬುಲೆಟ್ ಪತ್ತೆ!

ಬಳ್ಳಾರಿ: ಈ ಹಿಂದೆ ಗಣಿ ದೂಳಿನಿಂದಲೇ ಸುದ್ದಿಯಾಗಿದ್ದ ಬಳ್ಳಾರಿ ಈಗ ರಕ್ತ ರಾಜಕೀಯಕ್ಕೆ ಸಾಕ್ಷಿಯಾಗಿದ್ದು, ಬ್ಯಾನರ್ ವಿಚಾರವಾಗಿ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಹಾಗೂ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ನಡುವಿನ ಗಲಾಟೆ ರಾಜ್ಯ ಮಟ್ಟದಲ್ಲಿ ಸದ್ದು ಮಾಡುತ್ತಿದೆ.



ನಾರಾ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿಯ ಖಾಸಗಿ ಗನ್ ಮ್ಯಾನ್ ನಡೆಸಿದ ಫೈರಿಂಗ್ ನಲ್ಲಿ ಕಾಂಗ್ರೆಸ್ ಕಾರ್ಯಕರ್ತ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಲಾಗಿದೆ. ಅಲ್ಲದೆ ಗಾಳಿಯಲ್ಲಿ 12ಕ್ಕೂ ಹೆಚ್ಚು ಸುತ್ತು ಫೈರಿಂಗ್ ಮಾಡಲಾಗಿದೆ. ಆರಂಭದಲ್ಲಿ ಒಂದು ಬುಲೆಟ್ ಪತ್ತೆಯಾಗಿದ್ದು, ಇದೀಗ ಜನಾರ್ದನ ರೆಡ್ಡಿ ನಿವಾಸದಲ್ಲಿ ಮತ್ತೊಂದು ಬುಲೆಟ್ ಪತ್ತೆಯಾಗಿದೆ.

ಬ್ಯಾನರ್ ಕಟ್ಟುವ ವಿಚಾರವಾಗಿ ನಡೆದ ಗಲಾಟೆ ವಿಕೋಪಕ್ಕೆ ತಿರುಗಿ ಕಾಂಗ್ರೆಸ್ ಕಾರ್ಯಕರ್ತ ಗುಂಡೇಟಿಗೆ ಬಲಿಯಾದ ಘಟನೆಗೆ ಸಂಬಂಧಿಸಿದಂತೆ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರ ಆಪ್ತ ಸಹಾಯಕ ಚಾನೆಲ್ ಶೇಖರ್ ನೀಡಿದ ದೂರಿನ ಆಧಾರದ ಮೇಲೆ ಇಂದು ಎಫ್‌ಐಆರ್ ದಾಖಲಿಸಲಾಗಿದೆ. ಎಫ್‌ಐಆರ್‌ನಲ್ಲಿ ಜನಾರ್ದನ ರೆಡ್ಡಿ ಅವರನ್ನು ಮೊದಲ ಆರೋಪಿಯನ್ನಾಗಿ ಹೆಸರಿಸಲಾಗಿದೆ.

ಮಾಜಿ ಶಾಸಕ ಜಿ. ಸೋಮಶೇಖರ ರೆಡ್ಡಿ ಅವರನ್ನು ಎರಡನೇ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಮಾಜಿ ಸಚಿವ ಬಿ. ಶ್ರೀರಾಮುಲು ಅವರನ್ನು ಮೂರನೇ ಆರೋಪಿಯಾಗಿ, ಮತ್ತು ಬಳ್ಳಾರಿ ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್ ಅವರನ್ನು ನಾಲ್ಕನೇ ಆರೋಪಿಯನ್ನಾಗಿ ಮಾಡಲಾಗಿದೆ. ಎಫ್‌ಐಆರ್‌ನಲ್ಲಿ ಒಟ್ಟು 11 ಜನರನ್ನು ಹೆಸರಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕರು, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು ನ್ಯಾಯಾಂಗ ತನಿಖೆಗೆ ಆಗ್ರಹಿಸಿದ್ದಾರೆ

ಬಳ್ಳಾರಿ ಗಲಭೆ ಬಗ್ಗೆ ಮಾಜಿ ಪ್ರಧಾನಿ ದೇವೇಗೌಡರು ಕಳವಳ

ನೈಸ್ ವಿರುದ್ಧ ಕ್ರಮ ಕೈಗೊಳ್ಳುವ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಮೆಚ್ಚುಗೆ

ಬೆಂಗಳೂರು,ಜ.2– ಬಳ್ಳಾರಿಯಲ್ಲಿ ನಡೆದಿರುವ ಗುಂಡಿನ ದಾಳಿ, ಗಲಭೆ ಪ್ರಕರಣದ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.



ಪಕ್ಷದ ರಾಜ್ಯ ಕಚೇರಿಯಲ್ಲಿ ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬಳ್ಳಾರಿ ಘಟನೆಯನ್ನು ಟಿವಿಯಲ್ಲಿ ನೋಡಿದ್ದೇನೆ. ಗುಂಪು ಘರ್ಷಣೆ ಆಗಿದೆ. ಶಾಸಕರು, ಇನ್ನೂ ಯಾರು ಯಾರು ಭಾಗಿ ಆಗಿದ್ದಾರೆ ಎನ್ನುವುದು ಗೊತ್ತಿಲ್ಲ ಎಂದರು.

ಗಲಭೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಗುಂಡು ಹೊಡೆದವರು ಯಾರು ಎಂದು ಗೊತ್ತಿಲ್ಲ. ಜನಾರ್ಧನ ರೆಡ್ಡಿ ಅವರು ಮನೆಯಲ್ಲಿ ಇದ್ದಿದ್ದರೆ ಅಪಾಯ ಆಗ್ತಿತ್ತು ಎನ್ನುವ ಸುದ್ದಿ ನೋಡಿದೆ. ಎಲ್ಲಾ ವರದಿ ಬಂದ ಮೇಲೆ ಕ್ರಮ ಜರುಗಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈಗಾಗಲೇ ನಾಲ್ಕು ಎಫ್‌ಐಆರ್‌ಗಳು ಆಗಿವೆಯಂತೆ. ಖಾಸಗಿ ವ್ಯಕ್ತಿ ಹೊರಗಡೆಯಿಂದ ಗುಂಡು ಹೊಡೆದಿದ್ದು ಎಂದು ಸುದ್ದಿ ನೋಡಿದೆ. ನಿಖರವಾಗಿ ಹೀಗೆ ಎಂದು ಹೇಳಲು ನನಗೆ ಕಷ್ಟ ಶ್ರೀ ರಾಮುಲು ಅವರು ಜನಾರ್ಧನ ರೆಡ್ಡಿ ಅವರಿಗೆ ರಕ್ಷಣೆ ಕೊಡಬೇಕು ಎಂದು ಹೇಳಿದ್ದನ್ನು ಕೇಳಿದ್ದೇನೆ ಎಂದರು.

ಕುಮಾರಸ್ವಾಮಿ ಕ್ರಮ ಕೈಗೊಂಡಿದ್ದರು: ಗನ್ ಸಂಸ್ಕೃತಿ ರಾಜ್ಯಕ್ಕೂ ವ್ಯಾಪಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ಬಗ್ಗೆ ನಾನೇನು ಹೇಳಲ್ಲ. ಕುಮಾರಸ್ವಾಮಿ ಎರಡು ಸಲ ಸಿಎಂ ಆಗಿದ್ದಾಗಲೂ ಸಾಕಷ್ಟು ಕ್ರಮ ತಗೊಂಡಿದ್ದಾರೆ. ವಿಪಕ್ಷ ನಾಯಕನಾಗಿಯೂ ಹೋರಾಟ ಮಾಡಿ ದ್ದಾರೆ. ಬಳ್ಳಾರಿ ಘಟನೆ ಬಗ್ಗೆ ನಾನು ಏನೂ ಮಾತಾಡಲ್ಲ. ಗೃಹ ಸಚಿವರು ಸಮಯಕ್ಕೆ ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಾರೆ. ಅವಕಾಶ ಕೊಟ್ರೆ ಸಿಎಂ ಆಗ್ತಿನಿ ಎಂದು ಪರಮೇಶ್ವರ್ ಅವರು ಹೇಳಿದ್ದಾರೆ. ಆ ಕಡೆ ಜಾಸ್ತಿ ಗಮನ ಕೊಡ್ತಿದಾರೆ ಎಂದು ದೇವೇಗೌಡರು, ರಾಜ್ಯದ ಕಾನೂನು –ಸುವ್ಯವಸ್ಥೆ ಬಗ್ಗೆ ವ್ಯಂಗ್ಯವಾಡಿದರು.

ಡಿಕೆಶಿ ಹೇಳಿಕೆ ಬಗ್ಗೆ ಮೆಚ್ಚುಗೆ: ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನೈಸ್ ರೋಡ್ ವಿಚಾರದ ಬಗ್ಗೆ ಕಠಿಣವಾಗಿ ಮಾತಾಡಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯ, ಅವರದ್ದು ಅತಿಯಾಗಿದೆ ಎಂದು ಡಿಎಂಸಿ ಹೇಳಿದ್ದಾರೆ. ಡಿಕೆಶಿ ಹಾಗೆ ಹೇಳಿದ್ದು ತುಂಬಾ ಸಂತೋಷ. ಅವರು ಕ್ರಮ ಕೈಗೊಂಡರೆ ಬಹಳ ಸಂತೋಷ. ನಾವು ದೇವೇಗೌಡರ ಮೇಲೆ ಯಾವುದೇ ರಿಟ್ ಹಾಕಿಲ್ಲ ಎಂದು ಅಶೋಕ್ ಖೇಣಿ ಹೇಳ್ತಾರೆ. ಜನವರಿ 21ರಂದು ಸುಪ್ರೀಂ ಕೋರ್ಟ್‌ನಲ್ಲಿ ನೈಸ್ ಕೇಸ್ ಇದೆ. ಮುಖ್ಯ ಕಾರ್ಯದರ್ಶಿ ಅವರನ್ನು ಪಾರ್ಟಿ ಮಾಡಿಲ್ಲ. ಬಾಬಾ ಕಲ್ಯಾಣಿ ಅರ್ಜಿದಾರರಾಗಿದ್ದಾರೆ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತೆ ಎಂದು ನೋಡೋಣ. ಡಿಸಿಎಂ ತುಂಬಾ ಕಠಿಣವಾಗಿ ಹೇಳಿದ್ದಾರೆ. ಅವರ ಹೇಳಿಕೆಯನ್ನು ನಾನು ಸ್ವಾಗತಿಸುತ್ತೇನೆ ಎಂದರು.

2024ರಲ್ಲಿ ನಾನು ಸಿಎಂಗೆ ಪತ್ರ ಬರೆದಿದ್ದೇನೆ. ಎಷ್ಟು ಎಕರೆ ಯಾವ ಯಾವ ಜಾಗದಲ್ಲಿ ಭೂಮಿ ತೆಗೆದುಕೊಂಡಿದ್ದಾರೆ. ಇದರ ಮೇಲೆ ಕ್ರಮ ಕೈಗೊಳ್ಳಿ ಎಂದು ಪತ್ರದಲ್ಲಿ ಕೇಳಿದ್ದೇನೆ. ಖೇಣಿ ಮೇಲೆ ಏನು ಕ್ರಮ ತೆಗೆದುಕೊಳ್ತಾರೆ ಎಂಬುದನ್ನು ನೋಡೋಣ ಎಂದು ಹೇಳಿದರು.

ಏಯ್ ಭರತ್ ರೆಡ್ಡಿಗೆ ಸರಿಯಾಗಿ ಬುದ್ಧಿ ಹೇಳ್ರೀ...!

ಕಾಂಗ್ರೆಸ್ ಶಾಸಕನ ಮೇಲೆ ಸಿಎಂ ಸಿದ್ದರಾಮಯ್ಯ ಗರಂ

ಬೆಂಗಳೂರು, ಜ.2–ಬಳ್ಳಾರಿಯಲ್ಲಿ ಬ್ಯಾನರ್ ಕಟ್ಟುವ ವಿಚಾರಕ್ಕೆ ಶುರುವಾದ ಗಲಾಟೆಯ ಗುಂಡಿನ ದಾಳಿಗೆ ಕಾರ್ಯಕರ್ತನೊಬ್ಬ ಬಲಿಯಾಗಿದ್ದಾನೆ. ಈ ವಿಚಾರ ರಾಜ್ಯ ರಾಜಕಾರಣದಲ್ಲಿ ಭಾರೀ ಸದ್ದು ಮಾಡಿದೆ. ಈ ಘಟನೆಯಲ್ಲಿ ಸಿಎಂ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದು, ಶಾಸಕ ನಾರಾ ಭರತ್ ರೆಡ್ಡಿ ವಿರುದ್ಧ ಗರಂ ಆಗಿದ್ದಾರೆ. ಜೊತೆಗೆ ಪೊಲೀಸರ ಮೇಲೂ ಅಸಮಾಧಾನ ಹೊರಹಾಕಿದ್ದಾರೆ.



ಬಳ್ಳಾರಿ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಘಟನೆಯ ಮಾಹಿತಿ ನೀಡಲು ತೆರಳಿದ್ದ ವೇಳೆ ಸಿಎಂ ಸಿದ್ದರಾಮಯ್ಯ ಗರಂ ಆಗಿದ್ದಾರೆ. ಫೋನ್ ಮಾಡಿದ್ರೂ ಸ್ವೀಕರಿಸದ ಸಿದ್ದರಾಮಯ್ಯ, ಜಮೀರ್ ಮುಂದೆಯೇ ಅಸಮಾಧಾನ ಹೊರ ಹಾಕಿ, ಎಚ್ಚರಿಕೆ ನೀಡಿದ್ದಾರೆ.

ಪೊಲೀಸರ ಮೇಲೂ ಸಿಎಂ ಸಿದ್ದರಾಮಯ್ಯ ಅಸಮಾಧಾನ: ಗುಂಡಿನ ದಾಳಿ ಬಗ್ಗೆ ಪೊಲೀಸರ ಮೇಲೂ ಸಿಎಂ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಣ್ಣ ಘಟನೆ ಇಷ್ಟೊಂದು ದೊಡ್ಡದಾಗೋವರೆಗೂ ಪೊಲೀಸರು ಏನು ಮಾಡುತ್ತಿದ್ದರು, ಅಮಾಯಕ ಯುವಕನ ಜೀವ ಹೋಗಿದೆ ಎಂದು ಸಿಎಂ ಗರಂ ಆಗಿದ್ದಾರೆ.

ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಮೇಲೆ ಗರಂ!: ಜಮೀರ್ ಅಹಮದ್ ಖಾನ್ ಘಟನೆಯ ಮಾಹಿತಿ ನೀಡಲು ಸಿಎಂ ಭೇಟಿಗೆ ತೆರಳಿದ್ದರು. ಈ ವೇಳೆ ಶಾಸಕ ಭರತ್ ರೆಡ್ಡಿ ಅವರಿಗೆ ಫೋನ್ ಮಾಡಿ ಮಾತನಾಡಿಸಲು ಜಮೀರ್ ಯತ್ನಿಸಿದ್ದಾರೆ. ಆದರೆ ಸಿಎಂ ಫೋನ್ ತೆಗೆದುಕೊಳ್ಳದೆ 'ಹೋಗ್ರಿ, ಏಯ್ ಭರತ್ ರೆಡ್ಡಿಗೆ ಸರಿಯಾಗಿ ಬುದ್ಧಿ ಹೇಳಿ ಆತನಿಗೆ. ಗಲಾಟೆ ಬೇಕಿರಲಿಲ್ಲ, ಕಾರ್ಯಕರ್ತನ ಸಾವಾಗಿದೆ. ಅವರ ಮನೆ ಮುಂದೆ ಹೋಗಿ ಬ್ಯಾನರ್ ಕಟ್ಟುವುದು ರಾಂಗ್ ಡೈರೆಕ್ಷನ್' ಎಂದು ಗರಂ ಆಗಿದ್ದಾರೆ. ನಾನು ಭರತ್ ರೆಡ್ಡಿ ಜೊತೆ ಮಾತಾಡಲ್ಲ ಎಂದು ಫೋನ್ ತೆಗೆದುಕೊಳ್ಳಲು ನಿರಾಕರಿಸಿದ್ದಾರೆ.

ಆದಾಗ್ಯೂ ಸಚಿವ ಜಮೀರ್ ಫೋನ್ ಮಾಡಿ ಮಾತನಾಡಿಸಲು ಯತ್ನಿಸಿದ್ದಾರೆ. ಸಿಎಂ ಗರಂ ಆದ ಬಳಿಕ ಕಂಪ್ಲಿ ಗಣೇಶ್ ಮತ್ತು ನಾಗೇಂದ್ರ ಅವರೊಂದಿಗೆ ಮಾತನಾಡಿದ್ದಾರೆ. ನೀವು ಅಲ್ಲಿ ಪರಿಸ್ಥಿತಿ ಕಂಟ್ರೋಲ್ ಮಾಡಿ. ಸುಮ್ನೆ ಇರಲು ಹೇಳಿ. ಬೇಕಾಬಿಟ್ಟಿ ಮಾತಾಡುವುದನ್ನು ನಿಲ್ಲಿಸಿ ಎಂದು ಇಬ್ಬರು ಶಾಸಕರಿಗೆ ಸೂಚನೆ ನೀಡಿದ್ದಾರೆ. ಭರತ್ ರೆಡ್ಡಿ ಅವರನ್ನು ಕಂಟ್ರೋಲ್ ಮಾಡುವ ಜವಾಬ್ದಾರಿಯನ್ನು ನಾಗೇಂದ್ರ ಮತ್ತು ಕಂಪ್ಲಿ ಗಣೇಶ್ ಅವರಿಗೆ ವಹಿಸಲಾಗಿದೆ.

ಇಲ್ಲಿ ರಸ್ತೆಯೇ ತ್ಯಾಜ್ಯ ವಿಲೇವಾರಿ ಸ್ಥಳ

ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದೇ ಇದ್ದಲ್ಲಿ ಇಡೀ ಮೈಸೂರು ಕಸಮಯ ಆಗದೇ ಇರದು



ಮೈಸೂರಿನ ಮಹದೇವಪುರ–ಪ್ರಕೃತಿನಗರ ರಸ್ತೆಯಲ್ಲಿ ರಾಶಿ ಬಿದ್ದಿರುವ ಪ್ಲಾಸ್ಟಿಕ್ ತ್ಯಾಜ್ಯ

> ಮೈಸೂರು ಮಹಾನಗರ ಪಾಲಿಕೆಯು ಕೂಡಲೇ ಕಸದ ವಿಲೇವಾರಿ ಮತ್ತು ಸ್ವಚ್ಛತಾ ಕ್ರಮಗಳನ್ನು ಕೈಗೊಂಡು, ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ನಂತರವೂ ಎಲ್ಲೆಂದರಲ್ಲಿ ಕಸ ಹಾಕುವವರಿಗೆ ಭಾರೀ ದಂಡ ವಿಧಿಸಿ, ಮರುಕಳಿಸಿದರೆ ಜೈಲು ಶಿಕ್ಷೆ ವಿಧಿಸುವ ನಿಯಮ ರೂಪಿಸಬೇಕು. ಈ ನಿಟ್ಟಿನಲ್ಲಿ ಪರಿಶೀಲನೆ ನಡೆಸಿ, ಅಗತ್ಯವಿರುವ ಕಡೆ ಸಿಸಿಟಿವಿ ಕ್ಯಾಮರಾ ಅಳವಡಿಸಲು ಕ್ರಮ ಕೈಗೊಳ್ಳಬೇಕು.
> -ಪ್ರಕಾಶ್, ವಿದ್ಯಾರ್ಥಿ.

ಮೈಸೂರು, ಜ.2– ಮೈಸೂರಿನ ಮಹದೇವಪುರ ಹಾಗೂ ಎಸ್‌ಆರ್‌ಎಸ್ ಪ್ರಕೃತಿನಗರದ ಸಂಪರ್ಕ ರಸ್ತೆ ಸಂಪೂರ್ಣ ತ್ಯಾಜ್ಯಮಯವಾಗಿದೆ.

ರಸ್ತೆಯ ಇಕ್ಕೆಲಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳು ರಾಶಿ ಬಿದ್ದಿವೆ. ಪ್ಲಾಸ್ಟಿಕ್‌ನೊಳಗಿರುವ ತ್ಯಾಜ್ಯ ಕೊಳೆತು ನಾರುತ್ತಿದೆ. ಬೇಡದ ವಸ್ತುಗಳನ್ನು ತುಂಬಿರುವ ಪ್ಲಾಸ್ಟಿಕ್ ಚೀಲಗಳನ್ನು ಎಲ್ಲೆಂದರಲ್ಲಿ ಬಿಸಾಡಲಾಗಿದೆ. ಅಲ್ಲಲ್ಲಿ ಯಾರೋ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಬೆಂಕಿ ಇಟ್ಟು ಸುಟ್ಟಿದ್ದಾರೆ. ಪಕ್ಕದಲ್ಲೇ ಮುನೇಶ್ವರ ದೇವಸ್ಥಾನವಿದೆ ಎನ್ನುವ ಪರಿಜ್ಞಾನವೂ ಇಲ್ಲದೆ ತ್ಯಾಜ್ಯ ತಂದು ಇಲ್ಲಿ ಸುರಿದು ಹೋಗುತ್ತಾರೆ. ಹರಿದ ಹಳೆಯ ಬಟ್ಟೆಗಳನ್ನೂ ಗಂಟು ಕಟ್ಟಿ ಬಿಸಾಡಿದ್ದಾರೆ. ಕೆಲವರು ಗೂಡ್ಸ್ ಆಟೋಗಳಲ್ಲಿ ಕಟ್ಟಡ ತ್ಯಾಜ್ಯವನ್ನು ತಂದು ಹಾಕುತ್ತಾರೆ. ಈ ರಸ್ತೆಯಲ್ಲಿರುವ ಅಪಾಯಕಾರಿ ತ್ಯಾಜ್ಯ ಸುತ್ತಮುತ್ತಲ ಪರಿಸರಕ್ಕೂ ಮಾರಕವಾಗಿ ಪರಿಣಮಿಸಿದೆ.

ಪ್ರಾಣಿಗಳ ಆಪತ್ತು: ರಸ್ತೆಯ ಇಕ್ಕೆಲಗಳಲ್ಲಿ ಹರಡಿರುವ ತ್ಯಾಜ್ಯದಲ್ಲಿ ಏನಾದರೂ ತಿನ್ನಲು ಸಿಗಬಹುದೆಂದು ಬೀದಿ ನಾಯಿಗಳ ಹಿಂಡು ಇಲ್ಲಿ ಬೀಡುಬಿಟ್ಟಿರುತ್ತದೆ. ಪ್ಲಾಸ್ಟಿಕ್ ಕವರ್ ಹಾಗೂ ಚೀಲಗಳನ್ನು ಕಚ್ಚಿ, ಎಳೆದಾಡುತ್ತವೆ. ಇದರಿಂದ ರಸ್ತೆಯಲ್ಲೆಲ್ಲಾ ತ್ಯಾಜ್ಯ ಚೆಲ್ಲಾಪಿಲ್ಲಿ ಯಾಗಿ ಬಿದ್ದಿರುತ್ತದೆ. ಹಸುಗಳೂ ತ್ಯಾಜ್ಯವನ್ನು ಹೆಕ್ಕುತ್ತಿರುತ್ತವೆ. ಈ ವೇಳೆ ಕೊಳೆತು ವಿಷಕಾರಿಯಾಗಿರುವ ವಸ್ತು ಹಾಗೂ ಪ್ಲಾಸ್ಟಿಕ್ ಪ್ರಾಣಿಗಳ ಹೊಟ್ಟೆ ಸೇರಿದರೆ, ಅವುಗಳ ಜೀವಕ್ಕೆ ಆಪತ್ತು ಉಂಟಾಗಬಹುದು.

ನಾಯಿ ದಾಳಿ: ತ್ಯಾಜ್ಯದೊಳಗೆ ಅಡ್ಡಾಡುವ ನಾಯಿಗಳು, ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನೂ ಅಟ್ಟಿಸಿಕೊಂಡು ಹೋಗುತ್ತವೆ. ಅದೆಷ್ಟೋ ದ್ವಿಚಕ್ರ ವಾಹನ ಸವಾರರು ನಾಯಿದಾಳಿಯಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಪಾದಚಾರಿಗಳಂತೂ ಭಯದಲ್ಲೇ ಓಡಾಡಬೇಕಿದೆ.

ರೋಗದ ಭೀತಿ: ಈ ರಸ್ತೆಯಲ್ಲಿ ಓಡಾಡುವ ಜನರಿಗೆ ರೋಗದ ಭೀತಿ ಎದುರಾಗಿದೆ. ತ್ಯಾಜ್ಯಗಳು ಕೊಳೆತು ನಾರುತ್ತಿರುವುದರಿಂದ ಕೀಟ–ಸೊಳ್ಳೆ ಸಂತತಿ ಹೆಚ್ಚಾಗಿ, ಸಾಂಕ್ರಾಮಿಕ ರೋಗಗಳು ಹರಡುವ ಆತಂಕ ಸೃಷ್ಟಿಯಾಗಿದೆ. ಆಗಾಗ್ಗೆ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಬೆಂಕಿ ಇಡುವುದರಿಂದ ಕೆಟ್ಟ ಹೊಗೆ ಆವರಿಸಿ, ಉಸಿರಾಡುವುದಕ್ಕೂ ಕಷ್ಟವಾಗುತ್ತದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಎಲ್ಲರ ಜವಾಬ್ದಾರಿ: ಅಧಿಕಾರಿಗಳಿಗಂತೂ ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರ ಸುರಕ್ಷತೆ ಬಗ್ಗೆ ಕಾಳಜಿ ಇಲ್ಲ. ರಸ್ತೆಯಲ್ಲಿ ರಾಶಿ ಬಿದ್ದಿರುವ ತ್ಯಾಜ್ಯವನ್ನು ತೆರವು ಮಾಡಿಸಿ, ಮತ್ತೆ ಈ ರೀತಿಯ ದುಸ್ಥಿತಿ ನಿರ್ಮಾಣವಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂಬ ಜವಾಬ್ದಾರಿಯನ್ನೂ ಮರೆತಿದ್ದಾರೆ. ಸ್ವಚ್ಛತೆ ಕಾಪಾಡುವಲ್ಲಿ ಅಧಿಕಾರಿಗಳ ಆಸಕ್ತಿ ಜೊತೆಗೆ ಸಾರ್ವಜನಿಕರ ಸಹಕಾರವೂ ಬಹಳ ಮುಖ್ಯ. ನಮ್ಮ ಮನೆಯಂತೆ ಸಾರ್ವಜನಿಕ ಸ್ಥಳಗಳ ನೈರ್ಮಲ್ಯತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂಬುದನ್ನು ಮರೆಯಬಾರದು ಎಂದು ಜನ ಮನವಿ ಮಾಡಿದ್ದಾರೆ.

ಆಸ್ಪತ್ರೆ ಬಳಿಯೇ ತ್ಯಾಜ್ಯ ರಾಶಿ; ಇದು ಅನಾಗರಿಕರ ಕೃತ್ಯ

ಮೈಸೂರು: ನಗರದ ಅಗ್ರಹಾರ ರಾಮಾನುಜ ರಸ್ತೆ, 12ನೇ ಕ್ರಾಸ್‌ನಲ್ಲಿ ಅಕ್ಕಮ್ಮಣ್ಣಿ ಆಸ್ಪತ್ರೆ ಪಕ್ಕದಲ್ಲೇ ರಾಶಿ ರಾಶಿ ತ್ಯಾಜ್ಯ ಕಣ್ಣಿಗೆ ರಾಚುತ್ತದೆ. ಪೌರಕಾರ್ಮಿಕರು ಬೆಳಗ್ಗೆ ವಿಲೇವಾರಿ ಮಾಡಿದ ಕೆಲವೇ ಗಂಟೆಗಳಲ್ಲಿ ಮತ್ತೆ ಅದೇ ದುಸ್ಥಿತಿ ನಿರ್ಮಾಣವಾಗುತ್ತದೆ. ಮನೆ ಬಳಿಗೆ ಬರುವ ಪಾಲಿಕೆ ಆಟೋಗೆ ಕಸ ನೀಡದೆ, ತಮ್ಮ ಮನಸ್ಸಿಗೆ ಬಂದಾಗ ತ್ಯಾಜ್ಯವನ್ನೆಲ್ಲಾ ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿ, ಆಸ್ಪತ್ರೆ ಪಕ್ಕದಲ್ಲೇ ಬಿಸಾಡಿ ಹೋಗುತ್ತಾರೆ. ಈ ಜಾಗದಲ್ಲಿ ಕಸ ಹಾಕಿದವರ ಫೋಟೋ ತೆಗೆದು, ಪಾಲಿಕೆ ಅಥವಾ ಪೊಲೀಸ್‌ಗೆ ನೀಡಿದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕಾ ಫಲಕ ಅಳವಡಿಸಿದ್ದರೂ ಕೆಲವರು ಕಸ ಎಸೆಯುವುದನ್ನು ನಿಲ್ಲಿಸಿಲ್ಲ. ಈವರೆಗೆ ಕಸ ಎಸೆಯುವ ಒಬ್ಬರಿಗಾದರೂ ದಂಡ ವಿಧಿಸಿರುವ ಬಗ್ಗೆ ಮಾಹಿತಿ ಇಲ್ಲ. ಅಂತಹವರಿಗೆ ತಿಳಿ ಹೇಳುವ ಪ್ರಯತ್ನವನ್ನು ಸಾರ್ವಜನಿಕರೂ ಮಾಡಿದಂತಿಲ್ಲ. ಸಮೀಪದಲ್ಲೇ ಸಿಸಿಟಿವಿ ಕ್ಯಾಮರಾ ಅಳವಡಿಸಿದ್ದರೂ ಅದು ಸುಸ್ಥಿತಿಯಲ್ಲಿದೆಯೋ ಇಲ್ಲವೋ ಎಂಬುದು ತಿಳಿದಿಲ್ಲ. ರಾತ್ರಿ ವೇಳೆ ಕೆಲ ಅಂಗಡಿ, ಫಾಸ್ಟ್‌ಫುಡ್ ವ್ಯಾಪಾರಿಗಳು



ಮೈಸೂರು ರಾಮಾನುಜ ರಸ್ತೆ ಅಕ್ಕಮ್ಮಣ್ಣಿ ಆಸ್ಪತ್ರೆ ಬಳಿಯ ದುಸ್ಥಿತಿ.

ಇಲ್ಲಿಗೆ ಕಸ ಸುರಿಯುವುದನ್ನು ಛಾಳಿ ಮಾಡಿಕೊಂಡಿದ್ದಾರೆ. ಆಸ್ಪತ್ರೆ ಹಾಗೂ ಇಲ್ಲಿನ ಉದ್ಯಾನವನಕ್ಕೆ ಬರುವ ಜನ, ಈ ಜಾಗದಲ್ಲಿ ಮೂಗು ಮುಚ್ಚಿಕೊಂಡು ಓಡಾಡುತ್ತಾರೆ. ಈಗಲಾದರೂ ಪಾಲಿಕೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಮರ್ಪಕ ಸ್ವಚ್ಛತೆ ನಿರ್ವಹಣೆ ಜೊತೆಗೆ ಅದನ್ನು ಹಾಳುಮಾಡುವವರನ್ನೂ ಪತ್ತೆಹಚ್ಚಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಉದ್ಯಾನವನಕ್ಕೆ ಬರುವ ವಾಯುವಿಹಾರಿಗಳು ಆಗ್ರಹಿಸಿದ್ದಾರೆ.

ಮೈಸೂರತ್ತ ವಲಸೆ ಪಕ್ಷಿಗಳ ಪ್ರಮಾಣ ಕ್ಷೀಣ!

● ಚಳಿಗಾಲ ಬಂದರೆ ಸಾಕು ದೇಶ–ವಿದೇಶದ ಪಕ್ಷಿಗಳ ಜಾತ್ರೆಯೇ ಜರುಗುತ್ತಿತ್ತು
● ನೈಸರ್ಗಿಕ ಹವಮಾನ ವ್ಯತಿರಿಕ್ತತೆಯಿಂದ ದೂರಾಗುತ್ತಿವೆ ಪಕ್ಷಿ ಸಂಕುಲ

ಮೈಸೂರು, ಜ.2(ಎಸ್‌ಪಿಎನ್)– ಚಳಿಗಾಲದ ಸಂದರ್ಭದಲ್ಲಿ ಉತ್ತಮ ಹವಾಮಾನ ಹಾಗೂ ಆಹಾರ ದೊರಕುವ ಕಾರಣಕ್ಕೆ ಬೇರೆಬೇರೆ ದೇಶಗಳಿಂದ ಮೈಸೂರು ಭಾಗಕ್ಕೆ ಬರುವ ವಲಸೆ ಹಕ್ಕಿಗಳು ಈ ಹಿಂದೆ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದವು. ಇದೀಗ ಅಭಿವೃದ್ಧಿ ಹೆಸರಿನಲ್ಲಿ ಕೆರೆಗಳ ಸ್ವರೂಪ, ಇಲ್ಲಿನ ನೀರಿನ ಗುಣಮಟ್ಟ ಕಡಿಮೆಯಾಗಿರುವುದರಿಂದ ವಲಸೆ ಪಕ್ಷಿಗಳ ಆಗಮನದಲ್ಲಿ ಗಣನೀಯವಾಗಿ ಇಳಿಕೆ ಕಂಡಿದೆ.

ಸೈಬೀರಿಯಾ, ಯೂರೋಪ್ ಸೇರಿದಂತೆ ತುಂಬಾ ಚಳಿಯಿರುವ ದೇಶಗಳಿಂದ ಸಾವಿರಾರು ಕಿಲೋಮೀಟರ್ ಕ್ರಮಿಸಿ ಮೈಸೂರು ಭಾಗದ ಕೆರೆ–ಕಟ್ಟೆ, ಪಕ್ಷಿಧಾಮ ಹಾಗೂ ಅಣೆಕಟ್ಟೆಗಳ ಪ್ರದೇಶಗಳಿಗೆ ಆಹಾರ ಅರಸಿ ಬಗೆಬಗೆಯ ಪಕ್ಷಿಗಳು ಪ್ರತಿ ವರ್ಷ ಬರುವುದು ವಾಡಿಕೆ. ಆದರೆ ಇತ್ತೀಚೆಗೆ ವಲಸೆ ಪಕ್ಷಿಗಳು ಚಳಿಗಾಲದ ವೇಳೆ ಮೈಸೂರು ಭಾಗಗಳಿಗೆ ಬರುವುದು ಕ್ಷೀಣಿಸುತ್ತಿದೆ ಎನ್ನುತ್ತಾರೆ ಹಲವು ಪಕ್ಷಿ ಪ್ರಿಯರು.

ಇದಕ್ಕೆ ಪ್ರಮುಖ ಕಾರಣ ಹವಾಮಾನ ಬದಲಾವಣೆ, ಇದನ್ನು ಹೊರತುಪಡಿಸಿ ಅಭಿವೃದ್ಧಿ ಕೆಲಸಗಳಿಂದ ಬದಲಾದ ಕೆರೆ–ಕಟ್ಟೆಗಳ ಸ್ವರೂಪ, ನೀರಿನ ಗುಣಮಟ್ಟ ಕಡಿಮೆಯಾಗುತ್ತಿರುವುದು ಸೇರಿದಂತೆ ಹಲವು ಕಾರಣಗಳ ಪಟ್ಟಿ ಮಾಡಬಹುದು. ವಲಸೆ ಪಕ್ಷಿಗಳ ಬಗ್ಗೆ 2025ರ ಜನವರಿಯಲ್ಲಿ 110 ಕೆರೆಗಳಿಗೆ ಭೇಟಿ ನೀಡಿ ನಡೆಸಿದ ಒಂದು ದಿನದ ಗಣತಿ ಪ್ರಕಾರ, 224 ಪಕ್ಷಿ ಪ್ರಭೇದಗಳು ಕಂಡುಬಂದಿತ್ತು. ಅದರಲ್ಲಿ 157 ಸ್ಥಳೀಯ ಪಕ್ಷಿ ಪ್ರಭೇದ, 67 ವಲಸೆ ಪ್ರಭೇದ ಕಂಡುಬಂದವು. ಒಟ್ಟು 31,005 ಪಕ್ಷಿಗಳನ್ನು ಏಣಿಕೆ ಮಾಡಲಾಗಿತ್ತು.

ಮೈಸೂರು ನೇಚರ್ ಕ್ಲಬ್ ಪ್ರತಿ ವರ್ಷ ಪಕ್ಷಿಗಳ ಗಣತಿ ಕಾರ್ಯ ನಡೆಸಲಿದೆ. ಅದರಂತೆ 2024ರ ಜನವರಿಯಲ್ಲಿ 110 ಕೆರೆ ಪ್ರದೇಶಗಳಲ್ಲಿ ನಡೆಸಿದ ಪಕ್ಷಿಗಳ ಗಣತಿಯಲ್ಲಿ 226 ಪ್ರಭೇದ ಪಕ್ಷಿಗಳನ್ನು ಎಣಿಕೆ ಮಾಡಲಾಗಿತ್ತು. ಇದರಲ್ಲಿ 67ಕ್ಕೂ ಹೆಚ್ಚು ವಲಸೆ ಜಾತಿಯ ಪ್ರಭೇದಗಳು ಕಂಡು ಬಂದಿವೆ. ಈ ಸಂದರ್ಭದಲ್ಲಿ



40 ಸಾವಿರಕ್ಕಿಂತ ಹೆಚ್ಚು ಪಕ್ಷಿಗಳನ್ನು ಲೆಕ್ಕ ಹಾಕಲಾಗಿತ್ತು ಎಂದು ಈ ಬಾರಿಯ ಪಕ್ಷಿಗಳ ಗಣತಿ ಕಾರ್ಯದ ನೇತೃತ್ವ ವಹಿಸಿರುವ ಶಿವಪ್ರಕಾಶ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಕಳೆದ ಹಲವು ವರ್ಷಗಳ ಹಿಂದೆ ಅವಿಭಜಿತ ಮೈಸೂರು ಜಿಲ್ಲೆ (ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ) ಯಲ್ಲಿ ಅಂದಾಜು 2 ಸಾವಿರಕ್ಕೂ ಅಧಿಕ ಕೆರೆಗಳಿದ್ದವು. ಅದರಲ್ಲಿ 200 ಕೆರೆಗಳಿಗೆ ಭೇಟಿ ನೀಡಿ, ಸ್ಥಳೀಯ ಪಕ್ಷಿಗಳು ಹಾಗೂ ವಲಸೆ ಪಕ್ಷಿಗಳ ಗಣತಿ ಮಾಡಲಾಗುತ್ತಿತ್ತು. ಆದರೆ, ಕಾಲಕಳೆದಂತೆ ಕೆರೆ ಪ್ರದೇಶಗಳ ಸಮೀಪ ಬಡಾವಣೆಗಳ ನಿರ್ಮಾಣ, ವಾಣಿಜ್ಯ ವ್ಯವಹಾರಗಳು ಅತಿಯಾಗುತ್ತಿರುವುದರಿಂದ ವಲಸೆಗಳು ಹಕ್ಕಿಗಳ ಕಲರವ ಕಡಿಮೆಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ ಕೆರೆಗಳ ಸ್ವರೂಪ, ಅದರಲ್ಲಿನ ನೀರಿನ ಗುಣಮಟ್ಟ ಕಡಿಮೆಯಾಗುತ್ತಿರುವುದರಿಂದ ವಲಸೆ ಪಕ್ಷಿಗಳ ಆಗಮನವೂ ಕಡಿಮೆಯಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಮುಖವಾಗಿ ಪಕ್ಷಿಗಳ ಪ್ರಭೇದಗಳಾದ ಬಾರ್, ಹೆಡ್ ಗೂಸ್, ಬಾರ್ನ್, ಸ್ವಾಲೋ, ಕ್ಯಾಟಲ್ ಈಗ್ರೆಟ್, ಸ್ಟೀಲ್ ಹಾಗೂ ಯೂರೋಪ್ ಪ್ರದೇಶದ ಕೂಟ್ ಜಾತಿಯ ಪಕ್ಷಿಗಳು ಹೆಚ್ಚಾಗಿ ಮೈಸೂರು ಭಾಗದ ಕುಕ್ಕರಹಳ್ಳಿ, ರಂಗನತಿಟ್ಟು, ಹದಿನಾರು ಕೆರೆ ಹಾಗೂ ಕಬಿನಿ ಜಲಾಶಯ ಜೊತೆಗೆ ನುಗು ಜಲಾಶಯದಲ್ಲಿ ಕಂಡು ಬರುತ್ತಿದ್ದವು ಎಂದರು.

ಸೈಬೀರಿಯಾ ಸೇರಿದಂತೆ ಬೇರೆ ಬೇರೆ ಪ್ರದೇಶಗಳಿಂದ ಆಹಾರ ಅರಸಿ ವಲಸೆ ಬರುವುದು ಸಾಮಾನ್ಯ. ಆದರೆ ಈಗ ಮೈಸೂರು ಭಾಗದಲ್ಲಿ ವಲಸೆ ಪಕ್ಷಿಗಳು ಬರಲು ತೊಂದರೆಯಾಗಿರುವುದು ಅಭಿವೃದ್ಧಿ ಹೆಸರಿನಲ್ಲಿ ಕೆರೆಗಳಲ್ಲಿನ ಬೋಟಿಂಗ್ ಮತ್ತು ಅತಿಯಾದ ಮೀನುಗಾರಿಕೆಯಿಂದ ವಲಸೆ ಹಕ್ಕಿಗಳ ಆಗಮನ ಕಡಿಮೆಯಾಗಿದೆ. ಅಂತೆಯೇ ಕೆರೆಗಳ ಅಕ್ಕ–ಪಕ್ಕ ಇದ್ದ ಹೊಲ–ಗದ್ದೆಗಳು ಮಾಯವಾಗಿದೆ. ಹಾಗಾಗಿ ವಲಸೆ ಪಕ್ಷಿಗಳಿಗೆ ಆಹಾರ ದೊರಕದ ಕಾರಣ ವಲಸೆ ಬರುವುದು ಕಡಿಮೆಯಾಗಲು ಕಾರಣ ಎನ್ನುತ್ತಾರೆ ವನ್ಯಜೀವಿ ಛಾಯಾಗ್ರಾಹಕ ಮಧುಸೂದನ್.

> ಮೈಸೂರು ನೇಚರ್ ಕ್ಲಬ್ ವತಿಯಿಂದ 2026ರಿಂದ ಜ.18ರಂದು ಪಕ್ಷಿ ಗಣತಿಗಾಗಿ 18 ತಂಡ(ಒಂದು ತಂಡದಲ್ಲಿ 2 ಅಥವಾ 3ಮಂದಿ) ರಚನೆ ಮಾಡಲಾಗಿದ್ದು, 100ಕ್ಕೂ ಅಧಿಕ ಕೆರೆಗಳಿಗೆ ಭೇಟಿ ನೀಡಿ, ಪಕ್ಷಿ ಗಣತಿ ನಡೆಸುವ ಗುರಿ ಹೊಂದಿದ್ದೇವೆ.
> – ಪಕ್ಷಿ ತಜ್ಞ ಶಿವಪ್ರಕಾಶ್

ಡಿಸೆಂಬರ್ ಸಂದರ್ಭದಲ್ಲಿ ಮಧ್ಯ ಏಷ್ಯಾ, ಯೂರೋಪ್ ಸೇರಿದಂತೆ ಹಲವು ಪ್ರದೇಶದಲ್ಲಿ ಶೀತ ಹೆಚ್ಚಾಗಿ ಈ ಪಕ್ಷಿಗಳು ವಲಸೆ ಬರುತ್ತವೆ. ಮೈಸೂರು ಭಾಗಕ್ಕೆ ಈ ಹಿಂದೆ 80ಕ್ಕೂ ಹೆಚ್ಚು ವಿವಿಧ ಜಾತಿಯ ಪಕ್ಷಿಗಳು ವಲಸೆ ಬರುತ್ತಿದ್ದವು. ಇದೀಗ ಕೆರೆಗಳ ಸ್ವರೂಪ ಬದಲಾಗುತ್ತಿರುವುದರಿಂದ ಹಾಗೂ ಹವಾಮಾನ ಬದಲಾವಣೆಯಿಂದ ವಲಸೆ ಪಕ್ಷಿಗಳ ಆಗಮನ ಕಡಿಮೆಯಾಗಿದೆ ಎನ್ನುತ್ತಾರೆ ಪಕ್ಷಿ ಪ್ರಿಯರಾದ ರೇಣು ಪ್ರಿಯದರ್ಶಿನಿ.

ಕುಕ್ಕರಹಳ್ಳಿ, ಲಿಂಗಾಂಬುದಿ, ಹೆಬ್ಬಾಳ ಕೆರೆ, ತಿಪ್ಪಯ್ಯನಕೆರೆ ಮೊದಲಿನ ಸ್ವರೂಪ ಈಗಿಲ್ಲ. ಏಕೆಂದರೆ, ಕೆರೆ ನೀರಿನ ಗುಣಮಟ್ಟ ಕಡಿಮೆಯಾಗಿದೆ. ಕೆರೆ ಸುತ್ತಮುತ್ತ ಇದ್ದ ಜಮೀನುಗಳು ಈಗಿಲ್ಲ. ಕೆರೆ ಅಕ್ಕ–ಪಕ್ಕದಲ್ಲಿದ್ದ ಜೌಗು ಪ್ರದೇಶ, ಹುಲ್ಲುಗಾವಲು ಪ್ರದೇಶ ಮಾಯವಾಗಿರುವುದರಿಂದ ಈ ಪ್ರದೇಶಕ್ಕೆ ಅನುಗುಣವಾಗಿ ಜೀವನ ಕ್ರಮ ಅನುಸರಿಸುತ್ತಿದ್ದ ವಲಸೆ ಪಕ್ಷಿಗಳು ಬರುತ್ತಿಲ್ಲ. 10–20 ವರ್ಷಗಳಿಂದ ವಿವಿಧ ಬಗೆಯ 150 ಪಕ್ಷಿಗಳು ಚಳಿಗಾಲದ ಸಂದರ್ಭದಲ್ಲಿ ವಲಸೆ ಬರುತ್ತಿದ್ದವು. ಈಗ ಇದರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿವೆ ಎಂದು ಪಕ್ಷಿ ಪ್ರಿಯರಾದ ರೇಣು ಪ್ರಿಯದರ್ಶಿನಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪಿಎಲ್‌ಡಿ ಬ್ಯಾಂಕ್ ಪ್ರಭಾರ ಅಧ್ಯಕ್ಷರ ಅಧಿಕಾರ ಸ್ವೀಕಾರ



ಪ್ರಭಾರ ಅಧ್ಯಕ್ಷ ರಮೇಶ್ ಅವರನ್ನು ಮುಖಂಡರು, ನಿರ್ದೇಶಕರು ಅಭಿನಂದಿಸಿದರು.

ಕೆ.ಆರ್.ಪೇಟೆ, ಜ.2– ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಪ್ರಭಾರ ಅಧ್ಯಕ್ಷರಾಗಿ ಎಂ.ಆರ್. ರಮೇಶ್ ಅಧಿಕಾರ ಸ್ವೀಕರಿಸಿದರು.

ಈ ಹಿಂದಿನ ಅಧ್ಯಕ್ಷ ಪುಟ್ಟಸ್ವಾಮಿಗೌಡ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಸಹಕಾರ ಇಲಾಖೆ ನಿಯಮದ ಪ್ರಕಾರ ಪ್ರಭಾರ ಅಧ್ಯಕ್ಷರಾಗಿ ಹಾಲಿ ಉಪಾಧ್ಯಕ್ಷ ಎಂ.ಆರ್.ರಮೇಶ್ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಪಿಎಲ್‌ಡಿ ಬ್ಯಾಂಕ್ ವ್ಯವಸ್ಥಾಪಕ ಎಂ.ಆನಂದ್ ಪ್ರಕಟಿಸಿದರು.

ಪ್ರಭಾರ ಅಧ್ಯಕ್ಷ ಎಂ.ಆರ್. ರಮೇಶ್ ಮಾತನಾಡಿ, ನನ್ನನ್ನು ಬ್ಯಾಂಕ್ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದ ನಿರ್ದೇಶಕರು ಇದೀಗ ಪ್ರಭಾರ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಹೀಗಾಗಿ ಎಲ್ಲಾ ನಿರ್ದೇಶಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಅಧಿಕಾರಾವಧಿಯಲ್ಲಿ ಬ್ಯಾಂಕ್ ಷೇರುದಾರರಿಗೆ ಕೊಡಿಸಬಹುದಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲು ಹಿರಿಯ ನಿರ್ದೇಶಕ ಪುಟ್ಟಸ್ವಾಮಿಗೌಡರ ಮಾರ್ಗದರ್ಶನದಲ್ಲಿ ಶ್ರಮಿಸುತ್ತೇನೆ. ಆ ಮೂಲಕ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕೆಲಸ ಮಾಡುವ ಜೊತೆಗೆ ರೈತರಿಗೆ, ನಿರುದ್ಯೋಗಿಗಳಿಗೆ ಉಪ ಕಸುಬು ಕೈಗೊಳ್ಳಲು ಕುರಿ, ಕೋಳಿ, ಮೇಕೆ, ಫಾರಂ ಆರಂಭಿಸಲು ಸಾಲ ಸೌಲಭ್ಯ ನೀಡಲು ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ ಪ್ರಭಾರ ಅಧ್ಯಕ್ಷ ಎಂ.ಆರ್.ರಮೇಶ್ ಅವರನ್ನು ಬ್ಯಾಂಕ್ ನಿರ್ದೇಶಕರು, ಮುಖಂಡರು ಅಭಿನಂದಿಸಿದರು. ಪಿಎಲ್‌ಡಿ ಬ್ಯಾಂಕ್ ನಿಕಟಪೂರ್ವ ಅಧ್ಯಕ್ಷ ಪುಟ್ಟಸ್ವಾಮಿಗೌಡ, ನಿರ್ದೇಶಕರಾದ ನಾಗರಾಜೇಗೌಡ, ನಿರ್ದೇಶಕರಾದ ಜಗದೀಶ್, ಬಿ.ಎನ್. ಧನಂಜಯ್, ಚಂದ್ರೇಗೌಡ, ನಾಗೇಶ್, ಮಂಜುಳಾ, ಕವಿತ, ಸುನೀಲ್, ಗ್ರಾಪಂ ಸದಸ್ಯ ಕೃಷ್ಣೇಗೌಡ ಸೇರಿದಂತೆ ಇತರರಿದ್ದರು.

ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ ಕುರಿತು

ಯುವ ಜನತೆಗೆ ಅರಿವು ಮೂಡಿಸಿ: ಡಿಸಿ ಡಾ.ಕುಮಾರ್

ಮಂಡ್ಯ, ಜ.2– ನಿರುದ್ಯೋಗಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಲು ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ ಜಾರಿಗೊಳಿಸಲಾಗಿದೆ ಸದರಿ ಯೋಜನೆ ಕುರಿತು ಜಿಲ್ಲೆಯ ನಿರುದ್ಯೋಗಿ ಯುವಜನತೆಗೆ ಅರಿವು ಮೂಡಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಕಾರ್ಯಕ್ರಮ (PMEGP) ಹಾಗೂ ಪ್ರಧಾನಮಂತ್ರಿಗಳ ವಿಶ್ವಕರ್ಮ ಕಾರ್ಯಕ್ರಮಗಳ ಸಂಬಂಧ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯನ್ನು ಸದರಿ ವರ್ಷ 102 ಅರ್ಜಿ ನಿಯೋಗಿಗಳಿಗೆ ತಲುಪಿಸುವ ಗುರಿ ಹೊಂದಿದ್ದು, ಈಗಾಗಲೇ 70 ಅರ್ಹ ಫಲಾನುಭವಿಗಳನ್ನು ಗುರುತಿಸಿ 4.08 ಕೋಟಿ ಅನುದಾನವನ್ನು ಬ್ಯಾಂಕ್ ಮೂಲಕ ಸಬ್ಸಿಡಿ ದರದಲ್ಲಿ ನೀಡಲಾಗಿದೆ ಎಂದರು.

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿ ನಗರದ ಸಾಮಾನ್ಯ ವರ್ಗದ ನಿರುದ್ಯೋಗಿಗಳು ಉದ್ಯಮ ಪ್ರಾರಂಭಿಸಲು ಶೇ.15 ಮತ್ತು ಪ.ವರ್ಗದವರಿಗೆ ಶೇ.25 ರಷ್ಟು ಸಬ್ಸಿಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ. ಗ್ರಾಮೀಣ ಸಾಮಾನ್ಯ ವರ್ಗದ ನಿರುದ್ಯೋಗಿಗಳು ಉದ್ಯಮ ಪ್ರಾರಂಭಿಸಲು ಶೇ.25, ಪ.ವರ್ಗದವರಿಗೆ ಶೇ.35 ರಷ್ಟು ಸಬ್ಸಿಡಿ ದರದಲ್ಲಿ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ನೀಡಲಾಗುತ್ತದೆ ಎಂದರು.

ವಿವಿಧ ಯೋಜನೆಗಳ ಮೂಲಕ ಉದ್ಯಮ ಪ್ರಾರಂಭಿಸಲು ಇಚ್ಚಿಸುವ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಅವರಿಗೆ ಸದರಿ ಯೋಜನೆ ಕುರಿತು ವಿಶೇಷ ಕಾರ್ಯಾಗಾರ ಏರ್ಪಡಿಸಿ. ಸದರಿ ಯೋಜನೆಯಲ್ಲಿ ಉತ್ಪಾದನಾ ಚಟುವಟಿಕೆ ಪ್ರಾರಂಭಿಸುವ ಅಭ್ಯರ್ಥಿಗಳಿಗೆ ಗರಿಷ್ಠ 50 ಲಕ್ಷ ಹಾಗೂ ಸೇವಾ ಚಟುವಟಿಕೆಯಲ್ಲಿ ಉದ್ಯಮ ಪ್ರಾರಂಭಿಸುವ ಅಭ್ಯರ್ಥಿಗಳಿಗೆ ಗರಿಷ್ಠ 20 ಲಕ್ಷದವರೆಗೂ ಸಾಲ ಸೌಲಭ್ಯ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಲ್ಲಿ ಭಾಗಿಯಾಗಿರುವ 3 ಏಜೆನ್ಸಿ ಕಂಪನಿಗಳು ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಿ. ಸದರಿ ವರ್ಷದ ಯೋಜನೆಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಪೂರ್ಣಗೊಳಿಸಿ. ಕಳೆದ 2 ವರ್ಷಗಳ ಹಿಂದೆ ಸದರಿ ಯೋಜನೆಯಿಂದ ಸೌಲಭ್ಯ ಪಡೆದ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ. ಅವರು ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ ಎಂಬುದರ ಕುರಿತು ಪರಿಶೀಲಿಸಿ ವರದಿ ಸಲ್ಲಿಸಿ ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಟಿ.ದಿನೇಶ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಾಗಾನಂದ್, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ

ಮಂಡ್ಯ: ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಮುಖ್ಯವಾಗಿ ಕೈ ಮತ್ತು ಉಪಕರಣಗಳೊಂದಿಗೆ ಕೆಲಸ ಮಾಡುವ 18 ಸಾಂಪ್ರದಾಯಿಕ ವ್ಯಾಪಾರಗಳಲ್ಲಿ ತೊಡಗಿರುವ ಕರಕುಶಲಕರ್ಮಿಗಳಿಗೆ ಬೆಂಬಲ ನೀಡುವುದಾಗಿದೆ. ನಿಜವಾಗಿಯೂ ಆರ್ಥಿಕವಾಗಿ ಹಿಂದುಳಿದ ಕರಕುಶಲ ಕರ್ಮಿಗಳಿಗೆ ಈ ಯೋಜನೆ ಉಪಯುಕ್ತವಾಗಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಸದರಿ ಯೋಜನೆಯಡಿ ಈಗಾಗಲೇ ಜಿಲ್ಲೆಯಲ್ಲಿ 19 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ತರಬೇತಿ ಪಡೆದಿದ್ದು, ಈ ಪೈಕಿ 9600 ಮಂದಿಗೆ 15 ಸಾವಿರ ಮೌಲ್ಯದ ಟೂಲ್ ಕಿಟ್ ವಿತರಿಸಲಾಗಿದೆ ಎಂದರು.

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಹೂ ಕಟ್ಟುವುದು, ಟೈಲರಿಂಗ್, ಬುಟ್ಟಿ ಹೆಣೆಯುವುದು ಸೇರಿದಂತೆ ವಿವಿಧ ಸಾಂಪ್ರದಾಯಿಕ ವ್ಯಾಪಾರಗಳಿಗೆ ಬೇಡಿಕೆ ಇದೆ. ಈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ 1 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತದೆ. ಸದರಿ ಯೋಜನೆ ಕುರಿತು ಆಡಿ ಶಿಲ್ಪಿಗಳಿಗೂ ಹೆಚ್ಚಿನ ಉತ್ತೇಜನ ನೀಡಿ ಎಂದರು.

ವಿವಿಧ ಯೋಜನೆಗಳ ಮೂಲಕ ಅರ್ಹ ಅಭ್ಯರ್ಥಿಗಳನ್ನು ನೋಂದಣಿ ಮಾಡುವುದು ಹಾಗೂ ತರಬೇತಿ ನೀಡುವುದು ಅಷ್ಟೇ ಅಲ್ಲ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸುವುದು ಮುಖ್ಯ. ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ ದೊರಕಿಸಿಕೊಟ್ಟರೆ ಅದರಿಂದ ಉದ್ಯಮ ಪ್ರಾರಂಭಿಸಿ ಆರ್ಥಿಕವಾಗಿ ಸದೃಢರಾಗುತ್ತಾರೆ ಎಂದರು.

ಯೋಜನೆಯಡಿ ಟೂಲ್ ಕಿಟ್ ಪಡೆದಿರುವ ಅಭ್ಯರ್ಥಿಗಳು ಸದರಿ ಟೂಲ್ ಕಿಟ್‌ಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಅಥವಾ ಟೂಲ್ ಕಿಟ್‌ಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದರ ಕುರಿತು ಪರಿಶೀಲನೆ ನಡೆಸಿ. ನಿಜವಾದ ಅರ್ಹರಿಗೆ ಸರ್ಕಾರಿ ಸೌಲಭ್ಯಗಳು ದೊರೆಯಬೇಕು. ಪಿಎಂ ವಿಶ್ವಕರ್ಮ ಯೋಜನೆ ಕುರಿತು ತಾಲೂಕು ಮಟ್ಟಗಳಲ್ಲಿ ವಿವಿಧ ಕಾರ್ಯಾಗಾರ ಮತ್ತು ಅರಿವು ಕಾರ್ಯಕ್ರಮ ರೂಪಿಸಿ ಎಂದು ತಿಳಿಸಿದರು.

ಮನ್‌ಮುಲ್ ಒಕ್ಕೂಟದ ಆವರಣದಲ್ಲಿ

ಮೊಸರು, ಐಸ್‌ಕ್ರೀಂ ತಯಾರಿಕಾ ಘಟಕ ಆರಂಭಕ್ಕೆ ಕ್ರಮ

ಕೆಎಂಎಫ್ ನಿರ್ದೇಶಕ ಅಪ್ಪಾಜಿಗೌಡ ಭರವಸೆ

ಪಾಂಡವಪುರ, ಜ.2– ಬೇಸಿಗೆಯಲ್ಲಿ ಒಕ್ಕೂಟದ ಮೊಸರು ಮತ್ತು ಐಸ್ ಕ್ರೀಂಗೆ ಬೇಡಿಕೆ ಹೆಚ್ಚಾಗುವುದರಿಂದ ಮುಂದಿನ ದಿನಗಳಲ್ಲಿ ಮೊಸರು, ಐಸ್‌ಕ್ರೀಂ ತಯಾರಿಕಾ ಘಟಕವನ್ನು ಮನ್‌ಮುಲ್ ಒಕ್ಕೂಟದ ಆವರಣದಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮನ್‌ಮುಲ್ ಹಾಗೂ ಕೆಎಂಎಫ್ ನಿರ್ದೇಶಕ ಅಪ್ಪಾಜಿಗೌಡ ಭರವಸೆ ನೀಡಿದರು.



ಸಭೆಯನ್ನು ಕೆಎಂಎಫ್ ನಿರ್ದೇಶಕ ಅಪ್ಪಾಜಿಗೌಡ ಉದ್ಘಾಟಿಸಿದರು.

> ನಂದಿನಿ ಬಳಗಕ್ಕೆ ಹಾಲು ಉತ್ಪಾದಕರು ಮತ್ತು ರಿಟೇಲ್ ಮಾರಾಟಗಾರರು 2 ಕಣ್ಣುಗಳಿದ್ದಂತೆ. ಉತ್ಪಾದಕರಿಗೆ ತೋರಿಸುವ ಕಾಳಜಿಯನ್ನು ರಿಟೇಲ್ ಮಾರಾಟಗಾರರಿಗೂ ತೋರಿಸುತ್ತೇವೆ. ಈಗಾಗಲೇ ನಿಮ್ಮ ಸಮಸ್ಯೆಗಳ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚಿಸಿದ್ದೇವೆ. ಜೊತೆಗೆ ಕೆಎಂಎಫ್‌ನಲ್ಲಿ ನಮ್ಮ ನಿಮ್ಮ ಪರ ಧ್ವನಿಗೂಡಿಸಲು ಅಪ್ಪಾಜಿಗೌಡರ ಅವರನ್ನು ಒಕ್ಕೂಟದಿಂದ ನಿರ್ದೇಶಕರಾಗಿ ಕಳುಹಿಸಿದ್ದೇವೆ. ರಿಟೇಲ್ ಮಾರಾಟಗಾರರ ಶ್ರಮ ಹೆಚ್ಚಿದೆ. ನಿದ್ರೆಗೆಟ್ಟು ಕೆಲಸ ಮಾಡುತ್ತಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಲಾಭ ನೀಡುವ ನಿಟ್ಟಿನಲ್ಲಿ ಒಕ್ಕೂಟ ಮತ್ತು ಕೆಎಂಎಫ್ ಕೆಲಸ ಮಾಡಬೇಕು. ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ 6 ತಿಂಗಳಿಗೊಮ್ಮೆ ಸಭೆ ನಡೆಸಲಾಗುವುದು.
> –ಸಿ.ಶಿವಕುಮಾರ್, ಮನ್‌ಮುಲ್ ನಿರ್ದೇಶಕ.

ಪಟ್ಟಣದ ಕಸಾಪ ಭವನದಲ್ಲಿ ಮನ್‌ಮುಲ್ ಒಕ್ಕೂಟದಿಂದ ಆಯೋಜಿಸಿದ್ದ ನಂದಿನಿ ರಿಟೇಲ್ ಮಾರಾಟಗಾರರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ನಂದಿನಿ ರಿಟೇಲ್ ಮಾರಾಟಗಾರರ ಸಮಸ್ಯೆಗಳು ಗಮನಕ್ಕೆ ಬಂದಿದೆ. ಒಕ್ಕೂಟಕ್ಕೆ ಉತ್ಪಾದಕರು ಎಷ್ಟು ಮುಖ್ಯವೋ ಮಾರಾಟಗಾರರು ಸಹ ಅಷ್ಟೇ ಮುಖ್ಯ. ನಮ್ಮ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದ ಬಳಿಕ ರಿಟೇಲ್ ಮಾರಾಟಗಾರರ ಸಮಸ್ಯೆಗಳ ಬಗ್ಗೆಯೂ ಚರ್ಚಿಸಿದ್ದೇವೆ. ಸಭೆಯಲ್ಲಿ ನಮ್ಮ ಗಮನಕ್ಕೆ ಬಂದಿರುವ ಸಮಸ್ಯೆಗಳ ಬಗ್ಗೆ ಮನ್‌ಮುಲ್ ಒಕ್ಕೂಟ ಹಾಗೂ ಕೆಎಂಎಫ್‌ನಲ್ಲಿ ಚರ್ಚಿಸಿ ಸಮಸ್ಯೆ ನಿವಾರಣೆಗೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಮಂಡ್ಯ ಹಾಲು ಒಕ್ಕೂಟ ಹಾಲು ಉತ್ಪಾದನೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ. ದೇಶದಲ್ಲಿ ನಮ್ಮ ರಾಜ್ಯ 2ನೇ ಸ್ಥಾನದಲ್ಲಿದೆ. ಒಕ್ಕೂಟದಲ್ಲಿ 13 ಲಕ್ಷಕ್ಕೂ ಅಧಿಕ ಹಾಲು ಉತ್ಪಾದನೆಯಾಗುತ್ತಿದ್ದು, 6ರಿಂದ 7 ಲಕ್ಷ ಹಾಲು ಮಾತ್ರ ಮಾರಾಟವಾಗುತ್ತಿದೆ. ಉಳಿದ ಹಾಲಿನಲ್ಲಿ ಉಪ ಉತ್ಪನ್ನಗಳ ತಯಾರಿಸಲಾಗುತ್ತಿದೆ. ಕೋವಿಡ್ ಬಳಿಕ ಉದ್ಯೋಗ ಕಳೆದುಕೊಂಡು ಬಹಳಷ್ಟು ನಿರುದ್ಯೋಗಿಗಳು ನಗರ ತೊರೆದು ಹಳ್ಳಿಗೆ ಬಂದು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಪ್ರತಿ ವರ್ಷ ರಿಟೇಲ್ ಮಾರಾಟಗಾರ ಸಭೆ ನಡೆಸಿ ನಿಮ್ಮ ಸಮಸ್ಯೆ ಆಲಿಸಲಾಗುವುದು ಎಂದರು.

ಸಭೆಯಲ್ಲಿ ರಿಟೇಲ್ ಮಾರಾಟಗಾರರ ಪರವಾಗಿ ಹೆಚ್.ಎನ್.ಮಂಜುನಾಥ್, ರಮೇಶ್ ಅವರು ಹಲವು ಸಮಸ್ಯೆಗಳ ಕುರಿತು ಚರ್ಚಿಸಿದರು. ಇದೇ ವೇಳೆ ನೂತನ ಕೆಎಂಎಫ್ ನಿರ್ದೇಶಕರಾಗಿ ಆಯ್ಕೆಯಾದ ಅಪ್ಪಾಜಿಗೌಡರನ್ನು ಅಭಿನಂದಿಸಿ, 2026ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆಗೊಳಿಸಲಾಯಿತು.

ಸಭೆಯಲ್ಲಿ ಒಕ್ಕೂಟದ ಮಾರಾಟ ವಿಭಾಗದ ವ್ಯವಸ್ಥಾಪಕ ಶ್ರೀಕಾಂತ್, ಉಪ ವ್ಯವಸ್ಥಾಪಕಿ ಬಿಂದುಶ್ರೀ, ಸಹಾಯಕ ವ್ಯವಸ್ಥಾಪಕ ಸಾಗರ್, ಮನ್‌ಮುಲ್ ಉಪ ವ್ಯವಸ್ಥಾಪಕ ಆರ್.ಪ್ರಸಾದ್, ರವಿ, ಸೋಮಶೇಖರ್, ಮನು, ಹೆಚ್.ಎಸ್.ರಾಜು, ಹಾಲುನೌಸಂ ಅಧ್ಯಕ್ಷ ಶಿವಪ್ಪ, ಶಶಿ ಕಲಾ, ಮಾರ್ಗ ವಿಸ್ತರಣಾಧಿಕಾರಿಗಳಾದ ಮಧುಶೇಖರ್, ಪ್ರಜ್ವಲ್‌ಗೌಡ, ನಾಗೇಂದ್ರ ಇದ್ದರು.

ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಜಿ ಆಹ್ವಾನ

ಮಂಡ್ಯ: ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಮತ್ತು ಅರಕೆರೆ ಗ್ರಾಪಂಗಳಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಹ ವಿಕಲಚೇತನರನ್ನು ಮಾಸಿಕ ಗೌರವಧನದ ಆಧಾರದ ಮೇಲೆ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.16 ಕೊನೆ ದಿನ. ಮಾಹಿತಿಗೆ 8453609826 ಅನ್ನು ಸಂಪರ್ಕಿಸಿ.

ಚೇತನಾ ಮಹೇಶ್ ನಿಧನ



ಕೆಆರ್.ಪೇಟೆ, ಜ.2– ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಆಪ್ತ ಸಹಾಯಕ ಚೇತನಾ ಮಹೇಶ್(62) ಶುಕ್ರವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಕೆ.ಆರ್.ಪೇಟೆಯ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಕೃಷಿ ಸಚಿವ ಚಲುವರಾಯಸ್ವಾಮಿ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಚನ್ನೇಗೌಡ



ಕೆ.ಆರ್.ಪೇಟೆ, ಜ.2–ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರು ಹಾಗೂ ಸರ್ವೆ ಇಲಾಖೆ ನಿವೃತ್ತ ಅಧಿಕಾರಿ ಚನ್ನೇಗೌಡ(94) ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಅಗ್ರಹಾರಬಾಚಹಳ್ಳಿ ಪಿಎಸಿಎಸ್ ನಿರ್ದೇಶಕ ಎ.ಸಿ.ವೆಂಕಟೇಶ್, ಎ.ಸಿ.ಮೋಹನ್‌ಕುಮಾರ್, ಎ.ಸಿ.ಶ್ರೀನಿವಾಸ್ ಸೇರಿದಂತೆ ಮೂವರು ಪುತ್ರರು, ಭಾರತೀ, ಆರತಿ ಸೇರಿದಂತೆ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ನಾಲ್ಕು ಪ್ರಕರಣ ದಾಖಲು

ರಾಜಶೇಖರ ಸಹೋದರ ಹತ್ಯೆ ಬಗ್ಗೆ ದೂರು ನೀಡಿದ್ದಾರೆ. ವಾಲ್ಮೀಕಿ ಮಹರ್ಷಿಗೆ ಅವಮಾನ ಮಾಡಿದ್ದಾರೆ ಎಂದು ಮತ್ತೊಂದು ಪ್ರಕರಣ ದಾಖಲಾಗಿದ್ದು, ಸುಮೊಟೋ ಕೇಸ್ ಸಹ ಪೊಲೀಸರು ದಾಖಲಿಸಿಕೊಂಡಿದ್ದಾರೆ ಎಂದು ತಿಳಿಸಿದರು. ಬಿಜೆಪಿಯವರು ದೂರು ಕೊಡುವ ನಿರೀಕ್ಷೆ ಇದೆ. ಯಾರನ್ನು ಈವರೆಗೂ ಬಂಧಿಸಿಲ್ಲ. ಯಾರು ದೂರು ಕೊಟ್ಟರೂ ತೆಗೆದುಕೊಳ್ಳುತ್ತೇವೆ ಎಂದರು. ಪೊಲೀಸರ ವೈಫಲ್ಯದ ಬಗ್ಗೆಯೂ ತನಿಖೆ ನಡೆಸುತ್ತೇವೆ. ರಾಜಕಾರಣಿಗಳ ಒತ್ತಡವಿದೆ ಅನ್ನೋ ಬಗ್ಗೆ ಮಾಹಿತಿ ಇಲ್ಲ. ಸಿಸಿಟಿವಿ ಮತ್ತು ಮಾಧ್ಯಮ ಕ್ಯಾಮರ ಪರಿಶೀಲಿಸಿ ಸುಮೊಟೋ ಕೇಸ್‌ನಲ್ಲಿ ಬಂಧಿಸುತ್ತೇವೆ. ಸುಮ್ಮನೆ ಅರೆಸ್ಟ್ ಮಾಡಲ್ಲ. ದೊಡ್ಡವರ ಹೆಸರು ಇದ್ದಾಗ ನಿಧಾನವಾಗಿ ತನಿಖೆ ಮಾಡಿ ಬಂಧಿಸುತ್ತೇವೆ ಎಂದು ಅವರು ತಿಳಿಸಿದರು.

ಏ.22ರಿಂದ 3 ದಿನ ಸಿಇಟಿ

ಏ.24ಕ್ಕೆ ಗಣಿತ ಹಾಗೂ ಜೀವಶಾಸ್ತ್ರ ಪರೀಕ್ಷೆಗಳು ನಡೆಯಲಿವೆ. ಇದೇ ವೇಳೆ ಪಿಜಿಸಿಇಟಿ ವೇಳಾಪಟ್ಟಿ ಪ್ರಕಟಿಸಿದ ಸಚಿವರು, ಮೇ 14 ಎಂಬಿಎ–ಎಂಸಿಎ, ಮೇ 23 ಎಂಇ –ಎಂಟೆಕ್, ಮೇ 23 ಡಿಸಿಇಟಿ, ಜುಲೈ 18 ಎಂಎಸ್ಸಿ ನರ್ಸಿಂಗ್, ಅಕ್ಟೋಬರ್ 11 ಕೆಎಸ್‌ಇಟಿ, ನವೆಂಬರ್ 21ರಂದು ಡಿ–ಫಾರ್ಮಾ ಮತ್ತು ಎಂ–ಫಾರ್ಮಾ ಕೋರ್ಸ್‌ಗಳಿಗೆ ಪರೀಕ್ಷೆ ನಡೆಯಲಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮತಿ ನೀಡಿದರೆ ಕಾಲೇಜುಗಳಲ್ಲಿ ಹೆಣ್ಣುಮಕ್ಕಳಿಗೆ ಋತುಚಕ್ರ ರಜೆ ನೀಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಗೆ ವೇಳಾಪಟ್ಟಿ ಪ್ರಕಟಿಸಲಾಗುವುದು. ಚುನಾವಣೆ ಸ್ವರೂಪದ ಬಗ್ಗೆ ನನ್ನ ಮತ್ತು ಸುಧಾಕರ್ ನೇತೃತ್ವದಲ್ಲಿ ಕೆಪಿಸಿಸಿ ಅಧ್ಯಕ್ಷರು ಸಮಿತಿ ರಚಿಸಿದ್ದಾರೆ. ನಾವು ನೀಡುವ ವರದಿ ಆಧರಿಸಿ ಚುನಾವಣಾ ಪ್ರಕ್ರಿಯೆ ನಡೆಯಲಿದೆ ಎಂದರು.

ಅವರಿಗೆ ನಾನೇ ಬಡಿಸಿದೆ...!!!

ನಾನು ಅಂದು ತೀರ್ಮಾನ ತೆಗೆದುಕೊಂಡಿದ್ದರೆ ಹಣ ಖರ್ಚು ಮಾಡದೇ ಗೆದ್ದಿರುತ್ತಿದ್ದೆ. ಚುನಾವಣಾ ರಾಜಕಾರಣದಲ್ಲಿ ನಾನು ಈಗ ಇಲ್ಲದಿರಬಹುದು, ಆದರೆ ಜನಸೇವೆಗೆ ಅನ್ಯ ಮಾರ್ಗವೂ ಇದೆ. ಅದರಲ್ಲಿ ಮಗ್ನನಾಗಿದ್ದೇನೆ. ನನಗೆ ಟಿಕೆಟ್ ಕೈತಪ್ಪಿದ್ದರ ಬಗ್ಗೆ ಎಂದೂ ಚಿಂತೆ ಮಾಡಿಲ್ಲ. ಅಧಿಕಾರ ಇದ್ದಾಗ ಸುತ್ತಮುತ್ತ ಸಾವಿರಾರು ಮಂದಿ ಇರುತ್ತಾರೆ. ಅಧಿಕಾರ ಕೊನೆಗೊಂಡ ಮಾರನೇ ದಿನ ಒಬ್ಬರೂ ಇರುವುದಿಲ್ಲ. ಇದನ್ನು ಒಪ್ಪಿಕೊಳ್ಳಲು ಸಮಚಿತ್ತತೆ ಬೇಕು. ಜನ ಅಂತಹ ಸಮಚಿತ್ತತೆಯನ್ನು ಕಲಿಸಿದ್ದಾರೆ. ಇದರಿಂದ ಅಧಿಕಾರ ಇರಲಿ, ಇಲ್ಲದೇ ಇರಲಿ ತೃಪ್ತಿಯಾಗಿದ್ದೇನೆ ಎಂದು ತಿಳಿಸಿದರು.

ಕಡಿಮೆ ದರದಲ್ಲಿ ಔಷಧಿ: ಜನರಿಗೆ ಕಡಿಮೆ ದರದಲ್ಲಿ ಔಷಧ ಪೂರೈಸುವ ಉದ್ದೇಶದಿಂದ ಈ ಹಿಂದೆ ಜನೌಷಧಿ ಕೇಂದ್ರ ತೆರೆಯಲಾಯಿತು. ಇದರಿಂದ ನನ್ನ ವಿರುದ್ಧ ಔಷಧಿ ಕಂಪನಿಗಳು ಲಾಬಿ ಮಾಡಿದವು. ರಾಜ್ಯದ ವಿವಿಧೆಡೆ ನನ್ನ ವಿರುದ್ಧ ಪ್ರತಿಭಟನೆ ನಡೆಸಿ, ಭಾವಚಿತ್ರಕ್ಕೆ ಅಪಮಾನಿಸಿದರು. ಆದರೆ ಎದೆಗುಂದಲಿಲ್ಲ. ಜನೌಷಧಿ ಕೇಂದ್ರವನ್ನು ತೆರೆಯಲಾಯಿತು. ನನ್ನ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಲಾಯಿತು. ಆದರೆ, ಜನೌಷಧಿ ಕೇಂದ್ರದ ಗುತ್ತಿಗೆಯನ್ನು ನನ್ನ ಸಂಬಂಧಿಕರಿಗೆ ನೀಡಿರಲಿಲ್ಲ. ಬದಲಾಗಿ ಜನತಾ ಬಜಾರ್‌ಗೆ ನೀಡಲಾಗಿತ್ತು. ಇದರಿಂದ ನನ್ನ ಮೇಲಿನ ಆರೋಪ ಸುಳ್ಳೆಂದು ಜಗಜ್ಜಾಹೀರಾಯಿತು. ಜನೌಷಧಿ ಕೇಂದ್ರದಲ್ಲಿ ಲಾಬಿ ನಡೆದಿದೆ ಎಂದು ನಾಯಕರೊಬ್ಬರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನೌಷಧಿ ಕೇಂದ್ರದಲ್ಲಿ ಎಸ್.ಎ. ರಾಮದಾಸ್ ಯಾವುದೇ ಭ್ರಷ್ಟಾಚಾರ ನಡೆಸಿಲ್ಲ ಎಂದು ಹೇಳುವ ಮೂಲಕ ನನ್ನ ಕಾರ್ಯವೈಖರಿಯನ್ನು ಮೆಚ್ಚಿದ್ದು ನನಗೆ ಈಗಲೂ ಸಂತೋಷವನ್ನುಂಟು ಮಾಡಿದೆ ಎಂದು ವಿವರಿಸಿದರು.

ಜೆಎಸ್‌ಎಸ್ ಕಾಲೇಜುವರೆಗೆ ವಿಸ್ತರಣೆ

ವಿಸ್ತರಿಸಲು ಮನವರಿಕೆ ಮಾಡಿದ್ದರು. ಅದು ಸಂಚಾರ ಸಮಸ್ಯೆ ಪರಿಹಾರಕ್ಕೆ ಸೂಕ್ತ ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಮುಂದುವರೆದ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಅದರಂತೆ 2ನೇ ಹಂತದ ಫ್ಲೈಓವರ್ ಕಾಮಗಾರಿಯನ್ನು 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕ್ರಮವಹಿಸಲಾಗಿದೆ. ಅದರಂತೆ ಒಟ್ಟು 1.5 ಕಿ.ಮೀ. ಉದ್ದ 4 ಲೇನ್ ಫ್ಲೈಓವರ್, ಒಟ್ಟು 3 ಅಂಡರ್ ಪಾಸ್‌ಗಳು ಬರಲಿವೆ. ಎರಡೂ ಹಂತದ ಯೋಜನೆಗೆ ಒಟ್ಟು 57.3 ಕೋಟಿ ವೆಚ್ಚವಾಗಲಿದೆ. ಮೊದಲನೇ ಹಂತದ 37.3 ಕೋಟಿ ರೂ. ವೆಚ್ಚದ ಕಾಮಗಾರಿ ಶೇ.90ರಷ್ಟು ಪೂರ್ಣಗೊಂಡಿದ್ದು, 2ನೇ ಹಂತದ ಮುಂದುವರೆದ ಕಾಮಗಾರಿಯು ತಿಂಗಳೊಳಗೆ ಆರಂಭವಾಗಲಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಈ ಯೋಜನೆ ಪೂರ್ಣಗೊಂಡಲ್ಲಿ ನಂಜನಗೂಡು ಹೆದ್ದಾರಿಯ ರಿಂಗ್‌ರೋಡ್ ಜಂಕ್ಷನ್ ಬಳಿ ಉಂಟಾಗುತ್ತಿದ್ದ ವಾಹನ ಸಂಚಾರ ದಟ್ಟಣೆ ಸಮಸ್ಯೆಯು ನೀಗಿದಂತಾಗುತ್ತದೆ.

ಕೋಗಿಲು ನಿರಾಶ್ರಿತರಿಗೆ ಮನೆ ಹಂಚಿಕೆಗೆ ತಡೆ!

ಆಗಲಿದೆ ಎಂದೂ ಹೇಳಲಾಗಿತ್ತು. ಇದಕ್ಕೆ ತೀವ್ರ ಟೀಕೆ ಹಾಗೂ ವಿರೋಧಗಳು ವ್ಯಕ್ತವಾಗಿದ್ದವು. ಅಲ್ಪಸಂಖ್ಯಾತ ಸಮುದಾಯವನ್ನು ಸಮಾಧಾನಪಡಿಸಲು ಸರ್ಕಾರ ಅಕ್ರಮ ಬಾಂಗ್ಲಾದೇಶಿ ಮುಸ್ಲಿಮರು ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಇತರ ರಾಜ್ಯಗಳಿಂದ ವಲಸೆ ಬಂದವರಿಗೆ ಮನೆಗಳನ್ನು ಮಂಜೂರು ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರ ಕೇರಳದ ಒತ್ತಡಕ್ಕೆ ಮಣಿಯುತ್ತಿದೆ ಎಂದು ಬಿಜೆಪಿ ಆರೋಪಿಸಿತ್ತು

ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ವಸತಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು, ಫಲಾನುಭವಿಗಳ ದಾಖಲೆಗಳ ಪರಿಶೀಲನೆಯ ನಂತರ ಮನೆ ಹಂಚಿಕೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಜಿಬಿಎ ಮತ್ತು ರಾಜೀವ್ ಗಾಂಧಿ ವಸತಿ ನಿಗಮವು ದಾಖಲೆಗಳನ್ನು ಪರಿಶೀಲಿಸಿ ಬೈಯಪ್ಪನಹಳ್ಳಿಯಲ್ಲಿರುವ ಕರ್ನಾಟಕ ವಸತಿ ಮಂಡಳಿಯ ಕ್ವಾರ್ಟರ್ಸ್‌ಗಳಲ್ಲಿ ಅರ್ಹರಿಗೆ ಮಾತ್ರ ವಸತಿ ಒದಗಿಸಲಿದೆ ಎಂದು ತಿಳಿಸಿದ್ದಾರೆ. ಏತನ್ಮಧ್ಯೆ ದುಡಿಯೋ ಜನರ ವೇದಿಕೆಯ ಸಾಮಾಜಿಕ ಕಾರ್ಯಕರ್ತರು, ನಿರಾಶ್ರಿತರ ಪರವಾಗಿ ನಿಂತಿದ್ದು, 2012ರಲ್ಲಿ ಫಕೀರ್ ಲೇಔಟ್‌ನಲ್ಲಿ ಮನೆಗಳಿದ್ದ ಗೂಗಲ್ ಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ಮನೆಗಳು ನಿರ್ಮಾಣಗೊಂಡಿರುವುದಲ್ಲ. ಆಗಿನ ಬಸವರಾಜ ಬೊಮ್ಮಾಯಿ, ಯಡಿಯೂರಪ್ಪ ಮತ್ತು ಡಿ.ವಿ.ಸದಾನಂದಗೌಡ ಅವರ ಆಡಳಿತಾವಧಿಯಲ್ಲೂ ಇಲ್ಲಿ ಮನೆಗಳಿದ್ದವು ಎಂದು ಹೇಳಿದ್ದಾರೆ.

30 ವರ್ಷಗಳ ಹಿಂದೆಯೇ ಇವರು ಇಲ್ಲಿಗೆ ಬಂದಿದ್ದು, ವೋಟರ್ ಐಡಿ ಹಾಗೂ ಆಧಾರ್ ಕಾರ್ಡ್‌ಗಳನ್ನು ಪಡೆದಿದ್ದಾರೆ. ಇದೀಗ ದಾಖಲೆ ಹೊಂದಿರುವ ಕರ್ನಾಟಕ ನಿವಾಸಿಗಳಾಗಿದ್ದಾರೆಂದು ವೇದಿಕೆಯ ಕಾರ್ಯಕರ್ತ ಮನೋಹರ್ ಎಳವರ್ತಿಯವರು ತಿಳಿಸಿದ್ದಾರೆ.

ಕೊಟ್ಟ ಮಾತಿನಂತೆ ನಡೆಯಬೇಕು...

ಮಧ್ಯಪ್ರದೇಶದಲ್ಲಿ ದಿಗ್ವಿಜಯ ಸಿಂಗ್ ಮತ್ತು ಜ್ಯೋತಿರಾಧಿತ್ಯ ಸಿಂಧ್ಯ ನಡುವಿನ ಕಲಹದಿಂದ ಅಧಿಕಾರ ಕಳೆದುಕೊಳ್ಳಬೇಕಾಯಿತು. ಅದೇ ರೀತಿ ರಾಜಸ್ತಾನದಲ್ಲಿ ಅಂದಿನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಮತ್ತು ಸಚಿನ್ ಪೈಲಟ್ ನಡುವಿನ ಗೊಂದಲ ಪರಿಹರಿಸಲು ಸಾಧ್ಯವಾಗದೆ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಪಂಜಾಬ್‌ನಲ್ಲಿ ಕ್ಯಾಪ್ಟನ್ ಅಮ್ರೀಂದರ್ ಸಿಂಗ್ ಹಾಗೂ ನವಜೋತ್‌ಸಿಂಗ್ ಸಿದ್ದು ಕಲಹ, ಹರಿಯಾಣದಲ್ಲಿ ಭೂಪಿಂದರ್ ಸಿಂಗ್ ಹೂಡ ಮತ್ತು ಕುಮಾರಿ ಶೆಲ್ಜಾ, ಛತ್ತೀಸ್‌ಘಡದಲ್ಲಿ ಭೂಪೇಶ್ ಬಘೇಲ್ ಹಾಗೂ ಟಿ.ಸಿಂಗ್ ದೇವ್ ನಡುವಿನ ಅಧಿಕಾರ ಹಂಚಿಕೆ ಗೊಂದಲಕ್ಕೆ ಸೂಕ್ತ ಸಮಯದಲ್ಲಿ ಸಮಂಜಸ ನಿರ್ಣಯ ಕೈಗೊಳ್ಳಲಾಗದೆ ಅಧಿಕಾರ ಕಳೆದುಕೊಳ್ಳಬೇಕಾಯಿತು. ಅಂತಹ ಸ್ಥಿತಿ ಕರ್ನಾಟಕದಲ್ಲಿ ಎದುರಾಗುವುದಕ್ಕೂ ಮುನ್ನ ಸಮಸ್ಯೆ ಬಗೆಹರಿಸುವಂತೆ ರಾಹುಲ್ ಗಾಂಧಿ ಅವರಿಗೆ ಸೋನಿಯಾ ಪೂರ್ಣ ಪಾಠ ಮಾಡಿದ್ದಾರಂತೆ. ಇಂತಹುದೇ ಪರಿಸ್ಥಿತಿ ಕರ್ನಾಟಕದಲ್ಲೂ ಮರುಕಳಿಸಬಾರದು ಎಂಬುದಾಗಿ ರಾಹುಲ್ ಅವರಿಗೆ ಸೋನಿಯಾ ಗಾಂಧಿ ಕಿವಿಮಾತು ಹೇಳಿದ್ದಾರಂತೆ. ನಾವು ನಮ್ಮ ಪಕ್ಷದಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳದಿದ್ದರೆ, ಇಂಡಿಯಾ ಕೂಟದಲ್ಲಿನ ಮಿತ್ರ ಪಕ್ಷಗಳು ದೂರವಾಗುವ ಸಂಭವ ಇರುತ್ತದೆ. ಕರ್ನಾಟಕದಲ್ಲಿನ ಗೊಂದಲ ಬಗೆಹರಿಸುವಂತೆ ಸೂಚಿಸಿದ ನಂತರ ಸಮಸ್ಯೆ ಕುರಿತು ಗಮನ ನೀಡುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ ಎನ್ನಲಾಗಿದೆ.

ಸಫಾರಿ ಆರಂಭಿಸಿ

ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಫಾರಿ ನಿರ್ಬಂಧಿಸಿ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಕಳೆದ ನವೆಂಬರ್‌ನಲ್ಲಿ ಆದೇಶಿಸಿದ್ದರು. ಇದರಿಂದ ದಿನ ಕಳೆದಂತೆ ಎರಡೂ ಜಿಲ್ಲೆಗಳ ಪ್ರವಾಸೋದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಾರಂಭಿಸಿತು.

ಸಫಾರಿ ವಾಹನಗಳು ನಿಂತಲ್ಲೇ ನಿಂತಿದ್ದು, ಅರಣ್ಯ ಇಲಾಖೆ ಆದಾಯಕ್ಕೂ ಭಾರೀ ಪೆಟ್ಟು ಬಿದ್ದಿದೆ. ಪರಿಣಾಮ ಗುತ್ತಿಗೆ ನೌಕರರು ಸಂಬಳ ಕಡಿತಗೊಳ್ಳುವುದರ ಜೊತೆಗೆ ಅವರಿಗೆ ಕೆಲಸ ಕಳೆದುಕೊಳ್ಳುವ ಆತಂಕವೂ ಎದುರಾಗಿದೆ. ಸಫಾರಿ ಗೈಡ್ ಹಾಗೂ ಜೀಪ್ ಚಾಲಕರಿಗೂ ಆತಂಕ ಎದುರಾಗಿದೆ. ಸಫಾರಿ ಸ್ಥಳದಲ್ಲಿದ್ದ ಅಗತ್ಯ ವಸ್ತುಗಳ ವ್ಯಾಪಾರಿಗಳಿಗೂ ಹೊಡೆತ ಬಿದ್ದಿದೆ.

ಸರ್ಕಾರಕ್ಕೆ ಒತ್ತಾಯ: ಮೈಸೂರು ಹೋಟೆಲ್ ಮಾಲೀಕರ ಸಂಘ, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ಪದಾಧಿಕಾರಿಗಳು, ನಾಗರಹೊಳೆ ಮತ್ತು ಬಂಡೀಪುರ ಸಫಾರಿ ಅವಲಂಬಿತ ಉದ್ಯೋಗಸ್ಥರು ಡಿಸೆಂಬರ್ 4ರಂದು ಮೈಸೂರಿನಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ, ಸಫಾರಿ ಬಂದ್‌ನ ದುಷ್ಪರಿಣಾಮವನ್ನು ಎಳೆಎಳೆಯಾಗಿ ಬಿಚ್ಚಿಟ್ಟು, ಸಫಾರಿ ಪುನರಾರಂಭಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದರು. ಅಲ್ಲದೆ ಇದೇ ವೇಳೆ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ, ಈ ಸಂಬಂಧ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ನಂತರವೂ ಹಲವರು ಸಫಾರಿ ಬಂದ್‌ನಿಂದ ಎಷ್ಟೆಲ್ಲಾ ಕಷ್ಟ–ನಷ್ಟ ಉಂಟಾಗುತ್ತಿದೆ ಎಂಬುದನ್ನು ಹಲವರು ಸರ್ಕಾರದ ಗಮನಕ್ಕೆ ತರುತ್ತಿದ್ದರು. ಈ ನಡುವೆ ಸಫಾರಿ ಪುನರಾರಂಭಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮಹತ್ವ ಪಡೆದಿದೆ.

ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ದೇವಸ್ಥಾನಕ್ಕೆ ಪಾತ್ರೆಗಳ ಕೊಡುಗೆ



ಕೊಳ್ಳೇಗಾಲದ ಶ್ರೀ ಕ್ಷೇತ್ರ ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ದಾಸೋಹಕ್ಕೆ ಅನ್ನ ಕೈ, ಸೌಟು, ಬಕೆಟ್, ಜಗ್ಗು ಮತ್ತು ನೀರಿನ ಲೋಟಗಳನ್ನು ಮೈಸೂರಿನ ಮಹದೇವಪುರ ಮುಖ್ಯರಸ್ತೆಯ ಟೆಲಿಕಾಂ ಕಾಲೋನಿಯ ಶ್ರೀಮತಿ ಎಂ.ಕೆ. ನೇತ್ರಾವತಿ ಮತ್ತು ರಾಚಪ್ಪಾಜಿ ಅವರ ಪುತ್ರ ಆರ್.ರಾಜೇಂದ್ರ ಪ್ರಸಾದ್ ದೇವಸ್ಥಾನದ ಅರ್ಚಕರಾದ ಕುಮಾರ್ ಅವರಿಗೆ ಹಸ್ತಾಂತರಿಸಿದರು.

ಬಸ್ ಪ್ರಯಾಣಿಕರ ತಂಗುದಾಣ; ಹಾಡು, ಸಂಗೀತ, ಸುದ್ದಿ ಸಮಾಚಾರ ತಾಣ!

ನಿವೃತ್ತ ಎಲ್‌ಐಸಿ ಅಧಿಕಾರಿ ವಿಜಯೇಂದ್ರರ ವಿನೂತನ ಸೇವಾ ಕಾರ್ಯ

ಮೈಸೂರು, ಜ.2(ಎಂಕೆ)– ಬಸ್ ಪ್ರಯಾಣಿಕರ ತಂಗುದಾಣದಲ್ಲಿ ಮನಸ್ಸಿಗೆ ಮುದ ನೀಡುವ ಸಂಗೀತ ಆಲಾಪನೆ... ಬಸ್ ಬರುವುದು ತಡ ವಾದರೂ ನೋ ಟೆನ್ಷನ್... ಕಿವಿಗೆ ಇಂಪು–ಮನಕೆ ತಂಪು... ಜೊತೆಗೆ ಸುದ್ದಿ–ಸಮಾಚಾರ ಅವಕಾಶ!



ದಿವಂಗತ ಹೋರಿ ಸುಬ್ಬೇಗೌಡ ಬೂಕನಕೆರೆ ಸ್ಮರಣಾರ್ಥ ನಿರ್ಮಿಸಿರುವ ಬಸ್ ಪ್ರಯಾಣಿಕರ ತಂಗುದಾಣದಲ್ಲಿ ರೇಡಿಯೋ ಸೆಟ್ ಅಳವಡಿಸಲಾಗಿದೆ.

ಹೌದು! ದೇಶದ ಮೊಟ್ಟ ಮೊದಲ ಆಕಾಶವಾಣಿ ಹೆಗ್ಗಳಿಕೆಗೆ ಪಾತ್ರವಾಗಿ 90 ವರ್ಷ ಪೂರೈಸಿರುವ ಮೈಸೂರು ಆಕಾಶವಾಣಿ ಹಾಗೂ ನೆಚ್ಚಿನ ಕೇಳುಗರಾದ ಬೂಕನಕೆರೆ ವಿಜಯೇಂದ್ರ ಅವರ ವಿನೂತನ ಪ್ರಯೋಗದಿಂದಾಗಿ ಬಸ್ ತಂಗುದಾಣದಲ್ಲಿ ಸಂಗೀತದ ಆಲಾಪನೆ ಆರಂಭವಾಗಿದೆ.

ಬಸ್ಸಿಗಾಗಿ ಕಾದು ಹೈರಾಣಾಗಿರುವ ಪ್ರಯಾಣಿಕರ ಮನಸ್ಸನ್ನು ತಣಿಸುವ ವಿನೂತನ ಮಾರ್ಗವೆಂಬಂತೆ ಬಸ್ ತಂಗುದಾಣದಲ್ಲಿ ಆಕಾಶವಾಣಿ ರೇಡಿಯೋ ಸೆಟ್ ಅಳವಡಿಸಿ, ದಿನಪೂರ್ತಿ ಬಸ್ ನಿಲ್ದಾಣದಲ್ಲೇ ನಿಂತರೂ ಬೇಸರವಿಲ್ಲದೆ ಸಂಗೀತದ ಆಲಾಪನೆ ಕೇಳುವ ಭಾಗ್ಯ ಕಲ್ಪಿಸಲಾಗಿದೆ.

ಮೈಸೂರಿನ ಕುವೆಂಪುನಗರ ಬಸ್ ಡಿಪೋ ಸಮೀಪದ 'ಎನ್' ಬ್ಲಾಕ್‌ನಲ್ಲಿ ವಿಜಯೇಂದ್ರ ತಮ್ಮ ತಂದೆ ದಿವಂಗತ ಹೋರಿ ಸುಬ್ಬೇಗೌಡ ಬೂಕನಕೆರೆ ಅವರ ಸ್ಮರಣಾರ್ಥ ನಿರ್ಮಿಸಿರುವ ಬಸ್ ಪ್ರಯಾಣಿಕರ ತಂಗುದಾಣದಲ್ಲಿ ರೇಡಿಯೋ ಸೆಟ್ ಅಳವಡಿಸಿದ್ದು, ಬೆಳಗ್ಗೆಯಿಂದ ಸಂಜೆಯವರೆಗೂ ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾಗುವ ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಚಲನ ಚಿತ್ರಗೀತೆಗಳು, ಕೃಷಿ ರಂಗ ಇನ್ನಿತರ ಎಲ್ಲಾ ಜನಪ್ರಿಯ ಕಾರ್ಯಕ್ರಮಗಳನ್ನು ಆಲಿಸುವ ವ್ಯವಸ್ಥೆ ಮಾಡಲಾಗಿದೆ.

ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಾ ಮೊಬೈಲ್ ಹಿಡಿದುಕೊಂಡು ಕಣ್ಣು ಮತ್ತು ಮನಸ್ಸನ್ನು ಕೆಡಿಸಿಕೊಳ್ಳುವ ಬದಲು ತಮ್ಮ ಮಾರ್ಗದ ಬಸ್ ಬರುವವರೆಗೂ ಇಷ್ಟದ ಹಾಡುಗಳನ್ನು ಕೇಳುವುದು, ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಅನುಕೂಲ ಮಾಡಿಕೊಡಲಾಗಿದೆ. ಬಸ್ ಪ್ರಯಾಣಿಕರು ಮಾತ್ರವಲ್ಲದೆ ಸಮೀಪದ ಮೈದಾನಕ್ಕೆ ವಾಯುವಿಹಾರಕ್ಕೆ ಬರುವವರು, ಕ್ರೀಡಾಪಟುಗಳು ಹಾಗೂ ಸಾರ್ವಜನಿಕರೂ ಇದರ ಉಪಯೋಗ ಪಡೆದುಕೊಳ್ಳಬಹುದಾಗಿದೆ.

ಇದೇ ಮೊದಲು: ಮೈಸೂರು ಆಕಾಶವಾಣಿಯ ಕೇಳುಗರ ಬಳಗ 'ಸಮುದ್ಯತಾ' ಹೆಸರಿನಲ್ಲಿ ಹಮ್ಮಿಕೊಂಡಿರುವ ವಿನೂತನ ಹಾಗೂ ಮೊದಲ ಪ್ರಯೋಗ ಇದಾಗಿದೆ. ಜನಪ್ರಿಯ ಹಾಡುಗಳನ್ನು ಆಲಿಸುವುದಲ್ಲದೆ ಈ ಬಸ್ ನಿಲ್ದಾಣವೂ ಜನಸಂಪರ್ಕ ಸೇತುವೆಯಾಗಿಯೂ ಬದಲಾಗುವ ಸಾಧ್ಯತೆ ಇದೆ ಎಂದು ಸ್ಥಳೀಯರು 'ಮೈಸೂರು ಮಿತ್ರ'ನಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಜ.4ಕ್ಕೆ ಉದ್ಘಾಟನೆ: ರೇಡಿಯೋ ಒಳಗೊಂಡ ಬಸ್ ಪ್ರಯಾಣಿಕರ ತಂಗುದಾಣವನ್ನು ಜ.4ರಂದು ಬೆಳಗ್ಗೆ 11 ಗಂಟೆಗೆ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಲಿದ್ದಾರೆ. ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಕೇಶವಮೂರ್ತಿ, ತಾಂತ್ರಿಕ ವಿಭಾಗದ ಸಿ.ರಂಜಿತ್, ಕುವೆಂಪುನಗರ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಮ್ಯಾನೇಜರ್ ಚೇತನ್, ಮೈಸೂರು ಆಕಾಶವಾಣಿಯ ಕೇಳುಗರ ಬಳಗ ಸಮುದ್ಯತಾದ ಅಧ್ಯಕ್ಷ ಕಣ್ಣೂರು ವಿ. ಗೋವಿಂದಾಚಾರ್ಯ ಮತ್ತಿತರರು ಅತಿಥಿಗಳಾಗಿ ಉಪಸ್ಥಿತರಿರುವರು.

ಬಣ್ಣ ಬಣ್ಣದ ಕೇಕ್ ಆರೋಗ್ಯಕ್ಕೆ ಹಾನಿಕರ ಹುಷಾರ್....

• ಜನರ ಆರೋಗ್ಯದ ವಿಷಯದಲ್ಲಿ ಚೆಲ್ಲಾಟವಾಡುತ್ತಿರುವ ಬೇಕರಿಗಳು • ಆರೋಗ್ಯ, ಸುರಕ್ಷತೆ ಮತ್ತು ಔಷಧಿ ಆಡಳಿತ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ

ಕೇಕ್ ತಯಾರಿಕೆಗೆ ದೀರ್ಘ ಇತಿಹಾಸವಿದೆ

ಕೇಕ್ ನಮ್ಮ ಭಾರತೀಯ ಸಾಂಪ್ರದಾಯಿಕ ತಿಂಡಿ ತಿನಿಸುಗಳ ಪಟ್ಟಿಯಲ್ಲಿ ಇರಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರಖ್ಯಾತವಾದ ಕೇಕ್ ಇಂದು ಭಾರತೀಯರ ಆಹಾರ ಖಾದ್ಯಗಳಲ್ಲಿ ಒಂದಾಗಿದೆ. ಗ್ರೀಕರು, ಬ್ರಿಟಿಷರು, ಫ್ರೆಂಚರು ಭಾರತಕ್ಕೆ ಬಂದ ಸಂದರ್ಭದಲ್ಲಿ ಕೇಕ್ ಅನ್ನು ಇಲ್ಲಿನ ಜನರಿಗೆ ಪರಿಚಯಿಸಿದರು. ಕೇಕ್ ಎಂಬ ಪದಕ್ಕೆ ದೀರ್ಘ ಇತಿಹಾಸವಿದೆ. ಮೊದಲು ಗ್ರೀಕರು ಕೇಕ್ ತಯಾರಿಸಿ ಸೇವಿಸುತ್ತಿದ್ದರು. 14ನೇ ಶತಮಾನದ ಆರಂಭದಲ್ಲಿ ಇಂಗ್ಲೆಂಡ್‌ನಲ್ಲಿ ಕೇಕ್ ಬ್ರೆಡ್ ಆಗಿ ಪರಿವರ್ತನೆಗೊಂಡಿತು. 1920ರ ದಶಕದಲ್ಲಿ ಅಮೆರಿಕಾದ ಪಾರ್ಟಿಗಳಲ್ಲಿ ಇದನ್ನು ಹೆಚ್ಚಾಗಿ ಬಳಕೆ ಮಾಡುತ್ತಿದ್ದರು. ಅಮೆರಿಕಾದ ನಂತರ ಇತರೆ ದೇಶಗಳಲ್ಲಿ ನಡೆಯುವ ಪಾರ್ಟಿಗಳಲ್ಲಿ ಕೇಕ್ ಫ್ಯಾಷನ್ ಆಗಿ ಮಾರ್ಪಟ್ಟವು. ಭಕ್ಷ್ಯ ಭೋಜನ ತಯಾರಿಸುವ ಸಂದರ್ಭದಲ್ಲಿ ಕಡಿಮೆ ಸಮಯವಿದ್ದ ಹಿನ್ನೆಲೆಯಲ್ಲಿ ಶೀಘ್ರವಾಗಿ ಕೇಕ್ ತಯಾರಿಸುತ್ತಿದ್ದರು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಸಿಹಿಯಾದ ಕೇಕ್ ಭಾರತೀಯರ ತಿಂಡಿ-ತಿನಿಸುಗಳಲ್ಲಿ ಈಗ ಪ್ರಮುಖ ಸ್ಥಾನ ಪಡೆದಿದೆ. ಹುಟ್ಟುಹಬ್ಬ, ಹೊಸ ವರ್ಷದ ಆಚರಣೆ, ವಿವಾಹ ವಾರ್ಷಿಕೋತ್ಸವ, ನೂತನ ಕಚೇರಿಗಳ ಉದ್ಘಾಟನೆ ಸೇರಿದಂತೆ ಇತರೆ ಕಾರ್ಯಗಳಲ್ಲಿ ಕೇಕ್ ಕತ್ತರಿಸಲಿಲ್ಲವೆಂದರೆ ಆ ಕಾರ್ಯಕ್ರಮ ಅಪೂರ್ಣ ಎಂಬ ಮಟ್ಟಿಗೆ ಕೇಕ್ ಭಾರತೀಯರಲ್ಲಿ ಸ್ಥಾನ ಪಡೆದಿದೆ.



ಸಣ್ಣಪುಟ್ಟ ಬೇಕರಿ ಮಾತ್ರವಲ್ಲದೆ ಮೈಸೂರಿನ ಪ್ರತಿಷ್ಠಿತ ಬೇಕರಿಗಳಲ್ಲೂ ಇದೇ ಮಾದರಿ ಕೇಕ್‌ಗಳು ಮಾರಾಟವಾಗುತ್ತಿವೆ. ಬೇಕರಿ ಮುಂದೆ ಹೋಗಿ ನಿಂತರೆ ಬಣ್ಣ ಬಣ್ಣದ ಹಾನಿಕಾರಕ ಕೇಕ್‌ಗಳು ಕಣ್ಣಿಗೆ ರಾಚುತ್ತವೆ. ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕೇಕ್‌ಗಳು ಮಾರಾಟವಾಗುತ್ತಿದ್ದರೂ ಆರೋಗ್ಯ ಇಲಾಖೆ, ಆಹಾರ ಸುರಕ್ಷತೆ-ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಮೌನಕ್ಕೆ ಜಾರಿದ್ದಾರೆ.



ಅತಿಯಾದ ಕೃತಕ ಬಣ್ಣ ಬಳಸಿ ಮೈಸೂರಿನ ಬೇಕರಿಯೊಂದರಲ್ಲಿ ತಯಾರಿಸಿರುವ ವರ್ಣರಂಜಿತ ಕೇಕ್

ಆರೋಪ ಸಾಬೀತಾದರೆ 3ರಿಂದ 10 ಲಕ್ಷ ರೂ. ದಂಡ; ಜೈಲು ಶಿಕ್ಷೆ

"ಕೇಕ್ ತಯಾರಿಕೆಗೆ ನಿಗದಿತ ಪ್ರಮಾಣದಲ್ಲಿ ನಿಗದಿತ ಬಣ್ಣವನ್ನು ಬಳಸಬೇಕು. ಬೇಕಾಬಿಟ್ಟಿ ಬಣ್ಣ ಬಳಸಿದರೆ ಆರೋಗ್ಯಕ್ಕೆ ಅಪಾಯಕಾರಿ ಹಾಗೂ ಕಾನೂನು ಬಾಹಿರ ಕೃತ್ಯವಾಗುತ್ತದೆ. ಕೇಕ್ ತಯಾರಿಸುವಾಗ ಫುಡ್ ಗ್ರೇಡ್‌ನಲ್ಲಿ 100 ಪಿಪಿಎಂ(ಪಾರ್ಟ್ಸ್ ಫಾರ್ ಮಿಲಿಯನ್)ಗಿಂತ ಹೆಚ್ಚಿರಬಾರದು. ಈ ಸಂಬಂಧ ಬೇಕರಿ ಹಾಗೂ ಹೋಟೆಲ್‌ನವರಿಗೆ ಅರಿವು ಮೂಡಿಸಿದ್ದೇವೆ. ಆದರೂ ಬಹಳಷ್ಟು ಬೇಕರಿಯವರು ಅತಿಯಾದ ಕೃತಕ ಬಣ್ಣ ಬಳಸಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 30ರಿಂದ ಮೈಸೂರಿನ ಬೇಕರಿಗಳಿಗೆ ದಿಢೀರ್ ಭೇಟಿ ನೀಡಿ ಅತಿಯಾದ ಬಣ್ಣ ಬಳಕೆ ಮಾಡಿರುವ ಕೇಕ್‌ಗಳ ಮಾದರಿಯನ್ನು ಸಂಗ್ರಹ ಮಾಡಿದ್ದೇವೆ. ಈಗಾಗಲೇ ಅತಿಯಾದ ಬಣ್ಣವಿರುವ 9 ಕೇಕ್ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿದ್ದೇವೆ. ಇಂತಹ ಕೇಕ್‌ಗಳ ಮಾದರಿಯನ್ನು ಸಂಗ್ರಹಿಸುವ ಕಾರ್ಯಾಚರಣೆ ಮುಂದುವರೆದಿದೆ. 100ಕ್ಕಿಂತ ಹೆಚ್ಚು ಪಿಪಿಎಂ ಬಳಸಿರುವ ಕೇಕ್‌ಗಳನ್ನು ತಯಾರಿಸಿರುವ ಬೇಕರಿ ಮಾಲೀಕರ ತಪ್ಪು ಎಂದು ಪ್ರಯೋಗಾಲಯದ ವರದಿಯಿಂದ ಸಾಬೀತಾದರೆ ಮೈಸೂರಿನ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲಾಗುವುದು. ಆರೋಪಿತರ ವಿರುದ್ಧ ಸೆಕ್ಷನ್ 59/1, 2, 3 ಮತ್ತು 4ರ ಅನ್ವಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುತ್ತೇವೆ. ಬೇಕರಿ ಮಾಲೀಕರ ತಪ್ಪು ಸಾಬೀತಾದರೆ ಈ ಸೆಕ್ಷನ್‌ಗಳ ಪ್ರಕಾರ 3ರಿಂದ 10 ಲಕ್ಷದವರೆಗೆ ದಂಡ ಹಾಗೂ ಜೈಲು ಶಿಕ್ಷೆಗೆ ಒಳಗಾಗುತ್ತಾರೆ. ಈ ಸಂಬಂಧ ನ್ಯಾಯಾಲಯ ಕೈಗೊಳ್ಳುವ ತೀರ್ಮಾನ ಅಂತಿಮವಾಗಿರುತ್ತದೆ.
-ಡಾ.ಎಸ್.ಎನ್.ರವೀಂದ್ರ, ಅಂಕಿತ ಅಧಿಕಾರಿ, ಆರೋಗ್ಯ, ಸುರಕ್ಷತೆ-ಔಷಧಿ ಆಡಳಿತ

ಮೈಸೂರು, ಜ.2(ಐಎಲ್‌ಎಂ)- ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹೊಸ ವರ್ಷದ ಸಂಭ್ರಮದ ವೇಳೆ ತರಹೇವಾರಿ ಕೇಕ್‌ಗಳು ಮಾರಾಟವಾಗಿವೆ. ಗ್ರಾಹಕರನ್ನು ಆಕರ್ಷಿಸಲು ಸಣ್ಣ ಪುಟ್ಟ ಮಾತ್ರವಲ್ಲದೆ ಪ್ರತಿಷ್ಠಿತ ಬೇಕರಿಗಳು ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಹಾನಿಕಾರಕ ಬಣ್ಣಗಳನ್ನು ಬಳಸಿ ಕೇಕ್ ತಯಾರಿಸಿವೆ. ಕ್ಯಾನ್ಸರ್ ಸೇರಿದಂತೆ ಮಾರಕ ರೋಗಗಳಿಗೆ ಕಾರಣವಾಗುವ ಕೇಕ್‌ಗಳನ್ನು ರಾಜಾರೋಷವಾಗಿ ಮಾರಾಟ ಮಾಡುತ್ತಿದ್ದರೂ ಆರೋಗ್ಯ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ.

ಹೊಸ ವರ್ಷ ಸಂಭ್ರಮದ ವೇಳೆ ನಿನ್ನೆ ರಾತ್ರಿ ಹಾಗೂ ಇಂದು ಮೈಸೂರಿನ ನೂರಾರು ಬೇಕರಿಗಳಲ್ಲಿ ಸಾವಿರಾರು ಕೇಕ್‌ಗಳು ಮಾರಾಟವಾಗಿವೆ. 'ಹ್ಯಾಪಿ ನ್ಯೂ ಇಯರ್-2026' ಅಕ್ಷರಗಳುಳ್ಳ ವರ್ಣರಂಜಿತ ಕೇಕ್‌ಗಳನ್ನು ಗ್ರಾಹಕರು ಮುಗಿಬಿದ್ದು ಖರೀದಿ ಮಾಡಿದ್ದಾರೆ.

ರುಚಿಗಿಂತ ಅಧಿಕವಾಗಿ ಬಣ್ಣಗಳಿಗೆ ಮಾರು ಹೋಗಿ ಗ್ರಾಹಕರು ಕೇಕ್ ಖರೀದಿಸಿದ್ದಾರೆ. ಆದರೆ ಕಣ್ಣು ಕುಕ್ಕುವ ಬಣ್ಣಗಳ, ಕೇಕ್‌ಗಳು ಆರೋಗ್ಯಕ್ಕೆ ಹಾನಿಕಾರಕ ಎಂಬ ನಿಜ ಸಂಗತಿ ಬಹಳಷ್ಟು ಗ್ರಾಹಕರಿಗೆ ತಿಳಿದಿಲ್ಲ. ಇಂತಹ ಹಾನಿಕಾರಕ ಬಣ್ಣಗಳನ್ನು ಬಳಸಿ ಕೇಕ್ ತಯಾರಿಸಿ ಮಾರಾಟ ಮಾಡುತ್ತಿರುವ ಬೇಕರಿಗಳು ಜನರ ಆರೋಗ್ಯದ ಜೊತೆ ಚೆಲ್ಲಾಟವಾಡುತ್ತಿವೆ. ಕೆಲವು ಬಣ್ಣದ ಕೇಕ್‌ಗಳು ಸಣ್ಣ ಪ್ರಮಾಣದ ಅನಾರೋಗ್ಯ ಉಂಟು ಮಾಡಿದರೆ, ಕೆಲವು ಕೇಕ್‌ಗಳು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಯನ್ನೇ ಹುಟ್ಟಿಸುತ್ತವೆ.

ಆರೋಗ್ಯ, ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ ಅಧಿಕಾರಿಗಳು ಇಂತಹ ಬೇಕರಿಗಳ ಮೇಲೆ ದಿಢೀರ್ ದಾಳಿ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆದರೆ ಈ ತನಕ ಇಂತಹ ಯಾವುದೇ ಕ್ರಮಕ್ಕೆ ಅಧಿಕಾರಿಗಳು ಮುಂದಾಗಿಲ್ಲ. ಕೇಕ್ ತಯಾರಿಸಲು ಮೈದಾ ಹಿಟ್ಟು, ಸಕ್ಕರೆ, ಮೊಟ್ಟೆ, ಹಾಲು, ಬೇಕಿಂಗ್ ಪೌಡರ್, ಸೋಡಾ, ವೆನಿಲ್ಲಾ, ಕೋಕೋ ಪೌಡರ್, ಡ್ರೈ ಫ್ರೂಟ್ಸ್, ಚಾಕೊಲೇಟ್ ಚಿಪ್ಸ್, ಕ್ರೀಮ್ ಸೇರಿದಂತೆ ಕೆಲವು ವಸ್ತುಗಳನ್ನು ಬಳಸಲಾಗುತ್ತದೆ.

ಇದರ ಜೊತೆಗೆ ಕೇಕ್‌ಗೆ ಆಕರ್ಷಕ ಮೆರುಗು ನೀಡಲು ಕೃತಕ ಆಹಾರ ಬಣ್ಣಗಳಾದ ಜೆಲ್, ಪೌಡರ್, ಲಿಕ್ವಿಡ್ ಬಳಸಲಾಗುತ್ತದೆ. ಇವುಗಳಲ್ಲಿ ಕೆಂಪು, ನೀಲಿ, ಹಸಿರು, ಹಳದಿ, ಗುಲಾಬಿ, ಚಿನ್ನದ ಬಣ್ಣಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬಳಕೆ ಮಾಡಲಾಗುತ್ತದೆ. ಆದರೆ ಕೇಕ್ ತಯಾರಿಕೆಗೆ ಕೃತಕ ಬಣ್ಣಗಳನ್ನು ನಿಗದಿತ ಪ್ರಮಾಣದಲ್ಲಿ ಬಳಸಬೇಕು. ಅತೀ ಹೆಚ್ಚಾಗಿ ಬಳಸಿದರೆ ಅದು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅದರಲ್ಲೂ ಅಲೂರ ರೆಡ್ ಮತ್ತು ಸನ್ ಸೆಟ್ ಎಲ್ಲೋ ಬಣ್ಣಗಳಂತೂ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿ. ಇಂತಹ ಅಪಾಯಕಾರಿ ಬಣ್ಣ ಮಿಶ್ರಿತ ಕೇಕ್ ಸೇವಿಸಿದರೆ ಅಲರ್ಜಿ, ಅಸ್ತಮಾ, ಹೈಪರ್ ಆಕ್ಟಿವಿಟಿ, ಜೀರ್ಣಾಂಗದ ಸಮಸ್ಯೆಗಳು ಎದುರಾಗುತ್ತವೆ. ಕೆಲವರಿಗೆ ಇದು ಕ್ಯಾನ್ಸರ್ ರೋಗಕ್ಕೂ ಕಾರಣವಾಗುವ ಸಾಧ್ಯತೆ ಇರುತ್ತದೆ. ಕೇಕ್ ಖರೀದಿ ಮಾಡುವಾಗ ಗ್ರಾಹಕರು ಹಾನಿಕಾರಕ ಬಣ್ಣಗಳನ್ನು ಬಳಸಿ ಕೇಕ್ ತಯಾರಿಕೆ ಬಗ್ಗೆ ಗಮನಹರಿಸಬೇಕು. ಆಕರ್ಷಣೆಗೆ ಮಾರು ಹೋಗಿ ಇಂತಹ ಕೇಕ್ ಖರೀದಿ ಮಾಡಿದರೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆ ಎದುರಾಗುತ್ತದೆ.

ಅನಾರೋಗ್ಯಕ್ಕೆ ಕಾರಣವಾದ ಬಣ್ಣ ಬಣ್ಣದ ಕೇಕ್ ತಯಾರಿಸುವ ಬದಲು ಅರಿಶಿನ, ಬಿಟ್ ರೋಟ್, ಪಾಲಕ್ ಸೇರಿದಂತೆ ನೈಸರ್ಗಿಕ ಬಣ್ಣಗಳಿಂದ ಕೂಡ ಕೇಕ್ ತಯಾರಿಸಬಹುದು. ಆದರೆ ಕಣ್ಣು ಕುಕ್ಕುವಂತಹ ಕೃತಕ ಬಣ್ಣಗಳನ್ನು ಬಳಸಿ ಕೇಕ್ ತಯಾರಿಸಲಾಗುತ್ತದೆ. ಇಂತಹ ಕೇಕ್‌ಗಳನ್ನು ಖರೀದಿಸಲು ಗ್ರಾಹಕರು ಹಿಂದೇಟು ಹಾಕಿದರೆ ಬೇಕರಿ ಮಾಲೀಕರು ಬುದ್ಧಿ ಕಲಿಯುತ್ತಾರೆ. ಇದರಿಂದ ಕೃತಕ ಬಣ್ಣಗಳ ಬಳಕೆ ಬಿಟ್ಟು ನೈಸರ್ಗಿಕ ಬಣ್ಣ ಬಳಸಿ ಕೇಕ್ ತಯಾರಿಸುತ್ತಾರೆ. ಕೇಕ್ ಖರೀದಿಸುವಾಗ ಗ್ರಾಹಕರು ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ.

ಶಾಲೆ ಮಕ್ಕಳಿಗೆ ಪುಸ್ತಕ ಸಾಮಗ್ರಿಗಳು ವಿತರಣೆ...



ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ 16ನೇ ವರ್ಷದ ಸವಿನೆನಪಿನ ಅಂಗವಾಗಿ ಉರಗ ತಜ್ಞ, ಮಾಜಿ ಕಾರ್ಪೋರೇಟರ್ ಸ್ನೇಕ್ ಶ್ಯಾಮ್ ಮೊಗರಹಳ್ಳಿ ಮಂಟಿಯ ಸರ್ಕಾರಿ ಶಾಲೆ ಮಕ್ಕಳಿಗೆ ಪುಸ್ತಕ ಸಾಮಗ್ರಿಗಳು ಹಾಗೂ ಹೊಸ ವರ್ಷದ ಪ್ರಯುಕ್ತ ಸಿಹಿ ವಿತರಿಸಿದರು. ಶಾಲಾ ಶಿಕ್ಷಕರು, ಶಿಕ್ಷಕಿಯರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾಲೇಜು ವಾರ್ಷಿಕೋತ್ಸವ...



ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಕಾಲೇಜಿನ ಕ್ರೀಡಾ ವಿಭಾಗದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಮಾಜಿ ಉಪಮೇಯರ್ ಮಹದೇವಪ್ಪ, ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಪ್ರಾಂಶುಪಾಲ ಶಿವಮ್ಮಲು, ಅಮ್ಮ ರಾಮಚಂದ್ರ, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕ್ಯಾಲೆಂಡರ್ ಬಿಡುಗಡೆ...



ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕರ ಸೇನಾ ಸಮಿತಿಯ 2026ನೇ ನೂತನ ವರ್ಷದ ಕ್ಯಾಲೆಂಡರ್ ಅನ್ನು ಡಿವೈಎಸ್ಪಿ ಗೋಪಾಲಕೃಷ್ಣ ಬಿಡುಗಡೆಗೊಳಿಸಿದರು. ಈ ವೇಳೆ ಸಮಿತಿ ರಾಜ್ಯಾಧ್ಯಕ್ಷ ಕಳಲೆ ಡಿ.ಪ್ರಕಾಶ್‌ನಾಯಕ್, ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯ ಕಡಕೊಳ ಕುಮಾರಸ್ವಾಮಿ, ಬನ್ನೂರು ವಿಜಯ್, ಗೋಣಹಳ್ಳಿ ಶಿವಣ್ಣ, ಮಾರ್ಬಳ್ಳಿ ಸ್ವಾಮಿ, ಹಳ್ಳಿದಿಡ್ಡಿ ರಂಗಪ್ಪ, ಗುತ್ತಿಗೆದಾರ ರಾಜಪ್ಪ ಮತ್ತಿತರರಿದ್ದರು.

ಖಾಸಗಿಯವರಿಗೆ ಎಂಡಿಎ ಕಟ್ಟಡ ನೀಡುವ ನಿರ್ಧಾರಕ್ಕೆ ಸ್ಥಳೀಯರ ಆಕ್ರೋಶ

ಇಟ್ಟಿಗೆಗೂಡು, ನಜರ್‌ಬಾದ್ ನಿವಾಸಿಗಳಿಂದ ಕಟ್ಟಡದ ಮುಂದೆ ಪ್ರತಿಭಟನೆ

ಮೈಸೂರು, ಜ.2(ಜಿಎ)-ಮೈಸೂರು ಮೃಗಾಲಯದ ಮುಖ್ಯ ರಸ್ತೆಯ ಲೋಕರಂಜನ್‌ಮಹಲ್ ರಸ್ತೆಯಲ್ಲಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ಕ್ಕೆ ಸೇರಿದ ಕಟ್ಟಡವನ್ನು ಖಾಸಗಿಯವರಿಗೆ ನೀಡದಂತೆ ಒತ್ತಾಯಿಸಿ ಇಟ್ಟಿಗೆಗೂಡು, ನಜರ್‌ಬಾದ್ ನಿವಾಸಿಗಳು ಕಟ್ಟಡದ ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಸಿದರು.

'ಸರ್ಕಾರಿ ಶಾಲಾ ಜಾಗವನ್ನು ಶಿಕ್ಷಣ ಇಲಾಖೆ ಅಥವಾ ಸರ್ಕಾರಿ ಇಲಾಖೆಗೆ ನೀಡಿ', 'ಎಂಡಿಎ ಅಧಿಕಾರಿಗಳಿಗೆ ಧಿಕ್ಕಾರ ಧಿಕ್ಕಾರ', 'ಖಾಸಗಿ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿರುವ ಎಂಡಿಎ ಅಧಿಕಾರಿಗಳಿಗೆ ಧಿಕ್ಕಾರ', 'ಸರ್ಕಾರಿ ಜಾಗ ಸಾರ್ವಜನಿಕ ಹಿತಕ್ಕೆ ನೀಡಿ, ಖಾಸಗಿ ಲಾಭಕ್ಕೆ ಬೇಡ ಬೇಡ' ಎಂಬ ಪ್ಲೇಕಾರ್ಡ್‌ಗಳನ್ನು ಹಿಡಿದು ಘೋಷಣೆ ಕೂಗಿ ಸ್ಥಳೀಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ಈ ಸ್ಥಳದಲ್ಲಿ ಹಿಂದೆ ಇದ್ದ ಕಟ್ಟಡದಲ್ಲಿ ಸರ್ಕಾರಿ ಶಾಲೆ ಇತ್ತು. ಮಕ್ಕಳ ಕೊರತೆಯಿಂದ ಆ ಶಾಲೆಯನ್ನು ಇನ್ನೊಂದು ಶಾಲೆಯೊಂದಿಗೆ ವಿಲೀನಗೊಳಿಸಿ ಈ ಕಟ್ಟಡ ಅನೇಕ ವರ್ಷಗಳ ಕಾಲ ಹಾಗೆಯೇ ಪಾಳು ಬಿದ್ದಿತ್ತು. ನಂತರ ಮುಡಾ ಈ ಕಟ್ಟಡ ಕೆಡವಿ ನೂತನ ಕಟ್ಟಡ ನಿರ್ಮಿಸಿದೆ. ಇಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭವಾಗುತ್ತದೆ ಎಂದು ಹೇಳಲಾಗಿತ್ತು. ಆದರೆ, ಈಗ ಖಾಸಗಿಯವರಿಗೆ ನೀಡಿದ್ದಾರೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.



ಮೈಸೂರು ಲೋಕರಂಜನ್‌ಮಹಲ್ ರಸ್ತೆಯಲ್ಲಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ಕ್ಕೆ ಸೇರಿದ ಕಟ್ಟಡವನ್ನು ಖಾಸಗಿಯವರಿಗೆ ನೀಡದಂತೆ ಒತ್ತಾಯಿಸಿ ಇಟ್ಟಿಗೆಗೂಡು, ನಜರ್‌ಬಾದ್ ನಿವಾಸಿಗಳು ಕಟ್ಟಡದ ಮುಂಭಾಗ ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಈ ಕಟ್ಟಡವನ್ನು ಖಾಸಗಿಯವರಿಗೆ ನೀಡಲಾಗಿದೆ ಎಂಬ ಸುದ್ದಿ ನೋಡಿ ಅಚ್ಚರಿಯಾಗಿದೆ. ಸರ್ಕಾರಿ ಶಾಲೆ ಇದ್ದ ಜಾಗದಲ್ಲಿ ಹೊಸ ಕಟ್ಟಡ ಬಂದಾಗ ನಾವು ಸ್ವಾಭಾವಿಕವಾಗಿ ಇಲ್ಲಿ ಶೈಕ್ಷಣಿಕ ಹಿನ್ನೆಲೆಯ ಕಚೇರಿ ಅಥವಾ ಕಾಲೇಜು ಬರುತ್ತದೆ ಎಂದು ಭಾವಿಸಿದ್ದೆವು. ಆದರೇ, ಖಾಸಗಿಯವರಿಗೆ ವ್ಯಾಪಾರ ಮಾಡಲು ನೀಡಿದ್ದಾರೆ. ಜಿಲ್ಲಾಧಿಕಾರಿಗಳೇ ಸರ್ಕಾರಿ ಶಾಲೆ ಇದ್ದ ಜಾಗದಲ್ಲಿ ಕಟ್ಟಡ ನಿರ್ಮಿಸಿ ಈ ರೀತಿ ಖಾಸಗಿಯವರಿಗೆ ನೀಡಿರುವುದು ಎಷ್ಟು ಸರಿ? ಬಡಮಕ್ಕಳು ಓದುವ ಶಾಲೆಯ ಜಾಗವನ್ನು ಖಾಸಗಿಯವರಿಗೆ ನೀಡಿರುವುದೇಕೆ? ಎಂಡಿಎಗೆ ಮೈಸೂರಿನಲ್ಲಿ ವಾಣಿಜ್ಯ ಉದ್ದೇಶಕ್ಕೆ ಅನೇಕ ಕಟ್ಟಡ, ಜಾಗಗಳು ಇಲ್ಲವೇ? ಶಾಲೆ ಇದ್ದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವುದು ಎಷ್ಟು ಸರಿ? ಸರ್ಕಾರಿ ಕಚೇರಿಗಳಲ್ಲದೆ ಖಾಸಗಿಯವರ ಸ್ವತ್ತಿನಲ್ಲಿ ಬಾಡಿಗೆ ಕಟ್ಟಿಕೊಂಡು ಕಾರ್ಯನಿರ್ವಹಿಸುತ್ತಿರುವಾಗ ಅಂತಹ ಖಾಸಗಿಯವರಿಗೆ ನೀಡಿರುವುದು ಯಾಕೆ? ಒಮ್ಮೆ ಖಾಸಗಿಯವರಿಗೆ ನೀಡಿದ ಮೇಲೆ ಸರ್ಕಾರಿ ಜಾಗಗಳನ್ನು ಸಂರಕ್ಷಿಸುವುದು ಅನೇಕ ಸಂದರ್ಭಗಳಲ್ಲಿ ಅತ್ಯಂತ ಕಠಿಣ ಕೆಲಸ. ಹೀಗಾಗಿ ಕೂಡಲೇ ಕಟ್ಟಡವನ್ನು ಖಾಸಗಿಯವರಿಗೆ ನೀಡಿರುವುದನ್ನು ರದ್ದುಗೊಳಿಸಬೇಕು. ಸರ್ಕಾರಿ ಕಚೇರಿ ಉದ್ದೇಶಗಳಿಗೆ ಮಾತ್ರ ಬಳಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಪಿ.ಕೋಂಡದ ರಾಮು ಮಾತನಾಡಿ, ಮೈಸೂರು ಅರಮನೆ ಕಟ್ಟುವ ಸಂದರ್ಭದಲ್ಲಿ ಇಲ್ಲಿ ಅನೇಕ ಕಟ್ಟಡ ಕಾರ್ಮಿಕರ ಕುಟುಂಬ ಸೇರಿಕೊಂಡಿತ್ತು. ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಲ್ಲಿ ಶಾಲೆ ಆರಂಭಿಸಲಾಗಿತ್ತು. ಅಂತಹ ಶಾಲೆಯನ್ನು ವಿಲೀನಗೊಳಿಸಿ ಇಂದು ಖಾಸಗಿ ಸಂಸ್ಥೆಗೆ ಕಟ್ಟಡ ನೀಡುತ್ತಿರುವುದು ಅಕ್ಷಮ್ಯ ಎಂದರು.

ಶಾಲೆಯ ಹಳೆ ವಿದ್ಯಾರ್ಥಿ ಅಚ್ಚುತಾ ಮಾತನಾಡಿ, ನಾನು ಶಾಲೆಯ ವಿದ್ಯಾರ್ಥಿಯಾಗಿದ್ದೇನೆ. 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದರು. ಇಲ್ಲಿ ಅನೇಕ ಗಣ್ಯರು ವಿದ್ಯಾಭ್ಯಾಸ ಮಾಡಿ ಇಂದು ಉನ್ನತ ಸ್ಥಾನದಲ್ಲಿ ಇದ್ದಾರೆ. ಈ ಹಿಂದೆ ಶಾಲೆ ವಿಲೀನ ಮಾಡಿದ ಸಂದರ್ಭದಲ್ಲಿ ಶಾಲೆ ಮರು ಸ್ಥಾಪಿಸುತ್ತೇವೆ ಎಂದು ಹೇಳಿ ನಂತರ ಪಾಸ್‌ಪೋರ್ಟ್ ಸೇವಾ ಕೇಂದ್ರ ತೆರೆಯುತ್ತೇವೆ ಎಂದು ಸುಳ್ಳು ಹೇಳಿ ಈಗ ಇಂದು ಖಾಸಗಿ ಅವರಿಗೆ ನೀಡುತ್ತಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ ಸರ್ಕಾರಿ ಶಾಲೆಗಳ ಪರ ಹೋರಾಟ ಮಾಡುವವರು ಇದನ್ನು ತಡೆಯಬೇಕಿದೆ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡ ರಘು ಕೌಟಿಲ್ಯ, ವಾಣೀಶ್‌ಕುಮಾರ್, ಹರೀಶ್, ಶಂಕರ, ಗೋಕುಲ್ ಗೋವರ್ಧನ್, ಅರುಣ್‌ಕುಮಾರ್, ರಾಜೇಶ್, ಪ್ರಶಾಂತ್, ರವಿ, ರವಿಕಿರಣ್, ಕುಮಾರ, ರವಿಕಿರಣ್, ನಾಗಣ್ಣ, ರಾಜಾರಾಂ, ಕುಮಾರ್, ಜೀವನ್, ಮಂಜುನಾಥ್, ರಮೇಶ್, ಶ್ರೀನಿವಾಸ್, ಮಹದೇವಣ್ಣ, ಸತೀಶ್, ಲೋಕೇಶ್, ಮನೋಜ್, ನಿತಿನ್ ಪಾಲ್ಗೊಂಡಿದ್ದರು.

ಉರಿಲಿಂಗ ಪೆದ್ದಿ ಮಠದ ಆಸ್ತಿ ಗೊಂದಲ; ಮಾತುಕತೆ ಮೂಲಕ ಇತ್ಯರ್ಥಕ್ಕೆ ನಿರ್ಧಾರ

ಮೈಸೂರು,ಜ.2(ಎಂಟಿವೈ)-ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿ ಮಠಕ್ಕೆ ಸೇರಿದ ದುದ್ದಗೆರೆಯಲ್ಲಿರುವ 26 ಎಕರೆ ಆಸ್ತಿ ಎಂದೆಂದೂ ಮಠಕ್ಕೆ ಸೇರಿದ ಆಸ್ತಿಯೇ ಆಗಿದ್ದು, ಈಗ ಉದ್ಭವಿಸಿರುವ ಸಮಸ್ಯೆಯನ್ನು ಮಾತುಕತೆ ಮೂಲಕ ಬಗೆಹರಿಸಲು ದಲಿತ ಸಮುದಾಯದ ಮುಖಂಡರು ನಿರ್ಧರಿಸಿರುವುದಾಗಿ ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉರಿಲಿಂಗ ಪೆದ್ದಿ ಮಠಕ್ಕೆ ಸಂಬಂಧಿಸಿದಂತೆ ಕೆಲವು ದಿನಗಳಿಂದ ಭೂ ವಿವಾದ ಸೃಷ್ಟಿಸಿ ಮಠದ ವಿರುದ್ಧ ತಪ್ಪು ಸಂದೇಶ ರವಾನೆಯಾಗುವಂತೆ ಪರ ಮತ್ತು ವಿರೋಧದ ಹೇಳಿಕೆ ನೀಡುತ್ತಿದ್ದಾರೆ. ಇದರಿಂದ ಅಶೋಕಪುರಂ, ಗಾಂಧಿ

ಮಾಜಿ ಮೇಯರ್ ಪುರುಷೋತ್ತಮ್ ಮಾಹಿತಿ

ನಗರ ಸೇರಿದಂತೆ ವಿವಿಧೆಡೆಯಿಂದ ದಲಿತ ಸಮುದಾಯ ಮುಖಂಡರು ಮಠದ ವಿರುದ್ಧ ಸೃಷ್ಟಿಸಿರುವ ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಲು ಒಟ್ಟಾಗಿ ಸೇರಲು ನಿರ್ಧರಿಸಿದ್ದೇವೆ. ಇನ್ನು ಮುಂದೆ ಭೂ ವಿವಾದದ ಕುರಿತು ಮಠದ ವಿರುದ್ಧ ಹಾಗೂ ಪರ ಹೇಳಿಕೆ ನೀಡದಂತೆ ಮನವಿ ಮಾಡಲಾಗಿದೆ ಎಂದರು.

ಉರಿಲಿಂಗಪೆದ್ದಿ ಮಠ ಬಸವಣ್ಣನವರ ಕಾಲದಿಂದಲೂ ಇದೆ. ಅಂದು ಇದ್ದ ಏಕೈಕ ದಲಿತ ಸ್ವಾಮೀಜಿ ಉರಿಲಿಂಗಪೆದ್ದಿ ಮಠದ ಸ್ವಾಮೀಜಿಯಾಗಿದ್ದರು. ಈ ಹಿನ್ನೆಲೆಯಲ್ಲಿ ತನ್ನದೇ ಆದ ಹಿನ್ನೆಲೆ ಹೊಂದಿರುವ ಉರಿಲಿಂಗಪೆದ್ದಿ ಮಠದ ವಿರುದ್ಧ ಮಾತನಾಡುವ ಮೂಲಕ ದಲಿತ ಸಮುದಾಯದಲ್ಲಿ ಒಡಕು ಮೂಡಿಸುವ ಯತ್ನ ಮಾಡಬಾರದು. ಎಲ್ಲರೂ ಕುಳಿತು ಸಮಸ್ಯೆ ಬಗೆಹರಿಸಿಕೊಳ್ಳೋಣ, ಸಮುದಾಯದ ಅಭಿವೃದ್ಧಿಗೆ ಎಲ್ಲರೂ ಗಮನಹರಿಸಬೇಕಾಗಿದೆ. ಮಠಕ್ಕೆ ಸೇರಿದ ದುದ್ದಗೆರೆಯಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ ಇಬ್ಬರು ಸ್ವಾಮೀಜಿಗಳ ನಡುವೆ ನಡೆಯುತ್ತಿರುವ ವಾಕ್ಸಮರ ನೋವುಂಟು ಮಾಡಿದೆ ಎಂದು ಹೇಳಿದರು.



ಪುರುಷೋತ್ತಮ್

ಉರಿಲಿಂಗ ಪೆದ್ದಿ ಮಠದ ಆಸ್ತಿ ಎಂದಿಗೂ ಮಠಕ್ಕೆ ಸೇರಿದ ಆಸ್ತಿಯೇ ಆಗಿದೆ. ಅದನ್ನು ಮಾರಾಟ ಮಾಡಲು ಸಾಧ್ಯವಿಲ್ಲ. ಆದರೆ, ಮಠಾಧೀಶರನ್ನು ಗುರಿಯಾಗಿಸಿಕೊಂಡು ಆರೋಪ ಮಾಡುವುದು ಸರಿಯಲ್ಲ. ಕಳೆದ 27 ವರ್ಷದಿಂದ ಖಾವಿ ತೊಟ್ಟು ಮಠ ಕಟ್ಟುವ ನಿಟ್ಟಿನಲ್ಲಿ ಜ್ಞಾನಪ್ರಕಾಶ ಸ್ವಾಮೀಜಿ ಸೇವೆ ಸಲ್ಲಿಸಿದ್ದಾರೆ. ಈಗ ಅವರ ವಿರುದ್ಧ ಮಾತನಾಡುವವರು ಈ ಹಿಂದೆ ಎಲ್ಲಿ ಹೋಗಿದ್ದರು. ವೈಚಾರಿಕ ನಿಲುವು ಹೊಂದಿರುವ ಜ್ಞಾನಪ್ರಕಾಶ ಸ್ವಾಮೀಜಿ ಅವರನ್ನು ಮಠದ ಸ್ವಾಮೀಜಿ ಎಂದು ದಲಿತ ಸಮುದಾಯ ಒಪ್ಪಿಕೊಂಡಿದೆ. ಬುದ್ಧ, ಚಾರ್ವಾಕರ ಬಗ್ಗೆ ಒಲವು ಹೊಂದಿದ್ದಾರೆ. ಹೀಗಾಗಿ ಈ ಎಲ್ಲ ಮಠಗಳನ್ನು ಬೌದ್ಧ ವಿಹಾರವನ್ನಾಗಿಸುವ ಚಿಂತನೆ ನಡೆದಿದೆ. ಆದರೆ ಇದೇ ವೇಳೆ ಮೈಸೂರಿನಲ್ಲಿನ ಮಠದ ಆಸ್ತಿ ಕುರಿತ ವಿವಾದ ಏರ್ಪಟ್ಟಿರುವುದು ಸರಿಯಲ್ಲ. ಮಠದ ಆಸ್ತಿಯ ರಕ್ಷಣೆಗೆ ಎಲ್ಲರ ಸಹಕಾರ ಅಗತ್ಯ ಎಂದರು. ಗೋಷ್ಠಿಯಲ್ಲಿ ಸಾಹಿತಿ ಸಿದ್ದಸ್ವಾಮಿ, ಕಿರಣ್ ಹಾಗೂ ಇನ್ನಿತರರು ಇದ್ದರು.

ದೇಶ - ವಿದೇಶ

ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ: ತೆಲಂಗಾಣ ಮೂಲದ ವಿದ್ಯಾರ್ಥಿ ಸಾವು



ಬರ್ಲಿನ್: ಜರ್ಮನಿಯ ಬರ್ಲಿನ್‌ನ ವಸತಿ ಸಮುಚ್ಚಯದಲ್ಲಿ ಕಳೆದ ಬುಧವಾರ ತಡರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ ತೆಲಂಗಾಣ ಮೂಲದ ವಿದ್ಯಾರ್ಥಿ ಹೃತಿಕ್ ರೆಡ್ಡಿ (35) ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ವಸತಿ ಸಮುಚ್ಚಯದ ಮೇಲ್ಮಹಡಿಯಲ್ಲಿ ಹೃತಿಕ್ ವಾಸವಿದ್ದರು. ಬೆಂಕಿ ಹೊತ್ತಿಕೊಳ್ಳುತ್ತಿದ್ದಂತೆ ಆವರಿಸಿದ ಹೊಗೆಯಿಂದ ಗಾಬರಿಗೊಂಡ ಇವರು, ಪಾರಾಗಲು ಕೆಳಕ್ಕೆ ಹಾರಿದರು. ಇದರಿಂದ ಅವರ ತಲೆಗೆ ತೀವ್ರವಾಗಿ ಪೆಟ್ಟಾಗಿತ್ತು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ವಾಗ್ದೇವಿ ಎಂಜಿನಿಯರಿಂಗ್ ಕಾಲೇಜಿನಿಂದ 2022ರಲ್ಲಿ ಪದವಿ ಪಡೆದ ಇವರು, 2023ರಲ್ಲಿ ಎಂಎಸ್ ಕೋರ್ಸ್‌ಗೆ ಜರ್ಮನಿಯಲ್ಲಿ ದಾಖಲಾಗಿದ್ದರು. ತೆಲಂಗಾಣದ ಮಲ್ಲಾಪುರದ ಹೃತ್ವಿಕ್ ಈ ಸಂಕ್ರಾಂತಿಗೆ ಭಾರತಕ್ಕೆ ಬರಲು ಸಿದ್ಧತೆ ನಡೆಸಿದ್ದರು ಎಂದೆನ್ನಲಾಗಿದೆ. ಹೃತಿಕ್ ಅವರ ಸಂಬಂಧಿಕರು ಜರ್ಮನಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯನ್ನು ಸಂಪರ್ಕಿಸಿ ಮೃತದೇಹವನ್ನು ಭಾರತಕ್ಕೆ ತರುವ ನಿಟ್ಟಿನಲ್ಲಿ ಅವರ ಕುಟುಂಬದವರು ಚರ್ಚೆ ನಡೆಸಿದ್ದಾರೆ ಎಂದೆನ್ನಲಾಗಿದೆ.

ಸ್ವೀಟ್ ಕೊಡ್ತೀನಿ ಅಂತ ಕರೆಸಿ ಪ್ರಿಯಕರನ ಖಾಸಗಿ ಅಂಗವನ್ನೇ ಕತ್ತರಿಸಿದ ಮಹಿಳೆ!



ಮುಂಬೈ: ಮಹಿಳೆಯೊಬ್ಬಳು ಹೊಸ ವರ್ಷಾಚರಣೆಗೆ ಪ್ರಿಯಕರನನ್ನು ಮನೆಗೆ ಕರೆಸಿ ಆತನ ಖಾಸಗಿ ಅಂಗವನ್ನೇ ಕತ್ತರಿಸಿದ ಘಟನೆ ಮುಂಬೈನಲ್ಲಿ ನಡೆದಿದೆ.

25 ವರ್ಷದ ವಿವಾಹಿತ ಮಹಿಳೆ ತನ್ನ 44 ವರ್ಷದ ಪ್ರಿಯಕರನಿಗೆ ಪತ್ನಿ ಬಿಟ್ಟು ತನ್ನನ್ನು ಮದುವೆಯಾಗುವಂತೆ ಒತ್ತಡ ಹೇರುತ್ತಿದ್ದಳು ಎನ್ನಲಾಗಿದೆ. ಇದು ಅವರ ನಡುವೆ ಆಗಾಗ ಜಗಳಕ್ಕೆ ಕಾರಣವಾಗಿತ್ತು. ಇದೇ ಕಾರಣಕ್ಕೆ ಡಿ.31ರಂದು ಮಹಿಳೆ ತನ್ನ ಪ್ರಿಯಕರನ ಮೇಲೆ ದಾಳಿ ನಡೆಸಿದ್ದಾಳೆ. ಆರೋಪಿ ಮಹಿಳೆ ದಾಳಿಗೊಳಗಾದವನ ಸಹೋದರಿಯ ಅತ್ತಿಗೆ ಎಂದು ತಿಳಿದುಬಂದಿದೆ. ಇಬ್ಬರೂ ಹಲವು ವರ್ಷಗಳಿಂದ ಸಂಬಂಧ ಹೊಂದಿದ್ದರು. ಇತ್ತೀಚೆಗೆ ಪ್ರಿಯಕರ, ಮಹಿಳೆಯಿಂದ ಸ್ವಲ್ಪ ಅಂತರ ಕಾಯ್ದುಕೊಂಡಿದ್ದ ಎನ್ನಲಾಗಿದೆ. ಡಿ.31ರಂದು ಮಹಿಳೆ ಹೊಸ ವರ್ಷಕ್ಕೆ ಸ್ವೀಟ್ ನೀಡುವ ನೆಪದಲ್ಲಿ ಅವನನ್ನು ತನ್ನ ಮನೆಗೆ ಆಹ್ವಾನಿಸಿದ್ದಳು. ಆ ಸಮಯದಲ್ಲಿ, ಮಹಿಳೆ ಮಕ್ಕಳು ಮನೆಯಲ್ಲಿ ಮಲಗಿದ್ದರು. ಆಗ ಅಡುಗೆ ಮನೆಗೆ ಹೋಗಿ ತರಕಾರಿ ಕತ್ತರಿಸುವ ಚಾಕು ತಂದು, ಇದ್ದಕ್ಕಿದ್ದಂತೆ ಬಲಿಪಶುವಿನ ಖಾಸಗಿ ಅಂಗದ ಮೇಲೆ ದಾಳಿ ಮಾಡಿದ್ದಾಳೆ. ಇದೀಗ ಆಕೆ ತಲೆಮರೆಸಿಕೊಂಡಿದ್ದಾಳೆ.

ನ್ಯೂಯಾರ್ಕ್ ಮೇಯರ್ ಆಗಿ ಪ್ರಮಾಣ ವಚನ : ಇತಿಹಾಸ ಬರೆದ ಮಮ್ದಾನಿ



ನ್ಯೂಯಾರ್ಕ್: ಅಮೆರಿಕದ ಎಡಪಂಥೀಯ ಯುವ ನಾಯಕ ಜೋಹ್ರಾನ್ ಮಮ್ದಾನಿ ನ್ಯೂಯಾರ್ಕ್ ಮೇಯರ್ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ಮೂಲಕ ಅಮೆರಿಕದ ನ್ಯೂಯಾರ್ಕ್ ಚುಕ್ಕಾಣಿ ಹಿಡಿದ ಮೊದಲ ಮುಸ್ಲಿಂ ಮೇಯರ್ ಎಂಬ ಇತಿಹಾಸ ಬರೆದಿದ್ದಾರೆ. 34 ವರ್ಷದ ಡೆಮಾಕ್ರಟಿಕ್ ನಾಯಕ ಮಮ್ದಾನಿ ನಾಲ್ಕು ವರ್ಷಗಳ ಅವಧಿಗೆ ನ್ಯೂಯಾರ್ಕ್ ಮೇಯರ್ ಆಗಿ ಮಧ್ಯರಾತ್ರಿ 12 ಗಂಟೆಗೆ ಸಿಟಿ ಹಾಲ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣವಚನ ಸ್ವೀಕರಿಸುವಾಗ ಕುರಾನ್ ಮೇಲೆ ಕೈ ಇಟ್ಟು ಪ್ರಮಾಣ ವಚನ ಸ್ವೀಕರಿಸಿದರು. ಇದು ನಿಜವಾಗಿಯೂ ಜೀವಮಾನದ ಅತೀ ದೊಡ್ಡ ಗೌರವ ಎಂದು ಮಮ್ದಾನಿ ಹೇಳಿದರು. ಸಾಮಾನ್ಯವಾಗಿ ಅದ್ದೂರಿಯಾಗಿ ನಡೆಯುವ ಪ್ರಮಾಣ ವಚನ ಕಾರ್ಯಕ್ರಮದ ಬದಲು ಮಮ್ದಾನಿ ಮಧ್ಯರಾತ್ರಿ ಸಬ್‌ವೇ ನಿಲ್ದಾಣದಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ವಿಶೇಷ.

ಮದುವೆ ಆಗ್ತೀನಿ ಅಂತ ನಂಬಿಸಿ ನರ್ಸಿಂಗ್ ವಿದ್ಯಾರ್ಥಿನಿ ಮೇಲೆ ಸರ್ಕಾರಿ ವೈದ್ಯನಿಂದ ಅತ್ಯಾಚಾರ

ಲಕ್ನೋ: ಸರ್ಕಾರಿ ವೈದ್ಯಕೀಯ ಸಂಸ್ಥೆಯ ಇಂಟರ್ನ್ ವೈದ್ಯರೊಬ್ಬರು, ಮದುವೆಯಾಗುವುದಾಗಿ ಸುಳ್ಳು ಭರವಸೆ ನೀಡಿ ನರ್ಸಿಂಗ್ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ.

ವಿದ್ಯಾರ್ಥಿನಿಯ ಖಾಸಗಿ ಫೋಟೋಗಳನ್ನು ಬಹಿರಂಗ ಪಡಿಸುವುದಾಗಿ ವೈದ್ಯ ಬೆದರಿಕೆ ಹಾಕಿದ ಆರೋಪದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಉಪ ಪೊಲೀಸ್ ಆಯುಕ್ತ ವಿಶ್ವಜೀತ್ ಶ್ರೀವಾಸ್ತವ ಅವರು, ಇಂಟರ್ನ್ ವೈದ್ಯನ ಹಿನ್ನೆಲೆ ಮತ್ತು ವಿಳಾಸಗಳನ್ನು ಪರಿಶೀಲಿಸಲಾಗುತ್ತಿದೆ. ಆರೋಪಿಯನ್ನು ಪತ್ತೆಹಚ್ಚಲು ಪ್ರಯತ್ನಗಳು ನಡೆಯುತ್ತಿವೆ. ನರ್ಸಿಂಗ್ ವಿದ್ಯಾರ್ಥಿನಿಯ ಹೇಳಿಕೆಯನ್ನು ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಲಾಗುವುದು ಎಂದು ತಿಳಿಸಿದ್ದಾರೆ.

ಮದುವೆಯಾಗುವುದಾಗಿ ನಂಬಿಸಿ ಆರೋಪಿಯು ನನ್ನ ಜೊತೆ ಹಲವು ಬಾರಿ ದೈಹಿಕ ಸಂಬಂಧ ಹೊಂದಿದ್ದ ಎಂದು ನರ್ಸಿಂಗ್ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಕಿಯಾಸರ್‌ಬಾಗ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಮದುವೆಯಾಗುವಂತೆ ಒತ್ತಾಯಿಸಿದಾಗ ಆರೋಪಿ ನಿರಾಕರಿಸಿದ್ದಾನೆ. ಅಲ್ಲದೇ, ಆಕೆಯ ಖಾಸಗಿ ಫೋಟೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಹಿಂಸಾಚಾರಕ್ಕೆ ತಿರುಗಿದ ಖಮೇನಿ ವಿರುದ್ಧದ ಪ್ರತಿಭಟನೆ: 7 ಮಂದಿ ಸಾವು



ಟೆಹರಾನ್: ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ವಿರುದ್ಧ ವಾರದಿಂದ ನಡೆಯುತ್ತಿದ್ದ ನಡೆದ ಪ್ರತಿಭಟನೆಗಳು ಹೊಸ ವರ್ಷದ ಆರಂಭದ ವೇಳೆ ಹಿಂಸಾತ್ಮಕ ತಿರುವು ಪಡೆದುಕೊಂಡಿವೆ. ಹಿಂಸಾಚಾರದಲ್ಲಿ ಕನಿಷ್ಠ ಏಳು ಜನರು ಸಾವನ್ನಪ್ಪಿದ್ದಾರೆ ಎಂದು ಇರಾನಿನ ಮಾಧ್ಯಮ ಮತ್ತು ಹಕ್ಕುಗಳ ಗುಂಪುಗಳನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ. ಹೊಸ ವರ್ಷದ ಆರಂಭಕ್ಕೆ ಪ್ರತಿಭಟನೆಗಳು ದೇಶದ ಗ್ರಾಮೀಣ ಭಾಗಗಳಿಗೆ ವ್ಯಾಪಿಸಿವೆ, ಭದ್ರತಾ ಪಡೆಗಳು ಮತ್ತು ಪ್ರತಿಭಟನಾಕಾರರು ಇರಾನ್‌ನಾದ್ಯಂತ ಬೀದಿಗಳಲ್ಲಿ ಘರ್ಷಣೆ ನಡೆಸಿರುವ ಬಗ್ಗೆ ವರದಿಯಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ಸಮಯದಲ್ಲಿ ಪದಚ್ಯುತಗೊಂಡ ಅಮೆರಿಕದ ಮಿತ್ರ ನಾಯಕ ದಿವಂಗತ ಶಾ ಮೊಹಮ್ಮದ್ ರೆಜಾ ಪಹ್ಲವಿಯವರ ಪುತ್ರ ರೆಜಾ ಪಹ್ಲವಿ ಅವರನ್ನು ಬೆಂಬಲಿಸಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಇರಾನ್ ರಾಜಧಾನಿ ಟೆಹ್ರಾನ್‌ನಲ್ಲಿ ಬೀದಿಗಿಳಿದು ಸರ್ವಾಧಿಕಾರಿಗೆ ಸಾವು' ಎಂದು ಘೋಷಣೆಗಳನ್ನು ಕೂಗಿದ್ದಾರೆ.

ಮೈಸೂರು ಮಿತ್ರ ಶನಿವಾರ 3 ಜನವರಿ 2026

ಸಿದ್ದಾಪುರದಲ್ಲಿ ನೀರಿನ ಸಮಸ್ಯೆ

ಖಾಲಿ ಕೊಡಗಳೊಂದಿಗೆ ನಿವಾಸಿಗಳ ಪ್ರತಿಭಟನೆ



ನೀರಿನ ಸಮಸ್ಯೆ ವಿರೋಧಿಸಿ ನೇತಾಜಿ ಬಡಾವಣೆ ನಿವಾಸಿಗಳು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು.

ಸಿದ್ದಾಪುರ, ಜ.2–ಗುಹ್ಯ ವಾರ್ಡ್‌ನ ನೇತಾಜಿ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕೂಡಲೇ ಬಗೆಹರಿಸಬೇಕೆಂದು ಒತ್ತಾಯಿಸಿ ಗ್ರಾಮದ ನಿವಾಸಿಗಳು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು. 50ಕ್ಕೂ ಹೆಚ್ಚು ಕುಟುಂಬಗಳು ಇಲ್ಲಿ ವಾಸಿಸುತ್ತಿದ್ದು, ಕುಡಿಯುವ ನೀರು ಸೇರಿದಂತೆ ಹಲವು ಮೂಲ ಸೌಲಭ್ಯಗಳಿಂದ ವಂಚಿತರಾಗಿದ್ದು, ಈ ಭಾಗದ ಜನ ಪ್ರತಿನಿಧಿಗಳು ಸಮಸ್ಯೆ ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು.

ಕಾರ್ಮಿಕ ಮುಖಂಡ ಎನ್.ಡಿ ಕುಟ್ಟಪ್ಪ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭಾರೀ ಅವ್ಯವಹಾರ ನಡೆದಿದ್ದು ನಿವೇಶನ ರಹಿತರಿಗೆ ನಿವೇಶನ, ಮನೆ ನಿರ್ಮಾಣ, ವಿಚಾರಗಳು ಪಂಚಾಯಿತಿ ಕಡತಗಳಿಗೆ ಮಾತ್ರ ಸೀಮಿತವಾಗಿದೆ. ಕಸ ವಿಲೇವಾರಿಯಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿದೆ ಎಂದು ಆರೋಪಿಸಿದ ಅವರು, ಸದಸ್ಯರು ಭೂ ಪರಿವರ್ತನೆ ಸೇರಿದಂತೆ ಪತ್ರ ವ್ಯವಹಾರ ದಳ್ಳಾಳಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಗ್ರಾಮ ಪಂಚಾಯಿತಿಯೇ ಕೊಳವೆ ಬಾವಿಯನ್ನು ಕೊರೆದಿದ್ದು, ಅಳವಡಿಸಲು ತಂದ ಮೋಟರ್ ಪೈಪ್‌ಗಳನ್ನು ರಾತ್ರೋರಾತ್ರಿ ನೀರು ಘಂಟಿಯೇ ಹೊತ್ತೊಯ್ದಿರುವುದಾಗಿ ಕಾರ್ಮಿಕ ಮುಖಂಡ ರಮೇಶ್ ಆರೋಪಿಸಿದರು. ಪ್ರಭಾರ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪಿಡಿಓ ಹಾಲುಗುಂದ ಪಂಚಾಯಿತಿಯಲ್ಲಿ ಕರ್ತವ್ಯಕ್ಕೆ ತೆರಳಿದ್ದು, ಖುದ್ದು ಮನವಿ ಸ್ವೀಕಾರಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದ ಪ್ರಭಾರ ಅಭಿವೃದ್ಧಿ ಅಧಿಕಾರಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಕೊಳವೆ ಬಾವಿಗೆ ಅಳವಡಿಸಲು ತಂದ ನೀರಿನ ಮೋಟರ್‌ನ್ನು ತೆಗೆದುಕೊಂಡು ಹೋಗಿರುವುದನ್ನು ಪ್ರಸ್ತಾಪಿಸಿದಾಗ, ಕಳ್ಳತನವಾಗಬಹುದೆಂದು ತೆಗೆದು ಕೊಂಡು ಹೋಗಿರುವುದಾಗಿ ಪಿಡಿಓ ಸಮಜಾಯಿಷಿ ನೀಡಿದರು. ಇದರಿಂದ ಆಕ್ರೋಶಗೊಂಡ ಪ್ರತಿಭಟನೆಕಾರರು ಪಿಡಿಓರನ್ನು ತರಾಟೆಗೆ ತೆಗೆದುಕೊಂಡರು. ಮನವಿ ಸ್ವೀಕರಿಸಿದ ಪಿಡಿಓ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸಿ 15 ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಮೇರೆಗೆ ಹೋರಾಟವನ್ನು ಕೈಬಿಡಲಾಯಿತು. ಬಡಾವಣೆ ನಿವಾಸಿಗಳಾದ ರಾಜನ್, ಪರಶುರಾಮ್ ರೀಟ, ಭಾಗ್ಯ, ಮಂಜುನಾಥ್, ಉದಯ ಅನಿಲ್ ಹಾಗೂ ಸ್ಥಳೀಯರಿದ್ದರು

ವಿಜೃಂಭಣೆಯಿಂದ ನಡೆದ ಅಯ್ಯಪ್ಪ ಸ್ವಾಮಿ ಉತ್ಸವ



ಶ್ರೀ ಅಯ್ಯಪ್ಪ ಸ್ವಾಮಿ ದೇವರ ವಾರ್ಷಿಕ ಉತ್ಸವದಲ್ಲಿ ಭಕ್ತಸ್ತೋಮವೇ ನೆರೆದಿತ್ತು.

ವಿರಾಜಪೇಟೆ, ಜ.2–ನಗರದ ಮಲೆತಿರಿಕೆ ಬೆಟ್ಟದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವರ ವಾರ್ಷಿಕ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ವರ್ಷದ ಮೊದಲನೇ ದಿನ ಪ್ರಾತಃಕಾಲ 5.30 ಗಂಟೆಗೆ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಗಣಪತಿ ಹೋಮ, ಶ್ರೀ ಲಕ್ಷ್ಮೀ ಮತ್ತು ಸರಸ್ವತಿ ಪೂಜೆ, ಅಯ್ಯಪ್ಪ ಸ್ವಾಮಿಗೆ ಅಭಿಷೇಕ ಅಲಂಕಾರ ಪೂಜೆ ಬಳಿಕ ಮಾಲೆ ಧರಿಸಿದ ಸ್ವಾಮಿಗಳಿಂದ ಲಕ್ಷಾರ್ಚನೆ, ಭಜನೆ, ದೇವರಿಗೆ ಮಹಾ ಪೂಜೆ ಪ್ರಸಾದ ವಿನಿಯೋಗದ ಬಳಿಕ ಉತ್ಸವ ಸಮಿತಿ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಿಂದಲೂ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು.

ಡಿ.26 ರಂದು ದೇವಸ್ಥಾನ ಕೇತ್ರ ಪಾಲಕ ಗುಳಿಗನ ಪೂಜೆಯೊಂದಿಗೆ ಉತ್ಸವಕ್ಕೆ ಚಾಲನೆ ನೀಡಲಾಗಿತ್ತು. ಮಲೆತಿರಿಕೆ ಬೆಟ್ಟದ ವರದ ವಿನಾಯಕ ಭಕ್ತಮಂಡಳಿಯಿಂದ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಮಂಡಲ ಪೂಜೆ ನಡೆಸಲಾಯಿತು. ಶ್ರೀ ಅಯ್ಯಪ್ಪ ಸೇವಾ ಸಮಿತಿ ಹಾಗೂ ಮಲೆ ತಿರಿಕೆ ಬೆಟ್ಟದ ಶ್ರೀ ಅಯ್ಯಪ್ಪ ಸ್ವಾಮಿ ಉತ್ಸವ ಸಮಿತಿಯ ಪದಾಧಿಕಾರಿಗಳು ಇದ್ದರು. ಜ. 14ರ ಸಂಜೆ 6 ಗಂಟೆಗೆ 'ಮಕರ ಜ್ಯೋತಿ ಪೂಜೆ' ನಡೆಯಲಿದೆ ಎಂದು ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ತಿಳಿಸಿದೆ.

ಇಂದು ಸತ್ಯನಾರಾಯಣ ಪೂಜೆ

ಮಡಿಕೇರಿ: ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಜ. 3ರ ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ ದೇವಾಲಯದ ಇಓ ಚಂದ್ರಶೇಖರ್ ತಿಳಿಸಿದ್ದಾರೆ.

ಅಬುಟ್ಟಿ ನಿಧನ



ನಾಪೋಕ್ಲು, ಜ.2–ಮೂರ್ನಾಡು ಪಟ್ಟಣದ ನಿವಾಸಿ ವರ್ತಕ ಅಬುಟ್ಟಿ (55) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ ಹಾಗೂ ನಾಲ್ವರು ಪುತ್ರಿಯರು ಸೇರಿದಂತೆ ಬಂಧು–ಬಾಂಧವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಮೂರ್ನಾಡು ಜುಮಾ ಮಸೀದಿಯ ಖಬರ್‌ಸ್ಥಾನದಲ್ಲಿ ನೆರವೇರಿತು.

ಭರತ್



ನಾಪೋಕ್ಲು: ಮೂರ್ನಾಡು ಕೋಡಂಬೂರು ನಿವಾಸಿ ಒಕ್ಕಲಿಗರ ರಮೇಶ್ ಪುತ್ರ ಭರತ್ (ಮಧು36) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಮೃತರು ತಂದೆ ತಾಯಿ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಪಟ್ಟಣದ ಕೋಡಂಬೂರು ಹಿಂದೂ ರುದ್ರ ಭೂಮಿಯಲ್ಲಿ ನಡೆಯಿತು.

ಯುವ ಪೀಳಿಗೆ ದುಶ್ಚಟಗಳಿಗೆ ದಾಸರಾಗದಂತೆ ಅರಿವು ಮೂಡಿಸುವುದು ಅಗತ್ಯ: ಡಾ.ಮಂತರ್‌ಗೌಡ



ಸೈಕ್ಲಾಥಾನ್ ಜಾಥಾಗೆ ಶಾಸಕ ಡಾ.ಮಂತರ್‌ಗೌಡ ಚಾಲನೆ ನೀಡಿದರು.

ಕುಶಾಲನಗರ, ಜ.2–ಯುವ ಪೀಳಿಗೆ ದುಶ್ಚಟಗಳಿಗೆ ದಾಸರಾಗದಂತೆ ಅರಿವು, ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕಿದೆ ಎಂದು ಶಾಸಕ ಡಾ.ಮಂತರ್ ಗೌಡ ತಿಳಿಸಿದ್ದಾರೆ.

ಕುಶಾಲನಗರದ ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಟ್ರಸ್ಟ್ ಹಾಗೂ ಆರ್ಯವೈಶ್ಯ ಮಂಡಳಿಯಿಂದ ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಬ್ರಹ್ಮ ಕಲಶೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ವಾಕಥಾನ್, ಸೈಕ್ಲಾಥಾನ್‌ಗೆ ಚಾಲನೆ ನೀಡಿ, ಪೋಷಕರು ತಮ್ಮ ಮಕ್ಕಳ ಬಗ್ಗೆ ಸದಾ ನಿಗಾವಹಿಸಬೇಕಿದೆ. ಯುವ ಪೀಳಿಗೆ ಮಾದಕ ವ್ಯಸನಕ್ಕೆ ತುತ್ತಾಗಿ ಜೀವನ ಹಾಳುಮಾಡಿಕೊಳ್ಳದಂತಿರಲು. ಇವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕೂಡ ಹೆಚ್ಚಿನ ಜವಾಬ್ದಾರಿ ವಹಿಸಬೇಕಿದೆ ಎಂದರು. ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿದರು.

ರೋಟರಿ, ಲಯನ್ಸ್, ಜೆಸಿಐ, ಪತ್ರಕರ್ತರ ಸಂಘ, ಪೊಲೀಸ್ ಇಲಾಖೆ, ಸ್ಕೌಟ್ಸ್ ಅಂಡ್ ಗೈಡ್ಸ್, ಸ್ಟೂಡೆಂಟ್ ಪೊಲೀಸ್ ಕೆಡೆಟ್ಸ್, ಕೊಡಗು ಅಭಿವೃದ್ಧಿ ಸಮಿತಿ, ನಿವೃತ್ತ ಸೈನಿಕರ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಆರ್ಯವೈಶ್ಯ ಮಂಡಳಿ ಅಂಗಸಂಸ್ಥೆಗಳು ಸೇರಿದಂತೆ ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು. ಸರಕಾರಿ ಪಾಲಿಟೆಕ್ನಿಕ್ ಬಳಿಯಿಂದ ಆರಂಭವಾದ ವಾಕಥಾನ್, ಸೈಕ್ಲಥಾನ್‌ನಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮ, ವ್ಯಸನ ಮುಕ್ತ ಸಮಾಜ ನಿರ್ಮಿಸುವ ಘೋಷಣೆಗಳುಳ್ಳ ಜಾಗೃತಿ ಫಲಕಗಳನ್ನು ಹಿಡಿದು ಸಾಗಿದರು.

ಕೊಡಗು ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆ, ಬೋಧಕ ಆಸ್ಪತ್ರೆ, ವಾಸವಿ ಯುವಜನ ಚಾರಿಟೆಬಲ್ ಟ್ರಸ್ಟ್ ಮತ್ತು ವಾಸವಿ ಯುವಜನ ಸಂಘದ ಸಹಯೋಗದೊಂದಿಗೆ ಕನ್ನಿಕಾ ಕನ್ವೆನ್ಷನ್ ಸೆಂಟರ್‌ನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರ ನಡೆಯಿತು. ಮಾಜಿ ಶಾಸಕ ಅಪ್ಪಚ್ಚು ರಂಜನ್ ಶಿಬಿರವನ್ನು ಉದ್ಘಾಟಿಸಿದರು. ಆರೋಗ್ಯವೇ ನಿಜವಾದ ಸಂಪತ್ತು. ಪ್ರತಿಯೊಬ್ಬರೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಕಾಳಜಿ ವಹಿಸಬೇಕಿದೆ. ಜಿಲ್ಲೆಯ ಕೊಯಿಮ್ಸ್ ಮೂಲಕ ಉತ್ತಮ ಸೇವೆ ಲಭಿಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಟ್ರಸ್ಟ್ ಮತ್ತು ಆರ್ಯ ವೈಶ್ಯ ಮಂಡಳಿ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಮತ್ತು ಮಂಡಳಿ ಪ್ರಮುಖರಾದ ಕೆ.ಪ್ರವೀಣ್, ಪಿ.ಎಸ್.ಪ್ರಶಾಂತ್, ಬಿ.ಎಲ್. ಅಶೋಕ್ ಕುಮಾರ್, ಬಿ.ಆರ್.ನಟರಾಜ್, ಕೆ.ಜೆ.ಸತೀಶ್, ಎ.ಎಸ್.ಕುಮಾರ್, ಬಿ.ಎನ್.ಅಂಜನ್, ಅಮೃತ್ ರಾಜ್, ವೈಶಾಖ್ ಮತ್ತಿತರರು ಭಾಗವಹಿಸಿದ್ದರು.

ಇಂದು ವಿವಿದೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜ.2– ವಿದ್ಯುತ್ ಮಾರ್ಗದ ಕಾಮಗಾರಿಯನ್ನು ಜ.3 ರಂದು ಬೆಳಗ್ಗೆ 9 ರಿಂದ ಸಂಜೆ 5ಗಂಟೆಯವರೆಗೆ ನಡೆಸಬೇಕಾಗಿರುವುದರಿಂದ ಬಲಮುರಿ, ಪಾರಾಣೆ, ಬಾವಲಿ, ಕೈಕಾಡು, ಕಿರಂದಾಡು, ಎಡಪಾಲ, ಕಡಂಗ, ಕರಡ, ಚೇಯ್ಯಂಡಾಣೆ, ಚೇಲವಾರ, ಮರಂದೋಡ, ಕೋಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಎಂದು ಚೆಸ್ಕಾಂ ಕಾರ್ಯಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆ ತಿಳಿಸಿದೆ.

ರಾಜ್ಯ ಕ್ರಿಕೆಟ್ ತಂಡಕ್ಕೆ ಕೊಡಗಿನ ಬಾಲಕ ಆಯ್ಕೆ



ಕೆ.ಎಂ.ಆದಿತ್ಯ

ಮಡಿಕೇರಿ, ಜ.2–ನಗರದ ಕೊಡಗು ವಿದ್ಯಾಲಯದ 8ನೇ ತರಗತಿ ವಿದ್ಯಾರ್ಥಿ ಕೆ.ಎಂ.ಆದಿತ್ಯ ಕೆಎಸ್‌ಸಿಎ ವತಿಯಿಂದ ಮಂಗಳೂರು ವಿಭಾಗದ ಅಂಡರ್–14 ವಲಯ ಮಟ್ಟದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಕೆಎಸ್‌ಸಿಎ ಲೀಗ್ ಪಂದ್ಯಗಳಲ್ಲಿ ಉತ್ತಮ ಆಟ ಪ್ರದರ್ಶಿಸಿ ಅರ್ಧ ಶತಕ ಬಾರಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕೆಎಸ್‌ಸಿಎ ಅಂತರ್ ಜಿಲ್ಲಾ ಪಂದ್ಯಗಳಲ್ಲಿಯೂ ಆದಿತ್ಯ ಅತ್ಯುತ್ತಮ ಪ್ರದರ್ಶನ ನೀಡಿದ್ದಕ್ಕಾಗಿ ಅವರನ್ನು ಮಂಗಳೂರು ವಲಯ ಪ್ರತಿನಿಧಿಯಾಗಿ ಆಯ್ಕೆ ಮಾಡಲಾಗಿದೆ. ಜ.3ರಿಂದ 15ರವರೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಕೆಎಸ್‌ಸಿಎ ಅಂಡರ್–14 ಅಂತರ್ ವಲಯ (ರಾಜ್ಯ ಮಟ್ಟದ) ಕ್ರಿಕೆಟ್ ಪಂದ್ಯದಲ್ಲಿ ಮಂಗಳೂರು ವಲಯ ತಂಡವನ್ನು ಪ್ರತಿನಿಧಿಸಲಿರುವ ಆದಿತ್ಯ ಗಾಳಿಬೀಡು ನಿವಾಸಿ. ಪ್ರಸ್ತುತ ಜಿಲ್ಲಾಧಿಕಾರಿ ಕಚೇರಿಯಲ್ಲಿ ಶಿರಸ್ತೇದಾರ್ ಆಗಿರುವ ಕರಕರನ ಮಧುಕರ ಮತ್ತು ಸಬಿತ ದಂಪತಿ ಪುತ್ರನಾಗಿದ್ದಾನೆ.

ಚೆಸ್‌ನಿಂದ ಮಾನಸಿಕ ಏಕಾಗ್ರತೆ ವೃದ್ಧಿ

ಸುಂಟಿಕೊಪ್ಪ, ಜ.2– ಇಲ್ಲಿನ ಕೂರ್ಗ್ ಚೆಸ್ ಕ್ಲಬ್ ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿಯನ್ನು ಆಯೋಜಿಸಿತ್ತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ಆರ್. ಸುನಿಲ್ ಕುಮಾರ್ ಚೆಸ್ ಪಂದ್ಯಾವಳಿ ಉದ್ಘಾಟಿಸಿ, ಚೆಸ್‌ನಂತಹ ಆಟದಲ್ಲಿ ಪಾಲ್ಗೊಳ್ಳುವುದರಿಂದ ಕ್ರೀಡಾಪಟುಗಳಲ್ಲಿ ಮಾನಸಿಕ ಏಕಾಗ್ರತೆ ಹಾಗೂ ಚಿಂತನಾಶೀಲತೆ ಹೆಚ್ಚಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚದುರಂಗ ಕ್ರೀಡೆಗೆ ವಯೋಮಾನದ ಮಿತಿ ಇಲ್ಲ, ಹಿರಿಯರು ಕಿರಿಯರು ಎನ್ನದೆ ಕ್ರೀಡೆಯಲ್ಲಿ ಭಾಗವಹಿಸಬಹುದಾಗಿದೆ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸಧೃಡಗೊಳ್ಳಲು ಈ ಕ್ರೀಡೆ ಸಹಕಾರಿಯಾಗುವುದೆಂದು ಹೇಳಿದರು.

7ರಿಂದ 14 ವರ್ಷ ಪ್ರಾಯದ ಮಕ್ಕಳ ವಿಭಾಗದಲ್ಲಿ 42 ಮಂದಿ ಪಾಲ್ಗೊಂಡಿದ್ದು, ರೋಶನ್ ಆರ್.ನಾಯಕ್ ಪ್ರಥಮ, ಭೂಷಣ್‌ಎಂ.ಆರ್. ದ್ವಿತೀಯ, ಮಿಲಿದ್ ನಾರಾಯಣ ತೃತೀಯ ಹಾಗೂ ಐವರು ಸ್ಪರ್ಧೆಗಳಿಗೆ ಆಕರ್ಷಕ ಟ್ರೋಫಿಗಳನ್ನು ನೀಡಲಾಯಿತು. 15 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ 18 ಸ್ಪರ್ಧಿಗಳು ಪಾಲ್ಗೊಂಡಿದ್ದು, ಪಿ.ಶ್ರೀನಿವಾಸ್ ಪ್ರಥಮ, ರಂಜಿತ್ ಗುರುರಾಜ್ ದ್ವಿತೀಯ, ಎಸ್.ಅಣ್ಣಯ್ಯ ತೃತೀಯ ಬಹುಮಾನ ಪಡೆದರು. ಸಮಾಧಾನಕರವಾಗಿ ಐವರು ಸ್ಪರ್ಧಿಗಳಿಗೆ ಆಕರ್ಷಕ ಟ್ರೋಫಿಯನ್ನು ನೀಡಲಾಯಿತು.

ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ವಿಫಲ ಆರೋಪ

ಚಾ.ನಗರದಲ್ಲಿ ಕರ್ನಾಟಕ ಸೇನಾಪಡೆ ಪ್ರತಿಭಟನೆ



ಚಾ.ನಗರದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಜ.2– ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿ ನಗರದಲ್ಲಿ ಕರ್ನಾಟಕ ಸೇನಾಪಡೆ ಸಂಘದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಡ್ರಗ್ಸ್ ಮಾರಾಟಕ್ಕೆ ಸರ್ಕಾರ ಕಡಿವಾಣ ಹಾಕಲು ಸರ್ಕಾರ ವಿಫಲವಾಗಿದೆ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸೇನಾಪಡೆ ಅಧ್ಯಕ್ಷ ಚಾರಂಶ್ರೀನಿವಾಸಗೌಡ ಮಾತನಾಡಿ, ರಾಜ್ಯದಲ್ಲಿ ಡ್ರಗ್ಸ್ ಮಾಫಿಯಾ ಅವ್ಯಾಹತವಾಗಿ ನಡೆಯುತ್ತಿದೆ. ಆದರೂ ರಾಜ್ಯ ಸರ್ಕಾರ ಅದನ್ನು ತಡೆಯುವ ನಿಟ್ಟಿನಲ್ಲಿ ಗಂಭೀರವಾಗಿ ಪರಿಗಣಿಸಿಲ್ಲ. ಹೊಸ ವರ್ಷಾಚರಣೆ ವೇಳೆ ಯುವಕ–ಯುವತಿಯರು ಡ್ರಗ್ಸ್ ಸೇವನೆಗೊಳಗಾಗಿ ತಾವು ಯಾರೆಂಬುದನ್ನೇ ಮರೆತಿದ್ದರು. ಅಷ್ಟರ ಮಟ್ಟಿಗೆ ಡ್ರಗ್ಸ್ ಅವರ ಮೇಲೆ ಪರಿಣಾಮ ಬೀರಿತ್ತು. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಡ್ರಗ್ಸ್ ತಯಾರಿಕಾ ಘಟಕಗಳು ಪತ್ತೆಯಾಗಿರುವುದು ಡ್ರಗ್ಸ್ ಮಾಫಿಯಾ ದಂಧೆಗೆ ಪುಷ್ಠಿ ನೀಡಿದೆ. ಕೂಡಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ವಿದ್ಯಾರ್ಥಿಗಳು ಹಾಗೂ ಯುವಜನರ ಬದುಕಿಗೆ ಮರಣ ಶಾಸನವಾದ ಮಾರಕ ಡ್ರಗ್ಸ್ ಮಾರಾಟಕ್ಕೆ ಕಡಿವಾಣ ಹಾಕಬೇಕು. ಆ ಮೂಲಕ ಯುವಕರ ಬದುಕನ್ನು ಹಸನುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ನಿಜದನಿ ಗೋವಿಂದರಾಜು, ಪಣ್ಯದಹುಂಡಿ ರಾಜು, ಲಿಂಗರಾಜು, ತಾಂಡವಮೂರ್ತಿ, ರವಿಚಂದ್ರ ಪ್ರಸಾದ್, ಎಸ್‌ಪಿಬಿ ಬಳಗದ ಶಿವಣ್ಣ, ಡ್ಯಾನ್ಸ್ ಬಸವರಾಜು, ರಾಜಣ್ಣ, ಮುತ್ತುರಾಜು, ಸುರೇಶ್‌ಗೌಡ, ರಾಜು, ಹೊನ್ನಹಳ್ಳಿ ನಾಗಪ್ಪ, ಹೆಗ್ಗೊಠಾರ ಶಿವಸ್ವಾಮಿ, ಲೋಕೇಶ್, ನಾಗೇಂದ್ರ, ನಾಗರಾಜು ಇತರರಿದ್ದರು.

ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಪೂರಕ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯ



ಪ್ರತಿಭಾ ಕಾರಂಜಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಜ.2– ಜಿಲ್ಲೆಯಲ್ಲಿ ಮಕ್ಕಳ ಶಿಕ್ಷಣಕ್ಕೆ ಯಾವುದೇ ಕೊರತೆಯಾಗದಂತೆ ಎಲ್ಲಾ ಸೌಕರ್ಯ ಒದಗಿಸಲಾಗಿದೆ. ಮಕ್ಕಳಲ್ಲಿರುವ ಸುಪ್ತ ಪ್ರತಿಭೆ ಅನಾವರಣಗೊಳಿಸಲು ಪ್ರತಿಭಾ ಕಾರಂಜಿ ಪೂರಕ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಸಂತ ಜೋಸೆಫರ ಶಾಲೆಯಲ್ಲಿ ಜಿಲ್ಲಾಡಳಿತ ಮತ್ತು ಜಿಪಂ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಶಾಲಾ ಶಿಕ್ಷಣ ಇಲಾಖೆಯಿಂದ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಭಾ ಕಾರಂಜಿ ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪ್ರತಿಭೆಗಳನ್ನು ಹೊರತರುವ, ಅವರ ವ್ಯಕ್ತಿತ್ವ ವಿಕಸನಕ್ಕೆ ಸಹಾಯ ಮಾಡುವ ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯ ಒಂದು ವಿನೂತನ ಮತ್ತು ವಿಸ್ತೃತ ಕಾರ್ಯಕ್ರಮವಾಗಿದ್ದು, ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕವನ ವಾಚನ, ಗಾಯನ, ಚಿತ್ರಕಲೆ, ಪ್ರಬಂಧ, ಚರ್ಚೆ ಮುಂತಾದ ವಿವಿಧ ಸ್ಪರ್ಧೆಗಳನ್ನು ನಡೆಸುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ, ಅವರಿಗೆ ಒಂದು ಸಾಮಾನ್ಯ ವೇದಿಕೆ ಒದಗಿಸಿ, ಶಿಕ್ಷಣದ ಮನರಂಜನೆಯನ್ನು ಸಂಯೋಜಿಸುತ್ತದೆ. ವಿದ್ಯಾರ್ಥಿಗಳಲ್ಲಿರುವ ಕಲಾಭಿರುಚಿಯ ಸಾಮರ್ಥ್ಯವನ್ನು ಸಾಬೀತು ಮಾಡಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು.

> ಮಕ್ಕಳಲ್ಲಿರುವ ಸೂಪ್ತ ಕಲೆ ಗುರುತಿಸಿ ಪ್ರೋತ್ಸಾಹಿಸಲು ಪ್ರತಿಭಾ ಕಾರಂಜಿ ಸಹಕಾರಿಯಾಗಿದೆ. ಅತ್ಯಂತ ಪ್ರತಿಭಾವಂತ ಶಿಕ್ಷಕರು ಇದ್ದಾರೆ. ಉತ್ತಮ ರೀತಿ ಭೋದನೆ ಮಾಡುತ್ತಿದ್ದಾರೆ. ಶಿಕ್ಷಣ ಇಲಾಖೆ ಗುಣಮಟ್ಟ ಹೆಚ್ಚಿಸಿ ಮಕ್ಕಳಲ್ಲಿ ಬದುಕುವ ಕಲೆ ಕಲಿಸೋಣ.
>
> – ಚಂದ್ರ ಪಾಟೀಲ್, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ.

ಬಿಇಓ ಹನುಮಶೆಟ್ಟಿ ಸ್ವಾಗತ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಬಿಆರ್‌ಸಿ ರಾಜೀವ್, ಬಿಸಿಯೂಟ ಸಮನ್ವಯಾಧಿಕಾರಿ ಶ್ರೀನಿವಾಸ್, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಶಂಕರ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಸುಧಾ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಕಾರ್ಯದರ್ಶಿ ಭರತ್ ಭೂಷಣ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಕಿರಣ್ ರಾಜ್, ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಎಸ್‌ಸಿ ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಕೆಂಪರಾಜು, ಬಡ್ತಿ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಮೂರ್ತಿ, ನಿರ್ದೇಶಕ ರಾಜು, ಸಿಆರ್‌ಪಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೆಸ್ತೂರಿನಲ್ಲಿ ಅರ್ಥಪೂರ್ಣ ಕಲಿಕಾ ಹಬ್ಬ



ಕೆಸ್ತೂರಿನಲ್ಲಿ ಕಲಿಕಾ ಹಬ್ಬ ಕಾರ್ಯಕ್ರಮ ನಡೆಯಿತು.

ಯಳಂದೂರು, ಜ.2– ತಾಲೂಕಿನ ಕೆಸ್ತೂರು ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕೆಸ್ತೂರು ಕ್ಲಸ್ಟರ್ ವತಿಯಿಂದ ಕಲಿಕಾ ಹಬ್ಬ ಎಂಬ ಅರ್ಥಪೂರ್ಣ ಕಾರ್ಯಕ್ರಮ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಮರಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಕಲೆಯನ್ನು ಹೊರತೆಗೆದು ಅವರನ್ನು ಸರಿದಾರಿಗೆ ಕೊಂಡೊಯ್ಯುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳು ಪೌಷ್ಠಿಕಾಂಶವುಳ್ಳ ಆಹಾರಗಳನ್ನು ಸೇವಿಸಬೇಕು. ವಿದ್ಯಾಭ್ಯಾಸದ ಜೊತೆಗೆ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದ ಅವರು, ವಿದ್ಯಾರ್ಥಿಗಳಲ್ಲಿ ಕಲಿಕೆಯ ಆಸಕ್ತಿ, ವಿಮರ್ಶಾತ್ಮಕ ಚಿಂತನೆ, ಆತ್ಮವಿಶ್ವಾಸ ಹಾಗೂ ಕೌಶಲ್ಯ ಬೆಳೆಸುವುದು ಶಿಕ್ಷಕರ ಜವಾಬ್ದಾರಿ ಎಂದರು.

ಗಟ್ಟಿ ಓದು, ಕಥೆ ಹೇಳುವುದು, ಸಂತೋಷದಾಯಕ ಗಣಿತ, ಕೈ ಬರಹ ಸುಧಾರಣೆ, ಕಲೆ ಮತ್ತು ಸಂಗೀತ ಕಲಿಕಾ ಹಬ್ಬದ ಉದ್ದೇಶವಾಗಿರುತ್ತದೆ. ಸರ್ಕಾರ ವಿದ್ಯಾರ್ಥಿಗಳಲ್ಲಿ ಜ್ಞಾನಾರ್ಜನೆ ಹೆಚ್ಚಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಈ ವೇಳೆ ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಅಮ್ಮನಪುರ ಮಹೇಶ್, ಟಿಪಿಓ ಶಾಂತರಾಜು, ಬಿಆರ್‌ಸಿ ಕುಮಾರಿ, ಇಸಿಓಗಳಾದ ಕುಮಾರ್, ನಂಜಯ್ಯ, ಸತೀಶ್, ಪುಷ್ಪಲತಾ, ಭಾಗ್ಯ, ಶಿವಕುಮಾರಸ್ವಾಮಿ, ಮುಖ್ಯ ಶಿಕ್ಷಕರಾದ ಶಿವಕುಮಾರ್, ನಟರಾಜ್, ಸಿಆರ್‌ಪಿ ಮಂಜುನಾಥ್, ಸಹ ಶಿಕ್ಷಕರಾದ ಸುನೀಲ್, ಮರಪ್ಪ, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜು ಹಾಗೂ ಕ್ಲಸ್ಟರ್ ಮಟ್ಟದ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕೊಳ್ಳೇಗಾಲದಲ್ಲಿ ಭೀಮ ಕೋರೆಗಾಂವ್ ವಿಜಯೋತ್ಸವ

ಅನ್ಯಾಯಕ್ಕೊಳಗಾದವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ: ಶಾಸಕ ಎಆರ್‌ಕೆ



ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು.

ಕೊಳ್ಳೇಗಾಲ, ಜ.2– ದೇಶದಲ್ಲಿ ಅನೇಕ ಕಾನೂನುಗಳು ಜಾರಿಯಾದರೂ ಅನ್ಯಾಯಕ್ಕೊಳಗಾದವರಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಎಂಜಿಎಸ್‌ವಿ ಮೈದಾನದಲ್ಲಿ ಗುರುವಾರ ಸಂಜೆ ನಡೆದ ಭೀಮ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅನ್ಯಾಯಕ್ಕೊಳಗಾದ ಸಾವಿರಾರು ಪ್ರಕರಣಗಳು ಇನ್ನೂ ಬಗೆಹರಿದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕಿದೆ ಎಂದರು.

ಅಂಬೇಡ್ಕರ್ ಅವರು ತಮ್ಮ ಸಂವಿಧಾನದಲ್ಲಿ ಎಲ್ಲಾ ವರ್ಗದವರಿಗೂ ಸಮಾನ ಅವಕಾಶ ಕಲ್ಪಿಸಿ ಸಂವಿಧಾನದಲ್ಲಿ ಉಲ್ಲೇಖಿಸಿದ್ದಾರೆ. ಆದರೆ ಪ್ರಸ್ತುತ ನಿಜಕ್ಕೂ ಸಮಾನತೆ ಎಲ್ಲಿದೆ ಎಂದು ಹುಡುಕಬೇಕಿದೆ. ಪ.ಜಾತಿ, ಪಂಗಡದವರ ಮೇಲೆ ನಡೆದಿರುವ ದೌರ್ಜನ್ಯ, ಅನ್ಯಾಯಗಳ ಪ್ರಕರಣದಲ್ಲಿ ಇನ್ನೂ ಸಹ ನ್ಯಾಯ ದೊರೆತಿಲ್ಲ ಎಂದು ವಿಷಾದಿಸಿದ ಅವರು, ಈ ಸಂಬಂಧ ನಾನು ಸಂಬಂಧಪಟ್ಟವರೊಂದಿಗೆ ಮಾತನಾಡಿದ್ದು, ನೊಂದವರಿಗೆ ನ್ಯಾಯ ಸಿಗುವಂತಾಗಬೇಕು ಎಂದು ಆಗ್ರಹಿಸಿದ ಅವರು, ಈ ನಿಟ್ಟಿನಲ್ಲಿ ಬುದ್ಧಿ ಜೀವಿಗಳು ಇಂತಹ ವಿಚಾರಗಳನ್ನು ಮನನ ಮಾಡಿಕೊಂಡು ಪ್ರಶ್ನಿಸುವಂತಾಗಬೇಕು ಎಂದರು.

ದೇಶದ ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ಸಹ ಸಮರ್ಪಕವಾಗಿ ಜನತೆಗೆ ಭೀಮ ಕೋರೆಗಾಂವ್ ವಿಜಯೋತ್ಸವಕ್ಕೆ ಸಂಬಂಧಿಸಿದಂತೆ ವಿಚಾರಗಳನ್ನು ಮುಟ್ಟಿಸುವಲ್ಲಿ ಹಿಂದುಳಿದಿವೆ ಒಟ್ಟಾರೆ ಭೀಮ ಕೋರೆಗಾಂವ್ ವಿಜಯೋತ್ಸವ ಇನ್ನೂ ಸಹ ಕತ್ತಲೆಯಲ್ಲಿದೆ ಎಂದರು. ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಅಂಬೇಡ್ಕರ್ ವೃತ್ತದಿಂದ ತೆರೆದ ವಾಹನದಲ್ಲಿ ಬುದ್ಧನ ವಿಗ್ರಹ, ಕೋರೆಗಾಂವ್ ವಿಜಯ ಸ್ತಂಭ ಹಾಗೂ ಅಲಂಕೃತಗೊಂಡಿದ್ದ ಎತ್ತಿನ ಗಾಡಿಯಲ್ಲಿ ಅಂಬೇಡ್ಕರ್ ಭಾವಚಿತ್ರವನ್ನಿಟ್ಟು ನೂರಾರು ಮಂದಿ ಮೆರವಣಿಗೆ ಮೂಲಕ ಎಂಜಿಎಸ್‌ವಿ ಕಾಲೇಜು ಮೈದಾನಕ್ಕೆ ಪಂಜಿನ ಮೆರವಣಿಗೆ ಮೂಲಕ ಆಗಮಿಸಿದರು.


ಈ ವೇಳೆ ಪ್ರೊ.ದೇಮಾಜು, ಮಾಜಿ ಸಚಿವ ಎನ್.ಮಹೇಶ್, ಸಮಾಜ ಸೇವಕ ತೆಳ್ನನೂರು ಪ್ರದೀಪ್, ಹಿರಿಯ ಪತ್ರಕರ್ತ ನಿಂಪು ರಾಜೇಶ್, ಅಂಬೇಡ್ಕರ್ ಸಂಘದ ಅಧ್ಯಕ್ಷ ಆನಂದ್ ಮೂರ್ತಿ, ಭೀಮನಗರ ಯಜಮಾನ ಚಿಕ್ಕಮಾಳಿಗೆ, ಸಿದ್ದಾರ್ಥ ಇನ್ನಿತರರಿದ್ದರು.

ಚಾ.ನಗರ ಉಸ್ತುವಾರಿಯಾಗಿ ನೇಮಕ



ಚಾಮರಾಜನಗರ: ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಸಂಚಾಲಕ ಕೆರಾಜು, ಎಐಸಿಸಿ ಪಜಾತಿ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರ ಪಾಲ್ ಗೌತಮ್ ಅವರ ಆದೇಶದ ಮೇರೆಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಎಸ್ಸಿ ವಿಭಾಗದ ಚಾಮರಾಜನಗರ ಜಿಲ್ಲಾ ಉಸ್ತುವಾರಿಯಾಗಿ ನಂಜನಗೂಡಿನ ದೇವೀರಮ್ಮನಹಳ್ಳಿ ಬಡಾವಣೆ ನಿವಾಸಿ ಪಿ.ರವಿಪ್ರಕಾಶ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಇಂದು ಮಾಜಿ ಸಚಿವ ಹೆಚ್‌ಎಸ್‌ಎಂ ಪುಣ್ಯಾರಾಧನೆ



ಗುಂಡ್ಲುಪೇಟೆ, ಜ.2 (ಸೋಮ್.ಜಿ)– ತಾಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಜ.3 ರಂದು ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವ ಪ್ರಸಾದ್‌ರ 9ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಗ್ರಾಮದ ಹೆಚ್.ಎನ್.ಎಸ್.ಸಮುದಾಯ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಆದ್ದರಿಂದ ದಿ.ಮಹದೇವಪ್ರಸಾದ್ ಅವರ ಅಭಿಮಾನಿಗಳು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಕೋರಿದ್ದಾರೆ.

ದುಗ್ಗಹಟ್ಟಿ ಪಿ.ವೀರಭದ್ರಪ್ಪ ಅವರಿಗೆ ಶ್ರದ್ಧಾಂಜಲಿ



ದುಗ್ಗಹಟ್ಟಿ ಪಿ.ವೀರಭದ್ರಪ್ಪ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಯಳಂದೂರು, ಜ.2– ಪಟ್ಟಣದಲ್ಲಿ ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಸಂಸ್ಥಾಪಕ ದುಗ್ಗಹಟ್ಟಿ ಪಿ.ವೀರಭದ್ರಪ್ಪ ಅವರಿಗೆ ಶಾಲಾವರಣದಲ್ಲಿ ಮೌನಾಚರಣೆ ಮಾಡುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶಿಕ್ಷಕ ಮಂಜುನಾಥ್ ಮಾತನಾಡಿ, ವೀರಭದ್ರಪ್ಪನವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕವಾಗಿ ನೀಡಿದ ಕೊಡುಗೆ ತಿಳಿಸಿದರೆ, ಶಿಕ್ಷಕ ಗುಂಬಳ್ಳಿ ಬಸವರಾಜ್ ಮಾತನಾಡಿ, ಸಾಹಿತ್ಯ ಹಾಗೂ ಸಾಂಸ್ಕೃತಿಕವಾಗಿ ಸಮಾಜಮುಖಿ ಚಿಂತನೆಯೊಂದಿಗೆ ಅವಿರತವಾಗಿ ಶ್ರಮಿಸಿದ ವೀರಭದ್ರಪ್ಪನವರು ಬದುಕಿನುದ್ದಕ್ಕೂ ಅನುಸರಿಸಿದ ಶ್ರದ್ಧೆ, ಸಮಯ ಪಾಲನೆ, ಶಿಸ್ತು, ಪ್ರತಿಯೊಬ್ಬರ ಬದುಕಿನಲ್ಲಿ ಆದರ್ಶಮಯವಾದ ಚಿಂತನೆಗಳನ್ನು ರೂಪುಗೊಳಿಸುತ್ತದೆ ಎಂದರು. ಇದೇ ವೇಳೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಹಾಜರಿದ್ದರು.

ಫೆ.23ಕ್ಕೆ ಆದಿಚುಂಚನಗಿರಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ



ಮಂಡ್ಯ, ಜ.2– ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ಫೆ.23ಕ್ಕೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿರುವ ಆದಿಚುಂಚನಗಿರಿಗೆ ಭೇಟಿ ನೀಡಿ, ಬಾಲಗಂಗಾಧರನಾಥ ಶ್ರೀಗಳ ಗದ್ದುಗೆ ಉದ್ಘಾಟನೆ ಮಾಡಲಿದ್ದಾರೆ. ಬಳಿಕ ನಿರ್ಮಲಾನಂದನಾಥ ಶ್ರೀಗಳ ವಾರ್ಷಿಕ ಪಟ್ಟಾಭಿಷೇಕದಲ್ಲಿ ಭಾಗಿಯಾಗಲಿದ್ದಾರೆ.

ಇದೇ ವೇಳೆ ಶ್ರೀಕ್ಷೇತ್ರ ಆದಿಚುಂಚನಗಿರಿ ಹಾಗೂ ಧಾರ್ಮಿಕ ವಿಚಾರವಾಗಿ ಪ್ರಧಾನಿ ಮೋದಿ ಭಾಷಣ ಮಾಡಲಿದ್ದಾರೆ. ಕೆಲವೇ ದಿನಗಳಲ್ಲಿ ಚುಂಚನಗಿರಿ ಶ್ರೀಗಳು ಮೋದಿ ಪ್ರವಾಸದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ

ಇಂದೋರ್‌ನಲ್ಲಿ ಕಲುಷಿತ ನೀರು ಸೇವನೆ; ಮೃತರ ಸಂಖ್ಯೆ 10ಕ್ಕೆ ಏರಿಕೆ

ಇಂದೋರ್, ಜ.2– ಮಧ್ಯಪ್ರದೇಶದ ಇಂದೋರ್ ನಗರದ ಭಾಗೀರಥಪುರ ಪ್ರದೇಶದಲ್ಲಿ ಕಲುಷಿತ ನೀರು ಸೇವಿಸಿ ಉಂಟಾದ ಅತಿಸಾರದಿಂದ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ ಎಂದು ಇಂದೋರ್ ಮೇಯರ್ ಪುಷ್ಯ ಮಿತ್ರ ಭಾರ್ಗವ ಇಂದು ಹೇಳಿದ್ದಾರೆ.

ಆರು ತಿಂಗಳ ಶಿಶು ಸೇರಿದಂತೆ 14 ಜನರು ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದು ನಿವಾಸಿಗಳು ಹೇಳಿದ್ದಾರೆ. ಆರೋಗ್ಯ ಇಲಾಖೆ ಈ ಹೇಳಿಕೆಯನ್ನು ದೃಢಪಡಿಸಿಲ್ಲ ಮತ್ತು ಅದರ ಅಧಿಕೃತ ಮಾಹಿತಿಯು ಭಾಗೀರಥಪುರದಲ್ಲಿ ಅತಿಸಾರದಿಂದ ಮೃತಪಟ್ಟವರ ಸಂಖ್ಯೆಯನ್ನು ನಾಲ್ಕು ಎಂದು ಹೇಳುತ್ತದೆ.

ಈಗ ಏಕಾಏಕಿ 10 ಮಂದಿ ಮೃತಪಟ್ಟ ಬಗ್ಗೆ ನನಗೆ ಮಾಹಿತಿ ಬಂದಿದೆ ಎಂದು ಭಾರ್ಗವ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದರು.

ಭಾಗೀರಥಪುರದಿಂದ ಸಂಗ್ರಹಿಸಲಾದ ಕುಡಿಯುವ ನೀರಿನ ಮಾದರಿಗಳ ಪ್ರಾಥಮಿಕ ಪರೀಕ್ಷಾ ವರದಿಗಳ ಆಧಾರದ ಮೇಲೆ ಶಂಕಿತ ಕಾಲರಾ ಹರಡುವಿಕೆಯ ಬಗ್ಗೆ ಕೇಳಿದಾಗ, ಆರೋಗ್ಯ ಇಲಾಖೆ ಮಾತ್ರ ಈ ವಿಷಯದ ಬಗ್ಗೆ ವಿವರಗಳನ್ನು ನೀಡಬಹುದು ಎಂದು ಮೇಯರ್ ಹೇಳಿದ್ದಾರೆ.

ಖಾರ್ಗೋನ್‌ನಲ್ಲಿ ವಿಷ ಆಹಾರ ಸೇವನೆಯಿಂದ 200 ಗಿಳಿಗಳ ಸಾವು

ಖಾರ್ಗೋನ್ (ಮಧ್ಯಪ್ರದೇಶ), ಜ.2– ಮಧ್ಯಪ್ರದೇಶದ ಖಾರ್ಗೋನ್ ಜಿಲ್ಲೆಯ ನರ್ಮದಾ ನದಿಯ ದಡದಲ್ಲಿ ವಿಷ ಆಹಾರ ಸೇವಿಸಿ ಕನಿಷ್ಠ 200 ಗಿಳಿಗಳು ಸಾವನ್ನಪ್ಪಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬದ್ವಾ ಪ್ರದೇಶದ ನದಿ ದಂಡೆಯಲ್ಲಿರುವ ಸೇತುವೆಯ ಬಳಿ ಕಳೆದ ನಾಲ್ಕು ದಿನಗಳಲ್ಲಿ ಇಷ್ಟು ಪ್ರಮಾಣದ ಗಿಳಿಗಳು ಸಾವನ್ನಪ್ಪಿದ್ದು, ಹಕ್ಕಿ ಜ್ವರ ಕಾರಣ ಎಂದು ಶಂಕಿಸಲಾಗಿತ್ತು. ಆದರೆ, ಮೃತಗಿಳಿಗಳನ್ನು ಮರಣೋತ್ತರ ಪರೀಕ್ಷೆ ನಡೆಸಿದಾಗ ಅವುಗಳ ಸಾವಿಗೆ ವಿಷ ಪ್ರಾಶನ ಕಾರಣವಾಗಿದೆ ಎಂದು ದೃಢಪಟ್ಟಿದೆ.

ರಕ್ಷಣಾ ಕಾರ್ಯಾಚರಣೆ ಸಂದರ್ಭದಲ್ಲಿ ಕೆಲವು ಗಿಳಿಗಳು ಜೀವಂತ ಇದ್ದವು. ಆದರೆ, ಆಹಾರದಲ್ಲಿನ ವಿಷ ಪ್ರಮಾಣ ತೀವ್ರವಾಗಿದ್ದ ಕಾರಣ ಅವು ಬದುಕಲು ಸಾಧ್ಯವಾಗಲಿಲ್ಲ ಎಂದು ಜಿಲ್ಲಾ ವನ್ಯಜೀವಿ ವಾರ್ಡನ್ ಟೋನಿ ಶರ್ಮಾ ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ವಾಲ್ಮೀಕಿ ಪುತ್ಥಳಿ ಅನಾವರಣ ತಾತ್ಕಾಲಿಕ ಮುಂದೂಡಿಕೆ

ಬಳ್ಳಾರಿ, ಜ.2– ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ನಿವಾಸದ ಬಳಿ ನಡೆದ ಬ್ಯಾನರ್ ಗಲಾಟೆ ವೇಳೆ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ರೆಡ್ಡಿ ಎಂಬುವವರು ಗುಂಡೇಟಿಗೆ ಬಲಿಯಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಸೂಚನೆಯಂತೆ ವಾಲ್ಮೀಕಿ ಪುತ್ಥಳಿ ಅನಾವರಣ ತಾತ್ಕಾಲಿಕ ಮುಂದೂಡಲಾಗಿದೆ ಎಂದು ಗ್ರಾಮೀಣ ಶಾಸಕ ಬಿ.ನಾಗೇಂದ್ರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಇದಕ್ಕಿಂತ ವಿಜೃಂಭಣೆಯಿಂದ ಪುತ್ಥಳಿ ಅನಾವರಣ ಮಾಡಲಾಗುವುದು. ಆ ಸಮಾರಂಭಕ್ಕೆ ಎಲ್ಲರೂ ಆಗಮಿಸಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ವಾಲ್ಮೀಕಿ ಪರವಾಗಿದೆ. 15 ಎಸ್ಟಿ ಮೀಸಲು ಕ್ಷೇತ್ರದಲ್ಲಿ 14ರಲ್ಲಿ ವಿಜಯಿಯಾಗಿದೆ. ಭರತ್ ರೆಡ್ಡಿ ಮಾಡಿರುವ ಕೆಲಸ ಸಹಿಸದೇ ಬಿಜೆಪಿಯವರು ಬ್ಯಾನರ್ ವಿಚಾರದಲ್ಲಿ ಘರ್ಷಣೆ ಪ್ರಚೋದಿಸಿ, ಕಾಂಗ್ರೆಸ್ ಪಕ್ಷಕ್ಕೆ ಕಪ್ಪು ಚುಕ್ಕೆ ತರುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಗುಂಡು ಹಾರಿಸಿದ ಪ್ರಕರಣದಲ್ಲಿ ಸರ್ಕಾರ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಕೆಲಸ ಮಾಡಲಿದೆ. ಮನೆ ಸೇರಿದರೂ ಮತ್ತೆ ಕಾಲು ಕೆರೆದು ಜಗಳಕ್ಕೆ ಬಂದಿದ್ದಾರೆ. ಇದು ಅವಮಾನದ ವಿಷಯವಾಗಿದೆ ಎಂದು ಹೇಳಿದರು.

ರಾಜ್ಯದ ಎಲ್ಲಾ ಶಾಲಾ–ಕಾಲೇಜಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ

ಮೈಸೂರು, ಜ.2(ಎಸ್‌ಪಿಎನ್)– ರಾಜ್ಯದ ಎಲ್ಲಾ ಶಾಲಾ–ಕಾಲೇಜು (ಪ್ರಾಥಮಿಕ, ಪ್ರೌಢಶಿಕ್ಷಣ ಹಾಗೂ ಪಿಯುಸಿ) ಹಂತದ ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲು ಜ.1ರಿಂದ 31ರವರೆಗೆ 'ರಸ್ತೆ ಸುರಕ್ಷತಾ ಮಾಸಾಚರಣೆ' ಕುರಿತು ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕಾರ್ ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯದಲ್ಲಿ ರಸ್ತೆ ಸುರಕ್ಷತೆಯು ಜನಜೀವನದ ಅನಿವಾರ್ಯ ಅಂಶವಾಗಿದ್ದು, ಅದರ ಕುರಿತು ಶಾಲಾ –ಕಾಲೇಜು ಹಂತದಲ್ಲಿ ಸಮಗ್ರ ಜಾಗೃತಿ ಮೂಡಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ರಸ್ತೆ ಅಪಘಾತಗಳ ಪ್ರಮಾಣದಲ್ಲಿ ಕಂಡು ಬರುವ ಏರಿಕೆ, ಸಾರ್ವಜನಿಕರಲ್ಲಿ ವಿಶೇಷವಾಗಿ ವಿದ್ಯಾರ್ಥಿ ಹಂತದಲ್ಲಿ ಸುರಕ್ಷಿತ ಸಂಚಾರದ ಅಭ್ಯಾಸಗಳನ್ನು ಬೆಳೆಸುವ ಅಗತ್ಯತೆಯಿದೆ. ಇಂದಿನ ವಿದ್ಯಾರ್ಥಿಗಳು ನಾಳೆಯ ಜವಾಬ್ದಾರಿಯುತ ನಾಗರಿಕರಾಗಿರುವುದರಿಂದ, ಅವರಿಗೆ ಬಾಲ್ಯದಲ್ಲೇ ರಸ್ತೆ ಸುರಕ್ಷಾ ನಿಯಮಗಳು, ಜವಾಬ್ದಾರಿಯುತ ನಡೆ–ನುಡಿ ಮತ್ತು ಎಚ್ಚರಿಕೆಯಿಂದ ಸಂಚಾರ ಮಾಡುವ ವಿಧಾನಗಳನ್ನು ತಿಳಿಸುವುದು ಅತ್ಯಂತ ಅವಶ್ಯವಾಗಿದೆ.

ಹಾಗಾಗಿ ಶಾಲಾ ಶಿಕ್ಷಣ ಇಲಾಖೆಯು ವಿದ್ಯಾರ್ಥಿಗಳಿಗೆ ಶಾಲಾ ಹಂತದಲ್ಲೇ ರಸ್ತೆ ಸುರಕ್ಷತಾ ಸಂಸ್ಕೃತಿಯನ್ನು ಬೆಳೆಸಲು, ಪ್ರಾಯೋಗಿಕ ಅಧ್ಯಯನದ ಮೂಲಕ ನಿಯಮ ಪಾಲನೆಯ ಮಹತ್ವವನ್ನು ಮನವರಿಕೆ ಮಾಡಲು ಮತ್ತು ಸಮಗ್ರ ಸಮಾಜದಲ್ಲಿ ಸಂಚಾರ ನಿಯಮಗಳ ಪಾಲನೆಯಲ್ಲಿ ಶಿಸ್ತು ಮೂಡಿಸಲು ಈ ಅಭಿಯಾನ ಬಲವಾಗಿ ಬೆಂಬಲಿಸುತ್ತದೆ.

ಅಂತೆಯೇ ಈ ವಿಚಾರವಾಗಿ ಬೆಂಗಳೂರಿನ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಲಹೆ ಮೇರೆಗೆ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಸಂಚಾರ ನಿಯಮ ಕುರಿತು ಕಾರ್ಯಕ್ರಮ ರೂಪಿಸಿ ವಿದ್ಯಾರ್ಥಿಗಳಲ್ಲಿ ರಸೆ ನಿಯಮಗಳ ಕುರಿತು ಜಾಗೃತಿ ಮೂಡಿಸಬೇಕು. ಒಂದು ತಿಂಗಳ ಅಭಿಯಾನ ಮುಗಿದ ಬಳಿಕ ಜಿಲ್ಲಾ ಹಂತದ ಉಪನಿರ್ದೇಶಕರು(ಆಡಳಿತ) ತಾಲೂಕು ಹಂತದ ಬಿಇಓಗಳಿಂದ ಸಮಗ್ರ ವರದಿ ಪಡೆದು ಬೆಂಗಳೂರಿನ ಸಿಪಿಐ ಕಚೇರಿಗೆ ದಾಖಲಾತಿ ಸಮೇತ ಮಾಹಿತಿ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಅಭಿಯಾನ ಹೀಗಿರಲಿ: ಶಾಲಾ ಪ್ರಾರ್ಥನೆ ವೇಳೆ ರಸ್ತೆ ನಿಯಮ ಪಾಲನೆ ಕುರಿತು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧನೆ, ಸಂಚಾರ ನಿಯಮಗಳ ಕುರಿತು ಅರಿವು, ಗೃಹ ಕಾರ್ಯಕ್ರಮದಲ್ಲಿ 1ಸಂಚಾರ ನಿಯಮಗಳ ಕುರಿತು ಹಿರಿಯರೊಂದಿಗೆ ವಿದ್ಯಾರ್ಥಿಗಳ ಚರ್ಚೆ ಹಾಗೂ ಸಂಚಾರ ಚಿಹ್ನೆ ಮತ್ತು ಜೀಬ್ರಾ ಕ್ರಾಸಿಂಗ್ ಬಳಕೆ, ಸೀಟ್ ಬೆಲ್ಟ್ ಮತ್ತು ಹೆಲ್ಮೆಟ್ ಧಾರಣೆ ಕುರಿತು, ಹಿರಿಯರೊಂದಿಗೆ ಅಪಘಾತಗಳ ಕುರಿತು ಚರ್ಚೆ.

ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಕೆಯಿಂದಾಗುವ ಅನಾಹುತಗಳ ಚರ್ಚೆ, ಡ್ರೈವಿಂಗ್ ಲೈಸೆನ್ಸ್ ಮತ್ತು ಸಂಚಾರಿ ನಿಯಮ ಪಾಲನೆ ಕುರಿತು, ರಸ್ತೆ ಸುರಕ್ಷತೆ ವರದಿಗಾರಿಕೆ, ವಾಹನ ದಾಖಲೆ, ಗಣರಾಜ್ಯೋತ್ಸವ ದಿನದಂದು ಸುರಕ್ಷತೆಯ ಸಂದೇಶ ಸೇರಿದಂತೆ ಜನವರಿ ತಿಂಗಳಲ್ಲಿ ಪ್ರತಿದಿನವೂ ವಿದ್ಯಾರ್ಥಿಗಳಲ್ಲಿ 'ರಸ್ತೆ ಸುರಕ್ಷಾ ಮಾಸಾಚರಣೆ' ಕುರಿತು ಅಭಿಯಾನ ನಡೆಸುವಂತೆ ಸೂಚಿಸಿ, ಡಿಡಿಪಿಐ, ಬಿಇಓ, ಬಿಆರ್‌ಸಿ, ಸಿಆರ್‌ಪಿ ಸೇರಿದಂತೆ ಶಿಕ್ಷಣಾಧಿಕಾರಿಗಳ ಹಂತದ ಅಭಿಯಾನದ ಕಾರ್ಯ ಚಟುವಟಿಕೆಗಳ ವ್ಯಾಪ್ತಿ ಉಲ್ಲೇಖಿಸಿ ಸುತ್ತೋಲೆ ಹೊರಡಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕಿದೆ
ಅಲಿನೇಷನ್ ಆಗಿರುವ 1 ಎಕರೆ ಜಮೀನು ಮೈಸೂರು–ಬಿಳಿಕೆರೆ– ಕೆ.ಆರ್.ನಗರ ರಸ್ತೆ
ಡಾಂಬರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು, ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ.ಮೀ ಅಹಲ್ಯ ಗ್ರಾಮ
45'x50' N/F, MUDA SITE ಮೇಟಗಳ್ಳಿ ಪೊಲೀಸ್ ಠಾಣೆ ಮುಂಭಾಗ
7411848108

WANTED
An experienced Accounts Assistant for a company in Mysore having knowledge in Tally Prime (Part Time or Full Time). Contact
9980623210

SITE FOR SALE
30x40 W/F ATHMANANDHA SAGARA, PHASE-I, RATE: 22 LAKHS, OWNER MEETING
CONTACT 8861220989

SITE FOR SALE
20x30 N/F DREAM CITY BOGADHI MUDA APPROVED RATE : 25 LAKHS
CONTACT 8861220989

ಶ್ರೀ ಗೌರೀಶಂಕರ ಟ್ರಾವೆಲ್ಸ್
17-1-2026 (4 ದಿನ): ಪುರಿಜಗನ್ನಾಥ್, ಭುವನೇಶ್ವರ್, ಕೋನಾರ್ಕ್
21–2–2026 (3 ದಿನ): ಶಿರಡಿ, ಘೃಶ್ಣೇಶ್ವರ, ಎಲ್ಲೋರ, ತ್ರ್ಯಂಬಕೇಶ್ವರ.
21–3–2026 (3 ದಿನ): ಕಾಮಾಕ್ಯ, ಉಮಾನಂದ, ಬ್ರಹ್ಮಪುತ್ರ,
1–4–2026 (6 ದಿನ): ಅಯೋಧ್ಯೆ, ದೆಹಲಿ, ಆಗ್ರಾ, ಕಾಶಿ, ಪ್ರಯಾಗ್‌ರಾಜ್.
(ವಿಮಾನ, AC ಬಸ್, ಊಟ, ರೂಂ)
Mob: 9448499538

ಹೆಸರು ಬದಲಾವಣೆ
ಆಶಾ W/o ಎಂ.ಐ. ಅಮೀರ್, # 26, ಕೆ.ಬಿ.ಎಲ್. ಗಾರ್ಡೇನಿಯ, ವಿಜಯನಗರ ಎರಡನೇ ಹಂತ, ಎರಡನೇ ಘಟ್ಟ, ಮೈಸೂರು–570032, ನಾನು ನನ್ನ ಸ್ವ ಇಚ್ಛೆಯಿಂದ ನನ್ನ ಹೆಸರನ್ನು ಆಶಾ ಎಂಬುದರ ಬದಲಾಗಿ ಕೆ.ಕೆ. ದೇವಮ್ಮ (ಕೊಟ್ಟಂಗಡ ಕುಶಾಲಪ್ಪ ದೇವಮ್ಮ) ಎಂಬುದಾಗಿ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಕೆ.ಕೆ.ದೇವಮ್ಮ

ಮೈಸೂರಿನಲ್ಲಿ DTCP Approved ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ.ನರಸೀಪುರ ಮುಖ್ಯ ರಸ್ತೆ.
2) ಹೆಚ್.ಡಿ. ಕೋಟೆ ಮುಖ್ಯ ರಸ್ತೆ
3) ಕೆಲ್ಲಹಳ್ಳಿ ಪೆರಿಫೆರಲ್ ರಿಂಗ್ ರಸ್ತೆ.
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
Mob: 7411914135

ಮಲೇಷಿಯಾ ಮತ್ತು ಸಿಂಗಾಪುರ ಪ್ರವಾಸ 7 ದಿನಗಳು
22/01/2026
ಜೇಂಟಿಂಗ್ ಹೈಲ್ಯಾಂಡ್, ಅಕ್ವೇರಿಯ, ಬಟುಗುಹೆ, ಸನ್ವೇ ಲಾಗೂನ್ ಥೀಮ್ ಪಾರ್ಕ್, ಕೆಎಲ್ ಟವರ್, ನೈಟ್ ಸಫಾರಿ, ಸೆನ್ ಟೋಸಾ ದ್ವೀಪ, ವಾಕ್ಸ್ ಮ್ಯೂಸಿಯಂ, ವಿಂಗ್ ಆಫ್ ಟೈಮ್ ಶೋ, ಮರೀನಾ ಬೇ ಸ್ಯಾಂಡ್ಸ್, ಗಾರ್ಡನ್ ಬೈ ದಿ ಬೇ, ಸುವರ್ಣ ಯಾತ್ರಾ
9019462508 / 6360146483

ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಉಚಿತ ತರಬೇತಿ

MS Office
Excel Ai
Tally GST
Typing Class
Coreldraw
Photoshop
Hardware
ಜನವರಿ 12 Reg Name 7760240575
ಗುರು ರಾಘವೇಂದ್ರ ಕಂಪ್ಯೂಟರ್ ಮಂಡಿ ಮೊಹಲ್ಲಾ,ಮೈಸೂರು c apply

SITE FOR SALE
40x60 W/F YashMega City, Phase-1 Just 250 Meters From Mysore Hunsur Highway, Rate : 1800 per Sq.ft, Contact:
8861220989

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : 22000 + W/o ((8 hrs)
ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819, 9880727819

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 91080 48064

WANTED A 30x40 SITE
Devanur (Rajiv Nagar) 3rd Stage Sellers Contact:
Mob: 91870 02359

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು, ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ: 13,000 (24 CT)
Mob: 9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

WANTED
Electrician, Mysore
ITI pass or fail. Fresher also invited. ESI & PF facility available. Contact:
S.S. ELECTRICAL, 2248, 5th Cross, Basaveshwara Road, K.R. Mohalla, Mysore
Pradeep, Mob: 9845280016
Nagaraj, Mob: 9535239262

ಸೈಟು ಬೇಕಾಗಿದೆ
20x30 MUDA / DTCP ಮೈಸೂರಿನ ಯಾವುದೇ ಭಾಗದಲ್ಲಿ ನೇರವಾಗಿ ಮಾಲೀಕರಿಗೆ ಖರೀದಿಗೆ ಬೇಕಾಗಿದೆ. Rs. 2500 per sq.ft. No brokers.
Mob: 7022436475

ನಿವೇಶನ ಮಾರಾಟಕ್ಕಿದೆ
30x46 ದಕ್ಷಿಣ ದಿಕ್ಕು (60 ಅಡಿ ರಸ್ತೆ) ನಗ್ಗರತಹಳ್ಳಿ ರೈಲ್ವೆ ಬಡಾವಣೆ, ಮೈಸೂರು.
Mob: 8892639369

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. SSLC ವಿದ್ಯಾರ್ಹತೆ ಇರಬೇಕು. ಮೇಟಗಳ್ಳಿ, ಬನ್ನಿಮಂಟಪ, ಕೆಸರೆ, ನಾಯ್ಡುನಗರ, ಎನ್.ಆರ್. ಮೊಹಲ್ಲಾ, ತಿಲಕ್‌ನಗರ ಸುತ್ತಮುತ್ತಲಿನವರು ಸಂಪರ್ಕಿಸಿ:
Mob: 7259598615

Solar Water Heaters built for Modern Living
20 ವರ್ಷಗಳ ವ್ಯಾರಂಟಿ

Jupiter Solar
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೆ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. SSLC/PUC - Pass/Fail - 5 Posts ಮಹಿಳೆಯರು & Cleaning, Packing (ಪ್ಯಾಕಿಂಗ್) – 3 Posts, ಸಂಪರ್ಕಿಸಿ: ಶ್ರೀ ವಿನಾಯಕ ಟ್ರೇಡರ್ಸ್, ಹೆಬ್ಬಾಳ್, ಮೈಸೂರು. ಸ್ಥಳೀಯರಿಗೆ ಮೊದಲ ಆದ್ಯತೆ
9901212321 / 8880883339

ಪ್ರತಿಕಾ ಪ್ರಕಟಣೆ
ಮೈಸೂರು ನಗರ ವ್ಯಾಪ್ತಿಯಲ್ಲಿ 100 ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳಾದ ವಿದ್ಯಾರ್ಥಿಗಳಿಗೆ ಕೊಠಡಿ, ಸ್ನಾನಗೃಹ, ಶೌಚಾಲಯ, ಅಡುಗೆ ಕೋಣೆ, ಊಟದ ಹಾಲ್ ಹೊಂದಿರುವ ಕಟ್ಟಡವನ್ನು ಬಾಲಕರ ವಿದ್ಯಾರ್ಥಿನಿಲಯಕ್ಕೆ ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉದ್ದೇಶಿಸಿದ್ದು, ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆಗೆ ನೀಡಲು ಇಚ್ಛಿಸುವ ಕಟ್ಟಡದ ಮಾಲೀಕರು ಈ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಲು ಕೋರಿದೆ. ಮೊಬೈಲ್ ಸಂಖ್ಯೆ:
9731466873 / 9482681636

SITE FOR SALE
Site No -117 ಅಳತೆ 20x33 ಶ್ರೀನಿಧಿ ಎನ್‌ಕ್ಲೇವ್ (MUDA APPROVAL) ಬೆಳವಾಡಿ Opp ಪಾರ್ಕ್, ಸಾಯಿ ಗಾರ್ಮೆಂಟ್ಸ್ ಹತ್ತಿರ,
Mobile : 8296651698

LEASE OR RENT
We are looking for a well-maintained apartment or building on lease/rent to operate a Living Serviced Apartment business in Mysore with good location and road access. Contact:
9036154301

ಬೇಕಾಗಿದ್ದಾರೆ
ಮೈಸೂರು–ಕೊಡಗು–ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ಡೆಲಿವರಿ ಕೆಲಸಕ್ಕೆ ದೃಢಕಾಯ ಯುವಕರು ಮತ್ತು ಲಾರಿ ಚಾಲಕರು ಬೇಕಾಗಿದ್ದಾರೆ. (1)ಡೆಲಿವರಿ ಬಾಯ್ ಆರಂಭಿಕ ವೇತನ 16,000. (2)ಹೆವಿ ಡ್ರೈವರ್ 21,000, (3)ಮಿನಿ ಟೆಂಪೋ ಡ್ರೈವರ್ 19,000.
ಸಂಪರ್ಕಿಸಿ: 8762819554

ಕೆಲಸಕ್ಕೆ ಬೇಕಾಗಿದ್ದಾರೆ
* ಕ್ಯಾಪ್ಟನ್/ಸಪ್ಲೈಯರ್ (1)
* ಕ್ಯಾಷಿಯರ್ (ಹುಡುಗ) (1)
* ಕಿಚನ್ ಕ್ಲೀನಿಂಗ್ (ಮಹಿಳೆ) (1) 10AM - 5PM
ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ ವಿಜಯನಗರ 4ನೇ ಸ್ಟೇಜ್, ಮೈಸೂರು.
8884140303

FOR SALE
30x40 Sites Near RT Nagar BSNL Layout @ Just 22 Lakhs
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

FOR SALE
37x40 Site @ City Centre, Near Ramavilas Road,
New 20x30 Duplex House Inside Ring Road Near Uttnahalli
33X40 CORNER SITE @ KABINI LAYOUT, SRIRAMPURA.
40x45 Duplex Nr Vijaya Ngr
35x60 & 40x60 Commercial, 20x30 Sites @ Srirampura
PRAKRUTHI PROPERTIES
95386 90359, 90359 90359

SITE FOR SALE
40×60 MUDA Site For Sale in Dattagalli Near RT Nagar Mysore
30×40 Site For Sale in Kuvempunagar Near Hari Hara Hotel Mysore.
PH: 9900464111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob : 7975101020

ತಿ.ನರಸೀಪುರದಲ್ಲಿ
1800sqft+450 sqft ಅಳತೆಯ ವಾಣಿಜ್ಯ ಸಂಕೀರ್ಣ ಬಾಡಿಗೆಗೆ/ ಭೋಗ್ಯಕ್ಕೆ ದೊರೆಯುತ್ತದೆ ಸರ್ಕಾರಿ ಆಸ್ಪತ್ರೆ ಮುಖ್ಯರಸ್ತೆ PVT ಬಸ್ ಸ್ಟ್ಯಾಂಡ್ ಹತ್ತಿರ

9448390643

ಹೆಸರು ಬದಲಾವಣೆ
ಚಾಮರಾಜನಗರ ಜಿಲ್ಲೆ, ಹನೂರು ತಾಲೂಕು & ಹೋಬಳಿ ಅಜ್ಜಿಪುರ ಗ್ರಾಮದಲ್ಲಿ ವಾಸವಾಗಿರುವ ಲೇಟ್. ಮಲ್ಲಿಕಾರ್ಜುನಪ್ಪ .ಎಮ್ ರವರ ಮಗ ಎಂ. ಜಗದೀಶ (ಆಧಾರ್ 7112 3935 2022) ಆದ ನಾನು ನನ್ನ ಹೆಸರನ್ನು ಜಗದೀಶ .ಎಮ್ ಯಿಂದ ಎಮ್. ಜಗದೀಶ ಎಂಬುದಾಗಿ ನೋಟರಿ ಸಮ್ಮುಖದಲ್ಲಿ ಬದಲಾಯಿಸಿ ಕೊಂಡಿರುತ್ತೇನೆ.
ಸಹಿ/– ಎಮ್. ಜಗದೀಶ

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

PART / FULL TIME TELECALLING
ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ : 8000 ರಿಂದ 10000.
ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ
Mob: 888 444 9483

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

3 BHK FLAT FOR SALE
22 squares East facing 3 BHK apartment for sale at Jayanagar 1st main, opposite railway gate (only for vegetarians) Contact; Mysore Estates Vishwanath Gowda
9590911111

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (18k -38k), SSLC, PUC, DEGREE
6366718368 / 9739121355

S.K. CONSTRUCTION
ಹೊಸ ವರ್ಷದ offer
20x30 Duplex 3 BHK ಮನೆ Just @ 55. lakh. Near, ಶಾಂತವೇರಿ ಗೋಪಾಲಗೌಡ ನಗರ Advance ಹಣ ಇದ್ದರೆ ಸಾಕು 80% Loan ನಾವೇ ಮಾಡಿ ಗುಣಮಟ್ಟದ Construction ಮಾಡಿಕೊಡುತ್ತೇವೆ.
Ph: 8904202804

ಸೈಟು ಮಾರಾಟಕ್ಕಿದೆ
30x40, ದಕ್ಷಿಣ ದಿಕ್ಕು, 'ಬಿ' ಬ್ಲಾಕ್, ಎಪಿಎಂಸಿ, ಬಂಡಿಪಾಳ್ಯ, ಸಂಪರ್ಕಿಸಿ
8050257887
8762705887

SITE FOR SALE
* 40x60 E/F Muda Auction Site @ Vijayanagar 4th Stage, 1st Phase
* 100x55 E/F @ Vijaynagar 4th Stage 2nd Phase, 80ft Road.
9986773639 / 9980039509

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ UBER ಕ್ಯಾಬ್ ಸಂಸ್ಥೆಯಲ್ಲಿ ಕೆಲಸ ಮಾಡಲು ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ. ಉಚಿತ ವಸತಿ ನೀಡಲಾಗುವುದು ಮತ್ತು ಸಂಬಳ 35,000 ರಿಂದ 40,000 ವರೆಗೆ ಮತ್ತು ಬೆಂಗಳೂರಿನಲ್ಲಿ Amazon ಡೆಲಿವರಿ ಸಂಸ್ಥೆಗೆ 4 ಚಕ್ರದ ಗೂಡ್ಸ್ ವಾಹನ ಜೊತೆಗೆ ಡ್ರೈವರ್ ಬೇಕಾಗಿದ್ದಾರೆ. ಉಚಿತ ವಸತಿ ನೀಡಲಾಗುವುದು. ವೇತನ 50,000 ರಿಂದ 70,000 ವರೆಗೆ ಸಂಪರ್ಕಿಸಿ:
9187073404

House for Sale
In Vijayanagar 3rd Stage, 3 floor with lift facility, solar and borewell. Ground floor for parking and office space.
Mob: 9945277899
9591319191

HOUSE FOR LEASE
30x50 Duplex 3 BHK near university layout 26 lakhs
9886281713

SITES FOR SALE
Near RT Nagar surround 600 Mtrs and layout, vishwapragna Vishwajith Brahmins layout and other layout contact
9886281713

ಡ್ರೈವರ್ ಬೇಕಾಗಿದ್ದಾರೆ
ಡ್ರೈವಿಂಗ್ ಶಾಲೆಯಲ್ಲಿ ತರಬೇತಿ ನೀಡಲು ನುರಿತ ಡ್ರೈವರ್ ಬೇಕಾಗಿದ್ದಾರೆ. ಹೆಬ್ಬಾಳ್ ಸಮೀಪದವರು ಮಾತ್ರ ಸಂಪರ್ಕಿಸಿ.
9880181918

ತಕ್ಷಣ ಬೇಕಾಗಿದ್ದಾರೆ
ಮನೆ ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಫ್ಯಾಕ್ಟರಿ ಕೆಲಸಕ್ಕೆ ಸೆಕ್ಯೂರಿಟಿ. ಡ್ರೈವರ್, ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಆಲನಹಳ್ಳಿ (ನಂದಿನಿ ಬಡಾವಣೆ) ಮೈಸೂರು.
9900515650

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
9632065077/ 9632062077

ಹೋಟೆಲ್ ಕೆಲಸಕ್ಕೆ
ಹುಡುಗರು / ಹೆಂಗಸರು ಬೇಕಾಗಿದ್ದಾರೆ. ಚೈನೀಸ್ ಮಾಸ್ಟರ್ ಮತ್ತು ದೋಸೆ ಕೌಂಟರ್ ಕ್ಯಾಷಿಯರ್, ಪಾರ್ಸಲ್ ಕೌಂಟರ್, ವಾಷಿಂಗ್‌ಗೆ ಬೇಕಾಗಿದ್ದಾರೆ.
Contact : 9606238790 / 8495988764 / 9008253179

ದಾಖಲಾತಿ ಕಳೆದಿದೆ
ಪಿರಿಯಪಟ್ಟಣ ತಾಲೂಕು ಬೆಟ್ಟದಪುರ ಹೋಬಳಿ ತಮ್ಮಡಹಳ್ಳಿ ಗ್ರಾಮದ ಸಿದ್ದರಾಜು ರವರ ಪತ್ನಿ ಶ್ರೀಮತಿ ಭವ್ಯ.ಕೆಟಿ ಆದ ನಾನು ಬೆಂಗಳೂರಿನ ಶ್ರೀನಿಧಿ ಕಾಲೇಜಿನಲ್ಲಿ 2016–17 ಸಾಲಿನಲ್ಲಿ ಬಿ.ಎಡ್ ಪದವಿಯ ಮೊದಲ ವರ್ಷದ ಮೊದಲ ಸೆಮಿಸ್ಟರ್ ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದು ಅಂಕಪಟ್ಟಿ ಸಂಖ್ಯೆ 14YQD13013 ಆಗಿದ್ದು ದಿನಾಂಕ 29–12–2025 ರಂದು ಹುಣಸೂರಿನ ಗೋಕುಲ ರಸ್ತೆಯಲ್ಲಿ ಹೋಗುವಾಗ ಕಳೆದು ಹೋಗಿದೆ ಸಿಕ್ಕಿದವರು ಹುಣಸೂರು ನಗರ ಪೊಲೀಸ್ ಠಾಣೆಗಾಗಲಿ ಅಥವಾ
9663884544
ನಂಬರಿಗೆ ಕರೆ ಮಾಡಿ ತಲುಪಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ

ಬೇಕಾಗಿದ್ದಾರೆ
ವಿಜಯನಗರ 3ನೇ ಹಂತಕ್ಕೆ ಮನೆ ಕೆಲಸ ಮತ್ತು ಮಗುವನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
7022470930 / 8105886004

DOCUMENT LOST
ABSOLUTE SALE DEED (KATHA NO 3670, MYN-1-19731-2012-13) ಸ್ಥಿರ ಸ್ವತ್ತಿನ ಶುದ್ಧ ಕ್ರಯ ಪತ್ರ Site No 44, 44 -MYN-10402) - 2011-22 ಕಳೆದುಹೋದ ಸ್ಥಳ : ಹೂಟಗಳ್ಳಿ, ಸಿಕ್ಕಿದಲ್ಲಿ ಈ ನಂಬರ್‌ಗೆ ಕರೆಮಾಡಿ
9886108739

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಇಂದಿನಿಂದ ಕುಂದೂರು ಜಾತ್ರಾ ಮಹೋತ್ಸವ



ಸರಗೂರು: ತಾಲೂಕಿನ ಕುಂದೂರು ಗ್ರಾಮದಲ್ಲಿ ಶ್ರೀ ಚಿಕ್ಕದೇವಮ್ಮನ ಜಾತ್ರಾ ಮಹೋತ್ಸವ ಶನಿವಾರ(ಜ.3)ದಿಂದ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ. ಇದಕ್ಕಾಗಿ ಮುಜರಾಯಿ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಜ.3ರಂದು ಬೆಳಗ್ಗೆ 5 ಗಂಟೆಗೆ ಬ್ರಾಹ್ಮಿ ಮುಹೂರ್ತದಲ್ಲಿ ಚಿಕ್ಕದೇವಮ್ಮನ ಕುಂದೂರು ಮಾಳದಲ್ಲಿ ರಕ್ತಬೀಜಾಸುರ ಸಂಹಾರ ಮಾಡಿ ಅಮ್ಮನವರು ಸನ್ನಿಧಿಗೆ ದಯಮಾಡಿಸಲಿದ್ದಾರೆ. ನಂತರ ಉತ್ಸವ ಸನ್ನಿಧಿಯಲ್ಲಿ ಪಾರಾಯಣ, ಸಹಸ್ರ ನಾಮಾರ್ಚನೆ, ರಾಜೋಪಚಾರ ಪೂಜೆ, ಪ್ರಸಾದ ವಿನಿಯೋಗ ಇರಲಿದೆ.

ಜ.4ರಂದು ಚಿಕ್ಕದೇವಮ್ಮ ಅಮ್ಮನವರಿಗೆ ವಿಶೇಷ ಪೂಜೆ ಇರಲಿದ್ದು, ರಾತ್ರಿ 10ಕ್ಕೆ ದಡದಹಳ್ಳಿ ಗ್ರಾಮದಲ್ಲಿ ವೃಷಭ ವಾಹನೋತ್ಸವ ಜರುಗಲಿದೆ. 5ರಂದು ಅಮ್ಮನವರಿಗೆ ವಿಶೇಷ ಪೂಜೆ ನಡೆಯಲಿದ್ದು, ಕುಂದೂರು ಗ್ರಾಮದಲ್ಲಿ ಮೆರವಣಿಗೆ ಮುಗಿಸಿ ಬೆಟ್ಟಕ್ಕೆ ಪ್ರಯಾಣ ಬೆಳೆಸಲಿದೆ. ಶಾಸಕ ಅನಿಲ್ ಚಿಕ್ಕಮಾದು, ಬೆಂಗಳೂರಿನ ಹಿಂದೂ ಧಾರ್ಮಿಕ ಸಂಸ್ಥೆಯ ಆಯುಕ್ತರಾದ ಶರತ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಹುಣಸೂರು ಉಪ ವಿಭಾಗದ ಉಪವಿಭಾಗಾಧಿಕಾರಿ ಕಾವ್ಯರಾಣಿ, ತಹಸೀಲ್ದಾರ್ ಮೋಹನ ಕುಮಾರಿ, ಧಾರ್ಮಿಕ ದತ್ತಿ ತಹಸೀಲ್ದಾರ್ ವಿದ್ಯುಲ್ಲತಾ, ಸಿಪಿಐ ಪ್ರಸನ್ನ ಕುಮಾರ್, ಪಿಎಸ್ಐ ಆರ್.ಕಿರಣ್ ಕುಮಾರ್, ಕಾರ್ಯನಿರ್ವಾಹಣಾಧಿಕಾರಿ ಕೆ.ರಘು, ಚಿಕ್ಕದೇವಮ್ಮನ ಬೆಟ್ಟದ ಪಾರುಪತ್ತೇದಾರರಾದ ಶಾಂತಿಮಠ ಮಹದೇವಸ್ವಾಮಿ ಭಾಗವಹಿಸಲಿದ್ದಾರೆ.

ಜಾತ್ರಾ ಸಿದ್ಧತೆ: ಈಗಾಗಲೇ ತಾಲೂಕು ಆಡಳಿತ, ಧಾರ್ಮಿಕ ದತ್ತಿ ಇಲಾಖೆ, ಗ್ರಾಮ ಪಂಚಾಯಿತಿ ಜಾತ್ರಾ ಮಹೋತ್ಸವದ ಯಶಸ್ವಿಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಕುಡಿಯುವ ನೀರು, ಆರೋಗ್ಯ ಸೇವೆಗಳೊಂದಿಗೆ ಇನ್ನಿತರ ಸಿದ್ಧತೆ ನಡೆದಿದೆ. ಇದಲ್ಲದೆ ಸರಗೂರು ಪೊಲೀಸರು ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಂಡಿದ್ದು, ಭಕ್ತರು ಸುಸೂತ್ರವಾಗಿ ದೇವರನ್ನು ಕಣ್ತುಂಬಿಕೊಳ್ಳಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಚಿಕ್ಕದೇವಮ್ಮನ ಬೆಟ್ಟದ ಪಾರುಪತ್ತೇದಾರ ಶಾಂತಿಮಠ ಮಹದೇವಸ್ವಾಮಿ ತಿಳಿಸಿದ್ದಾರೆ.

ಕೃಷಿಕರನ್ನು ಕಾರ್ಮಿಕ ವಲಯಕ್ಕೆ ಸೇರಿಸಿ

ರೈತ ಸಂಘ, ಹಸಿರು ಸೇನೆ ಸಂಸ್ಥಾಪಕ ಅಧ್ಯಕ್ಷ ಕಟ್ಟಿಮನಿ ಆಗ್ರಹ



ಗೌಡಿಕೆರೆಯಲ್ಲಿ ಗ್ರಾಮ ಘಟಕವನ್ನು ಶರಣಪ್ಪ ದೊಡ್ಡಮನಿ ಉದ್ಘಾಟಿಸಿದರು.

ಹನಗೋಡು, ಜ.2– ದೇಶಕ್ಕೆ ಅನ್ನ ನೀಡುವ ಕೃಷಿಕರು ಕೂಡ ಕಾರ್ಮಿಕರಂತೆ ಅಸಂಘಟಿತ ವಲಯಕ್ಕೆ ಸೇರಿದ್ದು, ಕಾರ್ಮಿಕ ವಲಯವೆಂದು ಪರಿಗಣಿಸಿ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ರಾಜ್ಯ ರೈತಸಂಘ ಹಾಗೂ ಹಸಿರುಸೇನೆಯ ಸಂಸ್ಥಾಪಕ ಅಧ್ಯಕ್ಷ ಶರಣಪ್ಪ ಕಟ್ಟಿಮನಿ ಸರಕಾರವನ್ನು ಒತ್ತಾಯಿಸಿದರು.

ಹನಗೋಡು ಹೋಬಳಿಯ ಗೌಡಿಕೆರೆಯಲ್ಲಿ ನೂತನವಾಗಿ ಸ್ಥಾಪಿತವಾದ ರೈತ ಸಂಘದ ಗ್ರಾಮಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು ಕಾರ್ಮಿಕ ವಲಯಕ್ಕೆ ಕೃಷಿಕರನ್ನು ಸೇರಿಸಬೇಕೆಂದು ಈಗಾಗಲೇ ಕಾರ್ಮಿಕ ಸಚಿವ ಸಂತೋಷ್ ಲಾಡ್‌ರೊಂದಿಗೆ ಚರ್ಚಿಸಲಾಗಿದೆ. ನಮ್ಮ ಬೇಡಿಕೆ ಈಡೇರದಿದ್ದಲ್ಲಿ ಬೀದಿಗಿಳಿದು ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಶೇ.40ರಷ್ಟು ಅನುದಾನ ಮೀಸಲಿಡಿ: ಕೃಷಿ ಕ್ಷೇತ್ರದಿಂದ ಸರಕಾರಕ್ಕೆ ತೆರಿಗೆ ರೂಪದಲ್ಲಿ ಪ್ರತಿ ವರ್ಷ ಮೂರು ಲಕ್ಷ ಕೋಟಿ ಆದಾಯ ಬರುತ್ತಿದೆ. ಆದರೆ ರಾಜ್ಯ ಸರಕಾರದ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಕೇವಲ ಶೇ.13ರಷ್ಟು ಮಾತ್ರ ಅನುದಾನ ನೀಡುತ್ತಿದೆ. ಕೃಷಿ ಕ್ಷೇತ್ರ ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದಂತೆ. ಇದನ್ನು ಗಂಭೀರವಾಗಿ ಪರಿಗಣಿಸಿ ಬಜೆಟ್‌ನ ಅನುದಾನವನ್ನು ಶೇ40ಕ್ಕೆ ಹೆಚ್ಚಿಸಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿ, ರೈತರು ರಾಜಕಾರಣಿಗಳಿಂದ ಸಾಧ್ಯವಾದಷ್ಟು ದೂರವಿರಿ. ಕೃಷಿ ವಲಯ ಹಾಗೂ ನಿಮ್ಮೂರಿನ ಸಮಸ್ಯೆಗಳ ಬಗ್ಗೆ ನಿಮ್ಮ ಹೋರಾಟ ನಿರಂತರವಾಗಿದ್ದಲ್ಲಿ ಮಾತ್ರ ನ್ಯಾಯ ಪಡೆಯಲು ಸಾಧ್ಯ, ನಿಮ್ಮ ಹೋರಾಟಕ್ಕೆ ಸದಾ ಬೆಂಬಲ ನೀಡುವೆನೆಂದರು.

ರಾಜ್ಯಾಧ್ಯಕ್ಷ ಮಂಜುನಾಥಗೌಡ, ರಾಜ್ಯ ಯುವ ಘಟಕದ ಅಧ್ಯಕ್ಷ ಸ್ವಾಮಿಗೌಡ ಮಾತನಾಡಿ ರೈತಸಂಘವು ಒಗ್ಗಟ್ಟಿನಿಂದ ನ್ಯಾಯಯುತವಾಗಿ ಹೋರಾಟ ಮಾಡಿದರೆ ಮಾತ್ರ ನ್ಯಾಯ ಪಡೆಯಲು ಸಾಧ್ಯವೆಂದರೆ, ಮುಖಂಡ ಕೆನ್ನಾಳುಮಹದೇವ್ ಮಾತನಾಡಿ 1982ರಲ್ಲಿ ಆರಂಭವಾದ ರೈತ ಸಂಘದ ಹೋರಾಟವು ರಾಜ್ಯದಲ್ಲಿ ಸರಕಾರವನ್ನೇ ಅಲುಗಾಡಿಸಿದೆ. ಆನಂತರ ಪುಟ್ಟಣ್ಣಯ್ಯನವರು ಸಂಘಕ್ಕೆ ದೊಡ್ಡಶಕ್ತಿಯನ್ನು ತುಂಬಿದವರು. ಯುವರೈತರು ಹೋರಾಟಕ್ಕೆ ಹಿಂಜರಿಯಬಾರದು. ನಿತ್ಯ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಂಡು ದೇಶದ ಆಗುಹೋಗುಗಳನ್ನು ಅರಿಯಿರೆಂದರು.

ತಾಲೂಕು ಅಧ್ಯಕ್ಷ ಕಾಮಗೌಡನಹಳ್ಳಿ ತೀರ್ಥಕುಮಾರ್ ಮಾತನಾಡಿ ರೈತ ಸಂಘಟನೆಯಿಂದ ಅನೇಕರ ಸಂಪರ್ಕ ಬೆಳೆಯಲಿದ್ದು, ಕೃಷಿ ಕ್ಷೇತ್ರದ ಆಗುಹೋಗುಗಳು ಹಾಗೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪೂರಕವಾಗಿದೆ ಎಂದರು.

ಸಂಘದ ಜಿಲ್ಲಾಧ್ಯಕ್ಷ ಜಯರಾಮೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಕಾವೇರಮ್ಮ, ರಾಜ್ಯ ಸಂಘದ ಗೌರವಾಧ್ಯಕ್ಷ ನಾಗರಾಜೇಗೌಡ, ಪ್ರಕಾಶ್, ಕೃಷ್ಣಕುಮಾರ್, ವಿಜಯದೇಮಾಜ ಅರಸು, ನಾಗೇಂದ್ರ, ಗ್ರಾಮ ಘಟಕದ ಅಧ್ಯಕ್ಷ ಮಹದೇವಗೌಡ, ಕಂಠಿ ಮಾತನಾಡಿದರು. ಗೌರವಾಧ್ಯಕ್ಷ ಸ್ವಾಮಿಗೌಡ, ಮಲ್ಲೇಶ್, ಮಹಾಶಂಕರ್, ಮಹೇಶ್, ಮಂಜೇಶ್ ನಾಯಕ, ಕೃಷ್ಣನಾಯಕ, ದೇವನಾಯಕ ಇದ್ದರು.

ಭೀಮಾ ಕೋರೆಗಾಂವ್ ವಿಜಯೋತ್ಸವ ದಲಿತರ ಆತ್ಮಗೌರವದ ಸಂಕೇತ



ಹೆಚ್.ಡಿ.ಕೋಟೆಯಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಬೈಕ್ ರ‍್ಯಾಲಿ ನಡೆಯಿತು.

ಹೆಚ್.ಡಿ.ಕೋಟೆ: ಭೀಮ ಕೋರೆಗಾಂವ್ ವಿಜಯೋತ್ಸವದ ಇತಿಹಾಸವು ದಲಿತರ ಆತ್ಮಗೌರವ ಮತ್ತು ಸಾಮಾಜಿಕ ಹೋರಾಟದ ಸಂಕೇತವಾಗಿದೆ ಎಂದು ಅಂತರಸಂತೆ ಬೌದ್ಧ ವಿಹಾರದ ಗೌತಮಿ ಬಂತೆಜೀ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ತಾಲೂಕು ಆದಿ ಕರ್ನಾಟಕ ಮಹಾ ಸಭಾ ವತಿಯಿಂದ ಭೀಮಾ ಕೋರೇಗಾಂವ್ ವಿಜಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಪರವಾಗಿ ಕ್ಯಾಪ್ಟನ್ ಫ್ರಾನ್ಸಿಸ್ ಸ್ಟೌಂಟನ್ ನೇತೃತ್ವದಲ್ಲಿ 500 ಮಹಾರ್ ಸೈನಿಕರು, ಪೇಶ್ವೆ ಎರಡನೇ ಬಾಜಿರಾವ್ ನೇತೃತ್ವದ ಸುಮಾರು 28 ಸಾವಿರ ಸೈನಿಕರ ಬೃಹತ್ ಪಡೆಯನ್ನು ಮಣಿಸಿದರು ಎಂದು ತಿಳಿಸಿದ ಅವರು ಸಣ್ಣ ಪಡೆಯಾಗಿದ್ದರೂ ಮಹಾರ್ ಸೈನಿಕರು ಅಪ್ರತಿಮ ಶೌರ್ಯದಿಂದ ಹೋರಾಡಿ ಪೇಶ್ವೆ ಸೈನ್ಯವನ್ನು ಹಿಮ್ಮೆಟ್ಟಿಸಿದರು. ಈ ವಿಜಯವು ಪೇಶ್ವೆ ಆಳ್ವಿಕೆಯ ಪತನಕ್ಕೆ ಪ್ರಮುಖ ಕಾರಣವಾಯಿತು ಎಂದರು.

ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ಸ್ಮರಣಾರ್ಥವಾಗಿ ಬ್ರಿಟಿಷರು ಕೋರೆಗಾವ್‌ನಲ್ಲಿ 'ವಿಜಯ ಸ್ತಂಭ'ವನ್ನು ಸ್ಥಾಪಿಸಿದರು. ಈ ಸ್ತಂಭದ ಮೇಲೆ ಹೋರಾಡಿ ಪ್ರಾಣತ್ಯಾಗ ಮಾಡಿದ ಮಹಾರ್ ಸೈನಿಕರ ಹೆಸರುಗಳನ್ನು ಕೆತ್ತಲಾಗಿದೆ. 1927ರ ಜ.1 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ಸ್ತಂಭಕ್ಕೆ ಭೇಟಿ ನೀಡುವ ಮೂಲಕ ಈ ಇತಿಹಾಸವನ್ನು ಪುನರುಜ್ಜೀವನಗೊಳಿಸಿದರು ಎಂದರು.

ಅಲ್ಲಿಂದೀಚೆಗೆ ಇದು ದಲಿತರ ಪಾಲಿಗೆ ಶೌರ್ಯ ಭೂಮಿಯಾಗಿ ಮತ್ತು ಸ್ವಾಭಿಮಾನದ ಸಂಕೇತವಾಗಿ ಮಾರ್ಪಟ್ಟಿತು. ಪ್ರತಿ ವರ್ಷ ಜ.1ರಂದು ಲಕ್ಷಾಂತರ ಜನರು ಈ ವಿಜಯ ಸ್ತಂಭಕ್ಕೆ ಭೇಟಿ ನೀಡಿ ಶ್ರದ್ಧಾಂಜಲಿ ಸಲ್ಲಿಸುತ್ತಾರೆ ಎಂದರು.

ವಿಜಯೋತ್ಸವಕ್ಕೂ ಮೊದಲು ಪಟ್ಟಣದ ತಾಲೂಕು ಸ್ಟೇಡಿಯಂ ನಿಂದ ನೀಲಿ ಪಡೆಗಳ ಬೈಕ್ ರ‍್ಯಾಲಿ ಹೊರಟು ಹುಣಸೂರು–ಬೇಗೂರು ರಸ್ತೆಯ ಮೂಲಕ ಸಿದ್ದಾಪ್ಪಾಜಿ ರಸ್ತೆಯಿಂದ ಪಟ್ಟಣದ ಮೊದಲನೆಯ ಮುಖ್ಯ ರಸ್ತೆಯಲ್ಲಿ ಸಾಗಿ ಅಂಬೇಡ್ಕರ್ ಭವನದಲ್ಲಿ ಸಮಾವೇಶಗೊಂಡಿತು.

ತಾಲೂಕು ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಹೈರಿಗೆ ಶಿವರಾಜು, ಪ್ರಧಾನ ಕಾರ್ಯದರ್ಶಿ ಭೀಮನಹಳ್ಳಿ ಸೋಮೇಶ್, ನಂಜಪ್ಪ, ಮಲಾರ ಮಾಹಾದೇವು, ಜಿವಿಕ ಬಸವರಾಜು, ಉಮೇಶ್, ದಸಂಸ ಸಂಚಾಲಕ ಸಣ್ಣಕುಮಾರ್, ಸಾದಶಿವ ಕೋಟೆ, ಲಾರಿ ಪ್ರಕಾಶ್, ಅಕ್ಬರ್ ಪಾಷ, ವೆಂಕಟೇಶ್ ಕೋಟೆ, ಪಾರ್ಥಸಾರಥಿ, ವನಸಿರಿ ಶಂಕರ್, ಆಟೋ ಕುಮಾರ, ಮಟಕೆರೆ ಕೃಷ್ಣ, ಅನುಷಾ ಕೋಟೆ, ಆನಂದ್ ಕೆ.ಜಿ ಹಳ್ಳಿ, ಶಿವರಾಜು ಮಟಕೆರೆ, ಮಹೇಶ್ ಮಟಕೆರೆ, ಆಟೋ ಗೋಪಾಲ್, ರಾಮು, ತೇಜು ಗುರುಮಲ್ಲು ಇತರರು ಭಾಗವಹಿಸಿದ್ದರು.

ರೈತರ ಆರ್ಥಿಕ ಭದ್ರತೆಗಾಗಿ ಸಹಕಾರ ಸಂಘಗಳು ಅಗತ್ಯ



ತಿ.ನರಸೀಪುರ ತಾಲೂಕಿನ ಬಿಳಿಗೆರೆಹುಂಡಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನೂತನವಾಗಿ ಹೊರತಂದಿರುವ ದಿನದರ್ಶಿಕೆಯನ್ನು ಸಂಘದ ಅಧ್ಯಕ್ಷ ಶೇಖರ್ ಬಿಡುಗಡೆಗೊಳಿಸಿದರು

ತಿ.ನರಸೀಪುರ, ಜ.2– ರೈತ ಸಮುದಾಯದ ಆರ್ಥಿಕ ಭದ್ರತೆಗಾಗಿ ಸಹಕಾರ ಸಂಘಗಳ ಸ್ವಯಂ ಶಕ್ತಿ ಮತ್ತು ಸಾಧನೆ ಮುಖ್ಯ ಎಂದು ಬಿಳಿಗೆರೆ ಹುಂಡಿ ಸಹಕಾರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಶೇಖರ್ ತಿಳಿಸಿದರು.

ತಾಲೂಕಿನ ಬಲಿಗೆರೆಹುಂಡಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನೂತನವಾಗಿ ಹೊರತಂದಿರುವ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಸಹಕಾರಿ ಕ್ಷೇತ್ರ ಬಹಳಷ್ಟು ವಿಸ್ತಾರವಾಗಿ ಬೆಳೆದಿದ್ದು, ರೈತರ, ಕೂಲಿ ಕಾರ್ಮಿಕರ ಆರ್ಥಿಕ ಸ್ಥಿತಿ ಸುಧಾರಣೆಗೆ ಬೆನ್ನೆಲುಬಾಗಿ ನಿಂತಿವೆ. ಗ್ರಾಮೀಣ ಜನತೆಗೆ ಕೃಷಿ ಪತ್ತಿನ ಸಹಕಾರ ಸಂಘಗಳು ಅನುಕೂಲವಾಗಿವೆ. ಇವುಗಳಿಂದ ಸಾಲ ಪಡೆದು ರೈತರು ಕೃಷಿ ಚಟುವಟಿಕೆಗೆ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಬೇಕಿದೆ ಎಂದರು.

ಸರ್ಕಾರ ಸಹಕಾರ ಸಂಘದ ಮೂಲಕ ವ್ಯಾಪಾರಸ್ಥರಿಗೆ, ನೂರಾರು ನಮ್ಮ ಸಂಘ ರಚನೆಯಾದ ನಂತರ ಪ್ರಥಮ ಬಾರಿಗೆ ರೈತರಿಗೆ ಕೆಸಿಸಿ ಸಾಲ ಕೃಷಿ ಸಾಲ ನೀಡಿ ಹೆಮ್ಮೆಯಾಗಿದೆ ಎಂದರು. ಆದ್ಯತೆ ನೀಡುವ ಮೂಲಕ ಗ್ರಾಮೀಣ ರೈತರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕೆಲಸ ಎಲ್ಲರೂ ಒಗ್ಗಟ್ಟಾಗಿ ರೈತರ ಅನುಕೂಲಕ್ಕಾಗಿ ಇನ್ನು ಹೆಚ್ಚಿನ ಸಾಲ ನೀಡುವುದಾಗಿ ಭರವಸೆ ನೀಡಿದರು.

ಮುಖ್ಯ ಕಾರ್ಯದರ್ಶಿ ಬಿ.ಸಿದ್ದ ರಾಜು, ಸಂಘದ ಉಪಾಧ್ಯಕ್ಷ ಪಿ.ಚಿನ್ನಬುದ್ದಿ, ನಿರ್ದೇಶಕರಾದ ಎಂಎಸ್ ಮಹದೇವಸ್ವಾಮಿ, (ಮನ್ನೆ ಹುಂಡಿ ಮಹೇಶ್) ಬಸವಣ್ಣ ಎಂ.ವೆಂಕಟೇಶ್, ವಸಂತ, ಗೌರಮ್ಮಣಿ, ಕೆಎಂ ದೇವರಾಜ್, ಅಶ್ವಿನ್, ನಾಗರಾಜು, ರಾಜೀವ್ ಮಹದೇವ್, ನಂಜುಂಡಸ್ವಾಮಿ, ಡೈರಿ ಅಧ್ಯಕ್ಷ ಮಹಾದೇವಸ್ವಾಮಿ, ಶಿವಣ್ಣ, ಶಿವರುದ್ರಗೌಡ ಇದ್ದರು.

ಸಕಾಲದಲ್ಲಿ ಸಾಲ ಪಾವತಿಸಿ, ಸಂಘದ ಅಭಿವೃದ್ಧಿಗೆ ಸಹಕರಿಸಿ



ಅಮ್ಮಾಜಿಕಟ್ಟೆ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಮಹಾಸಭೆ ನಡೆಯಿತು.

ತಿ.ನರಸೀಪುರ, ಜ.2– ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಷೇರುದಾರರು ಪಡೆದ ಸಾಲವನ್ನು ಸಕಾಲದಲ್ಲಿ ಮರು ಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸುವಂತೆ ಕಲಿಯೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಾಲಂಗಿ ಜೆ.ಶಿವಸ್ವಾಮಿ ಮನವಿ ಮಾಡಿದರು.

ತಾಲೂಕಿನ ಅಮ್ಮಾಜಿಕಟ್ಟೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಆಯೋಜಿಸಲಾಗಿದ್ದ ಪ್ರಥಮ ಮಹಾಸಭೆ ಉದ್ಘಾಟಿಸಿ ಮಾತನಾಡಿದರು.

ಯಾವುದೇ ಸಹಕಾರ ಸಂಘಗಳ ಏಳಿಗೆಗೆ ಸಾಲದ ಮರು ಪಾವತಿ ಅವಶ್ಯಕವಾಗಿದೆ. ಸಾಲ ಪಡೆದ ಷೇರುದಾರರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರು ಪಾವತಿಸಿದರೆ ಸಂಘದ ಅಭಿವೃದ್ಧಿಯ ಜೊತೆಗೆ ರೈತರೂ ಸಹ ಇನ್ನೂ ಹೆಚ್ಚಿನ ಸಾಲ ಪಡೆದು ಆರ್ಥಿಕವಾಗಿ ಪ್ರಬಲರಾಗಬಹುದಾಗಿದೆ ಎಂದರು.

ಕಲಿಯೂರು ಸುತ್ತಮುತ್ತಲ ಗಡಿ ಗ್ರಾಮಗಳೆಲ್ಲವೂ ಕಾವೇರಿ ನದಿ ತೀರ ಮತ್ತು ನಾಲೆಗಳ ನೀರಾವರಿ ಸೌಲಭ್ಯವನ್ನು ಹೊಂದಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಕಂಡಿಲ್ಲ. ಈ ಹಿನ್ನೆಲೆಯಲ್ಲಿ ಗಂಭೀರ ಚಿಂತನೆ ಮಾಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸರ್ಕಾರದ ಮಾರ್ಗಸೂಚಿಯಂತೆ ಆರಂಭಿಸಿದ್ದೇವೆ ಎಂದರು.

ಉಪಾಧ್ಯಕ್ಷ ಎಂ.ಎಸ್.ನಟರಾಜಮೂರ್ತಿ ಮಾತನಾಡಿದರು. ಹೆಮ್ಮಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಪ್ರತ್ಯೇಕವಾಗಿ ಕಾರ್ಯಾರಂಭಿಸಿರುವ ಕಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಇತ್ತೀಚೆಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆದಿತ್ತು. ಸಹಕಾರ ಸಂಘಗಳ ಬೈಲಾದಂತೆ ನೂತನ ಸಂಘದ ಪ್ರಥಮ ಮಹಾಸಭೆಯನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಲೋಕೇಶ, ಕೆ.ಪ್ರಭುಸ್ವಾಮಿ, ಬಿ.ನಂಜುಂಡಸ್ವಾಮಿ, ಎಸ್.ಭಾರತಿ, ವಿಜಯಕುಮಾರ್, ಮರಿತಾಯಮ್ಮ, ಪಿ.ಲಕ್ಷ್ಮಣ, ಸಿದ್ದಬಸವಶೆಟ್ಟಿ, ಕೃಷ್ಣ, ಪುಟ್ಟ ನಿಂಗಮ್ಮ ಇತರರಿದ್ದರು.

ಬೈಕ್ ರ‍್ಯಾಲಿ ಮೂಲಕ ಕೋರೆಗಾಂವ್ ವಿಜಯೋತ್ಸವ ಆಚರಣೆ



ಸರಗೂರು ಪಟ್ಟಣದಲ್ಲಿ ಭೀಮಾ ಕೋರೆಗಾಂವ್ ವಿಜಯೋತ್ಸವವನ್ನು ಬೈಕ್ ರ‍್ಯಾಲಿ ನಡೆಸುವ ಮೂಲಕ ಆಚರಿಸಲಾಯಿತು.

ಸರಗೂರು: ಆದಿ ಕರ್ನಾಟಕ ಮಹಾಸಭಾ ತಾಲೂಕು ಘಟಕದಿಂದ ಪಟ್ಟಣದಲ್ಲಿ ಬೈಕ್ ರ‍್ಯಾಲಿ ನಡೆಸುವ ಮೂಲಕ ಮಹಾರ್ ವೀರಯೋಧರ ಭೀಮ ಕೋರೆಗಾಂವ್ 208ನೇ ವರ್ಷದ ವಿಜಯೋತ್ಸವನ್ನು ಆಚರಿಸಲಾಯಿತು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಮುಂಭಾಗ ಜಮಾವಣೆಗೊಂಡ ಆದಿಕರ್ನಾಟಕ ಮಹಾಸಭಾ ಎಲ್ಲಾ ಮುಖಂಡರು ಬೈಕ್ ರ‍್ಯಾಲಿಯಲ್ಲಿ ಹೊರಟು ಪಟ್ಟಣದಲ್ಲಿ ಸಂಚರಿಸಿ ಪಪಂನಲ್ಲಿ ಕೊನೆಗೊಳಿಸಿದರು. ನಂತರ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ಆದಿ ಕರ್ನಾಟಕ ಮಹಾಸಭಾದ ತಾಲೂಕು ಅಧ್ಯಕ್ಷ ಇಟ್ನ ರಾಜಣ್ಣ ಮಾತನಾಡಿ, ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲು, ಕೀಳುಗಳ ವಿರುದ್ಧ ಹೋರಾಡಲು 28 ಸಾವಿರ ಪೇಶ್ವೆಗಳನ್ನು 500 ಮಹಾರ್ ಸೈನಿಕರು ಸೋಲಿಸಿ ವಿಜಯಪತಾಕೆ ಹಾರಿಸಿದ ದಿನವನ್ನು ಕೋರೆಗಾಂವ್ ವಿಜಯೋತ್ಸವವಾಗಿ ದೇಶಾದ್ಯಂತ ಆಚರಣೆ ಮಾಡಲಾಗುತ್ತಿದೆ. ಮಾನವೀಯ ಮೌಲ್ಯಗಳನ್ನು ಪಡೆದುಕೊಳ್ಳಲು ಮುಂದಾದ ಮಹಾರ್ ಸೈನಿಕರ ಧೈರ್ಯ ಸಾಹಸ ಮೆಚ್ಚುವಂತಾಗಿದೆ ಎಂದು ಹೇಳಿದರು.

ಆದಿ ಕರ್ನಾಟಕ ಮಹಾಸಭಾದ ಮಾಜಿ ಅಧ್ಯಕ್ಷ ಶಿವಣ್ಣ ಮಾತನಾಡಿ, ಸ್ವಾಭಿಮಾನ ಮತ್ತು ಆತ್ಮಗೌರವಕ್ಕಾಗಿ ನಡೆದ ಯುದ್ಧವೇ ಭೀಮಾ ಕೋರೆಗಾಂವ್ ಹೋರಾಟ. ಇದು ಚರಿತ್ರಾರ್ಹ ಐತಿಹಾಸಿಕ ವಿಜಯೋತ್ಸವವಾಗಿದೆ ಬ್ರಿಟಿಷರು ಭಾರತ ದೇಶದಲ್ಲಿ ಒಂದೊಂದೇ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ಬರುತ್ತಿದ್ದ ಕಾಲಗಟ್ಟವದು. ಮನುವಾದಿ ಪೇಶ್ವೆಗಳ ದುರಾಡಳಿತದ ವಿರುದ್ಧ ಸಿಡಿದೆದ್ದರು ಎಂದು ತಿಳಿಸಿದರು. ಗೌರವಾಧ್ಯಕ್ಷ ಇದಿಯಪ್ಪ, ಉಪಾಧ್ಯಕ್ಷ ಹಳೆಯೂರು ಚಿನ್ನಯ್ಯ, ಕಾಳಸ್ವಾಮಿ, ಶಿವಣ್ಣ, ಖಜಾಂಚಿ ಶ್ರೀನಿವಾಸ್, ಮುಖಂಡರಾದ ಚಪ್ಪುರ ಮಲ್ಲೇಶ್, ತುಂಬಸೋಗೆ ನಾಗಣ್ಣ, ಶ್ರೀನಿವಾಸ್, ಗ್ರಾಮೀಣ ಮಹೇಶ್, ಸರಗೂರು ಬಿಲ್ಲೇಶ್, ಸಣ್ಣಸ್ವಾಮಿ, ಕೂಡಗಿ ಗೋವಿಂದರಾಜು, ಹುನಗನಹಳ್ಳಿ ಗೋಂವಿದ, ಹಾಲಪ್ಪ ಸೇರಿದಂತೆ ಆದಿ ಕರ್ನಾಟಕ ಮಹಾಸಭಾ ಎಲ್ಲಾ ಮುಖಂಡರು ಇನ್ನಿತರರು ಹಾಜರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು: ತುರ್ತು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಜ.4ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ರೀಡ್ ಅಂಡ್ ಟೈಲರ್ ಕಾರ್ಖಾನೆ, ತಾಲೂಕಿನ ಗೋಳೂರು, ವಿದ್ಯಾಪೀಠ, ಗೀಕಹಳ್ಳಿ, ಹೊರಳವಾಡಿ, ಮುಳ್ಳೂರು, ಬಸವೇಶ್ವರನಗರ, ಆಲಂಬೂರು, ಕುಳ್ಳಂಕನ ಹುಂಡಿ, ಹೊರಳವಾಡಿ ಹೊಸೂರು, ನಗರ್ಲೆ, ಬಿಳಿಗೆರೆ, ಮಲ್ಲೂಪುರ, ಸುತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ಮತ್ತು ದೇವನೂರು ವಿದ್ಯುತ್ ವಿತರಣಾ ಕೇಂದ್ರದ ತಗಡೂರು, ಬದನವಾಳು, ಚುಂಚನಹಳ್ಳಿ, ಘಟ್ಟವಾಡಿಪುರ, ಕಾರ್ಯ, ಅಳಗಂಚಿ, ಹೆಡತಲೆ, ಕೋಣನೂರು, ನೇರಳೆ, ಹೆಮ್ಮರಗಾಲ, ಕವಲಂದೆ ಗ್ರಾಪಂ ವ್ಯಾಪ್ತಿಗಳಲ್ಲಿ ವಿದ್ಯುತ್ ವ್ಯತ್ಯಾಯವಾಗಲಿದೆ.

ಚೆಸ್ ಆಟವಾಡಿ, ತಾಳ್ಮೆ, ಏಕಾಗ್ರತೆ, ಕೌಶಲ್ಯಗಳನ್ನು ಕಲಿಯಿರಿ



ನಂಜನಗೂಡು: ದೇಶದಲ್ಲಿ ಚೆಸ್ ಆಟಕ್ಕೆ ಹೆಚ್ಚಿನ ಮಹತ್ವವಿದ್ದು ಮಕ್ಕಳನ್ನು ಬಾಲ್ಯದಿಂದಲೇ ಆಟಕ್ಕೆ ಪ್ರೇರೇಪಿಸುವ ಮೂಲಕ ತಾಳ್ಮೆ, ಏಕಾಗ್ರತೆ ಹಾಗೂ ಸಮಸ್ಯೆಗಳ ಪರಿಹಾರ ಮತ್ತು ಯೋಜನಾ ಕೌಶಲ್ಯಗಳನ್ನು ಸಿದ್ಧಿಸಿಕೊಳ್ಳುವಂತೆ ನೋಡಿಕೊಳ್ಳಬಹುದಾಗಿದೆ ಎಂದು ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷ ಶ್ರೀನಿವಾಸ ರೆಡ್ಡಿ ತಿಳಿಸಿದರು.

ನಗರದ ಯಾತ್ರೀ ಭವನ್ ಕಲ್ಯಾಣ ಮಂಟಪದಲ್ಲಿ ಸ್ಕೈಲೈನ್ ಚೆಸ್ ಅಕಾಡೆಮಿಯಿಂದ ಆಯೋಜಿಸಿದ್ದ 15 ವರ್ಷ ವಯೋಮಿತಿಯೊಳಗಿನ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು.

ಬಹುಮಾನ ವಿಜೇತರು: 15 ವರ್ಷ ವಿಭಾಗ– ವಿರಾಟ್ ಇಂದ್ರೇಶ್, ರಾಧಾಕೃಷ್ಣ ಭಾರದ್ವಜ್.ಎಸ್(ಬೆಸ್ಟ್ ನಂಜನಗೂಡು) ಹಾಗೂ ಬಾಲಕಿಯರ ವಿಭಾಗದಲ್ಲಿ ಜ್ಞಾನವಿ.

13 ವರ್ಷ ವಿಭಾಗ– ಸ್ಕಂದ ಅಪ್ರಮೇಯ, ಬೆಸ್ಟ್ ನಂಜನಗೂಡು ವಿಭಾಗದಲ್ಲಿ ಜೀವನ್.ಟಿ, ಬಾಲಕಿಯರ ವಿಭಾಗದಲ್ಲಿ ಆಸಿನಿ ಪ್ರಿಯಾ.

11 ವರ್ಷ ವಿಭಾಗ;–ದಿಶಾಂತ್ .ಎನ್, ಬೆಸ್ಟ್ ನಂ.ಗೂಡು ವಿಭಾಗದಲ್ಲಿ ಭವಿತ್ .ಎಸ್, ಬಾಲಕಿಯರ ವಿಭಾಗದಲ್ಲಿ ಮಿಶಿತಾ ಅಭಿಲಾಷ್.

9 ವರ್ಷ ವಿಭಾಗ;–ದೇವಾಂಶ್.ಎಂ, ಬೆಸ್ಟ್ ನಂ.ಗೂಡು ವಿಭಾಗದಲ್ಲಿ ಭುವನ್ ರಾಜ್ .ಎಂ, ಬಾಲಕಿಯರ ವಿಭಾಗದಲ್ಲಿ ಚರಿತಾ ಜೆ.ಎ.

7 ವರ್ಷ ವಿಭಾಗ;– ಸಾತ್ವಿಕ್ ಪಿ.ದೀಕ್ಷಿತ್, ಬೆಸ್ಟ್ ನಂ.ಗೂಡು ವಿಭಾಗದಲ್ಲಿ ಅಥರ್ವ ಜೈನ್, ಬಾಲಕಿಯರ ವಿಭಾಗದಲ್ಲಿ ಯಶಸ್ವಿ ಶರ್ಮಾ

ಇನ್ನು ಉಳಿದಂತೆ ಪಂದ್ಯಾವಳಿಯಲ್ಲಿ ಬೆಸ್ಟ್ ಯಂಗೆಸ್ಟ್ ಚೆಸ್ ಆಟಗಾರ ವೀರ ಸಮರ್ಥ್ ಹಾಗೂ ಬಾಲಕಿಯರ ವಿಭಾಗದಲ್ಲಿ ಮೋಕ್ಷಾ .ಎಂ ಪಡೆದುಕೊಂಡರೆ ಮೈಸೂರಿನ ಶಶಿಧರ್ ಚೆಸ್ ಅಕಾಡೆಮಿಗೆ ಬೆಸ್ಟ್ ಚೆಸ್ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸ್ಕೈಲೈನ್ ಚೆಸ್ ಅಕಾಡೆಮಿ ಸಂಸ್ಥಾಪಕ ಆಕಾಶ್ ಹೆಚ್.ಎ, ಹಿರಿಯ ಪತ್ರಕರ್ತ ಪ್ರಕಾಶ್ ಮಾದೇಗೌಡ ಇದ್ದರು.

ವಿದ್ಯುತ್ ಅವಘಡದಲ್ಲಿ ಗಾಯಗೊಂಡಿದ್ದ ಕೆಪಿಟಿಸಿಎಲ್ ಸಹಾಯಕ ಇಂಜಿನಿಯರ್ ಸಾವು



ಹುಣಸೂರು, ಜ.2– ವಿದ್ಯುತ್ ಅವಘಡದಿಂದ ತೀವ್ರವಾಗಿ ಗಾಯಗೊಂಡಿದ್ದ ಸಹಾಯಕ ಇಂಜಿನಿಯರ್ ಒಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಹುಣಸೂರಿನ ಕೆಪಿಟಿಸಿಎಲ್‌ನ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಸ್.ಆನಂದ್ (43) ಎಂಬುವರೇ ದುರಂತದಲ್ಲಿ ಸಾವನ್ನಪ್ಪಿದವರಾಗಿದ್ದಾರೆ.

ಡಿ.9ರಂದು ವಿತರಣಾ ಕೇಂದ್ರದಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದ್ದ ವೇಳೆ ಆಕಸ್ಮಿಕ ವಿದ್ಯುತ್ ಅವಘಡ ಸಂಭವಿಸಿ ಆನಂದ್ ತೀವ್ರ ಸುಟ್ಟಗಾಯಗಳಿಂದ ಅಸ್ವಸ್ಥಗೊಂಡಿದ್ದರು. ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಸಾವನ್ನಪ್ಪಿದ್ದಾರೆ.

ದಿವಂಗತರು ತಂದೆ–ತಾಯಿ, ಓರ್ವ ಸಹೋದರ, ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಂತರ ಸ್ವಗ್ರಾಮ ಧರ್ಮಾಪುರದ ಅವರ ಜಮೀನಿನಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಅಂತ್ಯಕ್ರಿಯೆಯಲ್ಲಿ ಕೆಪಿಟಿಸಿಎಲ್ ಹಾಗೂ ಚೆಸ್ಕಾಂನ ಹಿರಿಯ ಅಧಿಕಾರಿಗಳು, ಸಹೋದ್ಯೋಗಿಗಳು, ಸಿಬ್ಬಂದಿ, ವಿದ್ಯುತ್ ಗುತ್ತಿಗೆದಾರು ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಚುಂಚನಕಟ್ಟೆ ಜಾನುವಾರು ಜಾತ್ರೆ ಆರಂಭ

80 ಸಾವಿರದಿಂದ 8 ಲಕ್ಷ ರೂ. ಮೌಲ್ಯದವರೆಗಿನ ರಾಸುಗಳ ಆಗಮನ



ಚುಂಚನಕಟ್ಟೆ ಜಾತ್ರೆಯಲ್ಲಿ ಜನರನ್ನು ಆಕರ್ಷಿಸುತ್ತಿರುವ ಹೋರಿಗಳು.





ಚುಂಚನಕಟ್ಟೆ ಜಾನುವಾರು ಮತ್ತು ಜನಗಳ ಜಾತ್ರೆಯಲ್ಲಿ ತಲೆ ಎತ್ತಿರುವ ಅಂಗಡಿ ಮುಂಗಟ್ಟುಗಳು, ಜಾತ್ರೆಯಲ್ಲಿ ಗಮನ ಸೆಳೆಯುತ್ತಿರುವ ಎತ್ತುಗಳು.

ಚುಂಚನಕಟ್ಟೆ ಜ.2–ಎಲ್ಲಿ ನೋಡಿದರೂ ದೇಶಿ ತಳಿಯ ಗೋ ಸಂಪತ್ತಿನ ದರ್ಬಾರ್, ಶ್ರೀಮಂತ ರೈತರ ವೈಭೋಗದ ರಾಸುಗಳಿಗೆ ಶೃಂಗಾರಗೊಂಡ ಚಪ್ಪರ, ಜಾನುವಾರು ಕೊಳ್ಳುವ, ಮಾರಾಟ ಮಾಡುವ ಭರ್ಜರಿ ಭರಾಟೆ, ಜಾತ್ರೆ ನೋಡಲು ಹರಿದು ಬರುತ್ತಿರುವ ಜನಸಾಗರ

ಇದು ದಕ್ಷಿಣ ಭಾರತದಲ್ಲಿ ಹೆಸರು ವಾಸಿಯಾಗಿರುವ ಸಾಲಿಗ್ರಾಮ ತಾಲೂಕು ಚುಂಚನಕಟ್ಟೆಯಲ್ಲಿ ಜ.1 ರಿಂದ ಆರಂಭವಾಗಿರುವ ಗ್ರಾಮೀಣ ಸೊಗಡಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾನುವಾರು ಜಾತ್ರೆಯ ದೃಶ್ಯ ವೈಭವಗಳು. ಜಾನುವಾರುಗಳ ಜಾತ್ರೆಯು ಜ.9ರವರೆಗೆ ನಡೆಯಲಿದ್ದು, ಜ.24ರವರೆಗೆ ಜನರ ಜಾತ್ರೆ ನಡೆಯಲಿದೆ.

80 ಸಾವಿರ ರೂ.ಗಳಿಂದ ಪ್ರಾರಂಭವಾಗಿ 8 ಲಕ್ಷಕ್ಕೂ ಅಧಿಕ ಬೆಲೆಬಾಳುವ ದುಬಾರಿ ಎತ್ತುಗಳು ಜಾತ್ರೆಯಲ್ಲಿ ಜನಾ ಕರ್ಷಣೆಯ ಕೇಂದ್ರ ಬಿಂದುವಾಗಿದ್ದು ಪಶು ಸಂಗೋಪನೆ ಇಲಾಖೆ ಮಾಹಿತಿ ಪ್ರಕಾರ ಸುಮಾರು 30 ಸಾವಿರಕ್ಕೂ ಅಧಿಕ ಜಾನು ವಾರುಗಳು ಆಗಮಿಸಲಿದ್ದು ರೈತರು ತಮ್ಮ ರಾಸುಗಳ ಮೇಲಿರುವ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ರಾಸುಗಳಿಗೆ ಬೃಹತ್ ಶಾಮಿಯಾನ, ವಿದ್ಯುತ್ ಅಲಂಕಾರಿಕ ಚಪ್ಪರ ಹಾಕಿಸಿದ್ದಾರೆ.

ಕೃಷಿಗೆ ಯಂತ್ರೋಪಕರಣಗಳ ಬಳಕೆ ಇದ್ದರೂ, ರೈತರಿಗೆ ಜೋಡೆತ್ತುಗಳ ಮೇಲೆ ಪ್ರೀತಿ ಕಡಿಮೆಯಾಗಿಲ್ಲ. 'ಗಂಡು ರಾಸುಗಳ ಜತ್ರೆ' ಎಂದೇ ಹೆಸರು ಪಡೆದಿರುವ ಈ ಜಾತ್ರೆಯಲ್ಲಿ ಎತ್ತುಗಳು ಭಾಗವಹಿಸುವಿಕೆ ಮಾತ್ರವಲ್ಲದೆ ಹೋರಿಗಳು, ಹೆಚ್ಚು ದುಡಿಮೆಗೆ ಒಗ್ಗುವ ಹಳ್ಳಿಕಾರ್ ತಳಿಯ ಎತ್ತುಗಳು ಪ್ರಮುಖ ಆಕರ್ಷಣೆಯಾಗಿವೆ.

ಜಾತ್ರೆಗೆ ರಾಸುಗಳನ್ನು ಕೊಳ್ಳಲು ಗದಗ, ಹುಬ್ಬಳ್ಳಿ, ಧಾರವಾಡ, ಕಲಬುರುಗಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಹಾಗೂ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ಕಡೆಯಿಂದಲೂ ರೈತರು ಬರುತ್ತಿದ್ದು, ಕೋಟ್ಯಾಂತರ ರೂ.ಗಳ ವ್ಯವಹಾರ ನಡೆಯಲಿದ್ದು ನಾಳೆಯಿಂದ ಇದು ಇನ್ನಷ್ಟು ಹೆಚ್ಚಲಿದೆ

ಶಾಸಕ ಡಿ.ರವಿಶಂಕರ್ ಅವರ ಸೂಚನೆಯ ಮೇರೆಗೆ ಕುಪ್ಪೆ ಗ್ರಾ.ಪಂ.ನವರು ಕುಡಿಯುವ ನೀರು, ಸ್ವಚ್ಛತೆ ನಿರ್ವಹಣೆಯ ಜವಾಬ್ದಾರಿ ಹೊತ್ತು ಜಾತ್ರೆಯಲ್ಲಿ ಇವುಗಳ ನಿರ್ವಹಣೆಗಾಗಿ ಶ್ರಮಿಸುತ್ತಿದ್ದು, ಇದು ಜೊತೆ ರಾಸುಗಳಿಗೆ ಯಾವುದೇ ರೋಗ ರುಜಿನಗಳು ಬಾರದಂತೆ ಕೆಆರ್.ನಗರ ಪಶು ಇಲಾಖೆಯ ಸಹಾಯಕ ನಿರ್ದೇಶಕ ಡಾ.ಕೆ.ಸಿ.ರಾಮು ನೇತೃತ್ವದಲ್ಲಿ ತಾತ್ಕಾಲಿಕ ಪಶು ಕೇಂದ್ರವನ್ನು ಆರಂಭಿಸಲಾಗಿದೆ. ಇನ್ನು ಕೆ.ಆರ್.ನಗರ ಚೆಸ್ಕಾಂ ಎಇಇ ಅರ್ಕೇಶ್ ಮೂರ್ತಿ ಅವರ ನೇತೃತ್ವದಲ್ಲಿ ಹೊಸೂರು ಚೆಸ್ಕಾಂ ಇಂಜಿನಿಯರ್ ಮಹದೇವ್ ಮತ್ತು ಸಿಬ್ಬಂದಿಗಳನ್ನು ಜಗಮಗಿಸುವ ವಿದ್ಯುತ್ ಅಲಂಕಾರದ ಮೆರಗು ತಂದು ಜಾತ್ರೆಗೆ ಕಳೆ ತಂದಿದ್ದಾರೆ


ಭರ್ಜರಿ ವ್ಯಾಪಾರ...

ಜಾತ್ರೆಯಲ್ಲಿ ಸಿಹಿತಿಂಡಿ, ಜ್ಯೂಸ್, ಪಾನಿಪುರಿ, ಗೋಬಿಯ ಜೊತೆಗೆ ರೈತರಿಗೆ ಅತ್ಯವಶ್ಯಕವಾಗಿರುವ ನೊಗ, ಒನಕೆ ಸೇರಿದಂತೆ ವಿವಿಧ ಬಗೆಯ ಆಟಿಕೆಗಳ ಅಂಗಡಿ ಮುಂಗಟ್ಟು ಮತ್ತು ವಿವಿಧ ಬಗೆಯ ಸಸ್ಯಹಾರಿ ಮತ್ತು ಮಾಂಸಹಾರ ಹೋಟೆಲ್‌ಗಳಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿದೆ. ಗ್ರಾಮೀಣ ಪರಂಪರೆಯ ನಡುವೆಯೂ ಇಲ್ಲಿನ ಜಾನುವಾರು ಜಾತ್ರೆಯ ಸೊಬಗನ್ನು ಕಣ್ತುಂಬಿಕೊಳ್ಳಲು ಮತ್ತು ಶ್ರೀರಾಮದೇವರ ದೇವಾಲಯ, ಕಾವೇರಿ ನದಿಯ ಜಲಪಾತ, ಜಾತ್ರೆಯ ತಿಂಡಿ ತಿನಿಸುಗಳನ್ನು ಸವಿಯಲು ಇಲ್ಲಿಗೆ ನೀವೂ ಒಮ್ಮೆ ಬರಬೇಕು. ಅದಕ್ಕಾಗಿ ಕೈಬೀಸಿ ಕರೆಯುತ್ತಿದೆ. ಚುಂಚನ ಕಟ್ಟೆ ಜಾನುವಾರು ಜಾತ್ರೆ.

ಮೈಸೂರು ಮಿತ್ರ

ಮೈಸೂರು ಪತ್ರಿಕಾ ವಿತರಕರ ಸಂಘದ ಕ್ಯಾಲೆಂಡರ್ ಬಿಡುಗಡೆ

ಕೇಂದ್ರ ಯೋಜನೆಯಡಿ ಪತ್ರಿಕಾ ವಿತರಕರು, ಹಾಲು ಹಾಕುವವರಿಗೆ ನೆರವು; ಎಸ್.ಎ.ರಾಮದಾಸ್




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾಜಿ ಸಚಿವ ಎಸ್.ಎ.ರಾಮದಾಸ್ ಮೈಸೂರು ನಗರ ಪತ್ರಿಕಾ ವಿತರಕರ ಸಂಘ ಪ್ರಕಟಿಸಿರುವ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಇದೇ ವೇಳೆ ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ವತಿಯಿಂದ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.2(ಎಂಟಿವೈ)– ಮೈಸೂರು ನಗರ ಪತ್ರಿಕಾ ವಿತರಕರ ಸಂಘ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ಇಂದು ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಪತ್ರಿಕಾ ವಿತರಕರ ಸಂಘ ಪ್ರಕಟಿಸಿರುವ ಕ್ಯಾಲೆಂಡರ್‌ನಲ್ಲಿ ಮೊದಲ ಪುಟದಲ್ಲಿ ಮೈಸೂರಿನ ಪತ್ರಿಕಾ ರಂಗಕ್ಕೆ ಅಪಾರ ಕೊಡುಗೆ ನೀಡಿರುವ ಡಾ. ಕೆ.ಬಿ.ಗಣಪತಿ ಅವರ ಭಾವಚಿತ್ರ ಮುದ್ರಿಸಿ ಹಲವಾರು ವಿಚಾರವನ್ನು ಹಂಚಿಕೊಂಡಿರುವುದು ಶ್ಲಾಘನೀಯ. ಪತ್ರಿಕಾ ರಂಗದಲ್ಲಿ ನಿರ್ಭೀತಿಯಿಂದ, ನಿಷ್ಪಕ್ಷಪಾತವಾಗಿ ಕೆಬಿಜಿ ಅವರು ನಡೆದು ಕೊಂಡರು. ನಮಗೆಲ್ಲಾ ಆದರ್ಶಪ್ರಾಯರಾಗಿದ್ದರು ಎಂದು ಸ್ಮರಿಸಿದರು.

ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಮೈಸೂರಿನಲ್ಲಿ ಪತ್ರಿಕಾ ವಿತರಕರ ಸಂಘ ಆರಂಭವಾಯಿತು. 20 ವರ್ಷದ ಹಿಂದೆ ನನ್ನ ಗೌರವಾಧ್ಯಕ್ಷತೆಯಲ್ಲಿ ಆರಂಭಗೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಶ್ಲಾಘಿಸಿದರು.

ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನನಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಶ್ವಕರ್ಮ ಯೋಜನೆ, ಸ್ವನಿಧಿ ಯೋಜನೆ ಜಾರಿಗೊಳಿಸುವ ಜವಾಬ್ದಾರಿ ನೀಡಿದರು. ಈ ಯೋಜನೆಯಲ್ಲಿ ಹಲವು ಅಸಂಘಟಿತ ವರ್ಗಗಳನ್ನು ಸೇರಿಸಲಾಗಿತ್ತು. ಆದರೆ, ಪತ್ರಿಕಾ ವಿತರಕರು ಹಾಗೂ ಮನೆ ಮನೆಗೆ ಹಾಲು ಹಾಕುವವರನ್ನು ಸೇರಿಸಿರಲಿಲ್ಲ. ನಾನು ಈ ಎರಡೂ ಯೋಜನೆಗೆ ಪತ್ರಿಕಾ ವಿತರಕರು ಮತ್ತು ಹಾಲು ಹಾಕುವವರನ್ನು ಸೇರಿಸುವಂತೆ ಮನವಿ ಮಾಡಿದೆ. ಅದಕ್ಕೆ ಪ್ರಧಾನಿ ಮಂತ್ರಿ ಒಪ್ಪಿಗೆ ಸೂಚಿಸಿದರು.

ರಾಜ್ಯದಾದ್ಯಂತ ಪ್ರವಾಸ ಮಾಡಿ, 150 ತಾಲೂಕುಗಳಲ್ಲಿ 5338 ಮಂದಿ ಪತ್ರಿಕಾ ವಿತರಕರನ್ನು ಸ್ವನಿಧಿ ಯೋಜನೆಗೆ ನೋಂದಾಯಿಸಲಾಗಿದೆ. ಇದರಿಂದ ಹಲವು ಮಂದಿ ಈ ಯೋಜನೆಯ ಸವಲತ್ತು ಪಡೆದಿದ್ದಾರೆ. ಅಲ್ಲದೆ, 2 ಲಕ್ಷದವರೆಗೆ ವಿಮೆ ಸಹ ದೊರಕುತ್ತಿದೆ. ಕಟ್ಟಕಡೆಯ ವ್ಯಕ್ತಿಯೂ ಯೋಗಕ್ಷೇಮದಿಂದ ಇರಬೇಕೆಂಬ ಹಂಬಲದಿಂದ ಈ ಯೋಜನೆಗೆ ಪತ್ರಿಕಾ ವಿತರಕರು, ಹಾಲು ಹಾಕುವವರನ್ನು ಸೇರಿಸಲಾಗಿದೆ ಎಂದು ತಿಳಿಸಿದರು.

ಇದೆ ವೇಳೆ ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ ಮಾತನಾಡಿ, ಮೈಸೂರಿನ ಪತ್ರಿಕಾ ವಿತರಕರಿಗೆ ಪತ್ರಿಕೆ ವಿಂಗಡಿಸಿಕೊಳ್ಳಲು ಸೂಕ್ತ ಜಾಗವಿಲ್ಲವೆಂಬುದರ ಅರಿವಿದೆ. ಹೀಗಾಗಿ ನಗರದಲ್ಲಿನ ಎಲ್ಲ ಪತ್ರಿಕಾ ವಿತರಕರು ಸಹಮತ ವ್ಯಕ್ತಪಡಿಸಿದಲ್ಲಿ ಕಾಡಾ ಕಚೇರಿ ಆವರಣ, ನೀರಾವರಿ ಇಲಾಖೆ ಕಚೇರಿ ಬಳಿ ಸೂಕ್ತ ಆಶ್ರಯದಾಣ ಕಲ್ಪಿಸಿಕೊಡಲಾಗುವುದು. ಪತ್ರಿಕಾ ವಿತರಕರು ಸಾಧ್ಯವಾದರೆ ಗುಂಪು ವಿಮೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸುರೇಶ್, ಪದಾಧಿಕಾರಿಗಳಾದ ಸುಂದರ್, ಲೋಕೇಶ್ ಇನ್ನಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಅಖಂಡ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	3 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ಅಖಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಜ.5ರಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ



ಮೈಸೂರು, ಜ.2(ಬಿಎಲ್‌ಯು)– ಎರಡು ದಿನಗಳ ಪ್ರವಾಸ ಹಮ್ಮಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನವರಿ 5ರಂದು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಅಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಅವರು 10.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತರುವಾಯ ಕಲಾಮಂದಿರದಲ್ಲಿ ನಡೆಯುವ ಶ್ರೀ ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರರ ಸಂಘದ 75 ನೇ ವರ್ಷದ ಅಮೃತ ಮಹೋತ್ಸವ ಸಮಾರಂಭದಲ್ಲಿ ಭಾಗಿಯಾಗುವರು.

ಅಂದು ಮೈಸೂರಿನಲ್ಲೇ ವಾಸ್ತವ್ಯ ಹೂಡುವ ಸಿದ್ದರಾಮಯ್ಯ, ಜನವರಿ 6ರಂದು ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ದಲಿತ ಸಂಘಟನೆಗಳ ಒಕ್ಕೂಟ ಆಯೋಜಿಸಿರುವ ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗಿಯಾಗುವರು. ಬಳಿಕ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ.ರಮೇಶ್ ಬಿಡುಗಡೆ ಮಾಡಿದರು. ಸಂಘದ ಪಿ.ರಾಘವೇಂದ್ರ ಮತ್ತಿತರರಿದ್ದರು.

ಬಾಲಯೇಸು ದೇವಾಲಯದ ವಾರ್ಷಿಕೋತ್ಸವ; ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು, ಜ.2(ಎಂಕೆ)– ಮೈಸೂರಿನ ನಾಯ್ಡುನಗರದಲ್ಲಿರುವ ಪುಷ್ಪಾಶ್ರಮದ ಬಾಲಯೇಸು ದೇವಾಲಯ(ಚರ್ಚ್)ದ ವಾರ್ಷಿಕೋತ್ಸವದ ಅಂಗವಾಗಿ ಜ.4ರಂದು ಸಂಜೆ 4.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಡಾ.ಎಸ್.ಜೆ. ಫ್ರಾನ್ಸಿಸ್ ಸೆರಾವೋ ಅವರ ನೇತೃತ್ವದಲ್ಲಿ ಪ್ರಾರ್ಥನಾ ಕಾರ್ಯಕ್ರಮಗಳು ನಡೆಯಲಿದ್ದು, ಪೂರ್ವ ಸಿದ್ಧತೆಗಾಗಿ ಜ.3ರಂದು ಬೆಳಗ್ಗೆಯಿಂದ ಸಂಜೆಯವರೆಗೂ ಪ್ರಾರ್ಥನೆ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನೆರವೇರಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ನೋಂದಣಿ ಸಂಬಂಧ ಪರೀಕ್ಷಾ, ಮೌಲ್ಯ ನಿರ್ಣಯ ಮಂಡಳಿ ಆದೇಶ ಹಿಂದಕ್ಕೆ



ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ಸದನ ಸಮಿತಿಯ ಸಭೆ ನಡೆಯಲಾಯಿತು.

ಮೈಸೂರು, ಜ.2(ಜಿಎ)–ಮಾನ್ಯತೆ ನವೀಕರಣವಾದ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿಗೆ ನೋಂದಣಿಗೆ ಸಂಬಂಧಿಸಿದಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2026ರ ಪರೀಕ್ಷೆ–1ರ ತಾತ್ಕಾಲಿಕ ಪ್ರವೇಶ ಪತ್ರವನ್ನು ಬಿಡುಗಡೆಗೊಳಿಸಬೇಕಾಗಿದ್ದು, 2025–26ನೇ ಸಾಲಿಗೆ ಇನ್ನೂ ಕೆಲವು ಶಾಲೆಗಳು ಮಾನ್ಯತೆ ನವೀಕರಣವಾಗದಿರುವುದು ಕಂಡು ಬಂದಿರುವ ಕಾರಣ ಈ ಸಂಬಂಧ 2025–26ನೇ ಸಾಲಿಗೆ ಮಾನ್ಯತೆ ನವೀಕರಣವಾಗದ ಶಾಲೆಗಳನ್ನು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಈಗಾಗಲೇ ಹಂಚಿಕೆ ಮಾಡಿರುವ ಕ್ಲಸ್ಟರ್ ವಲಯದ ಪರೀಕ್ಷಾ ಕೇಂದ್ರದಲ್ಲಿ ಸರ್ಕಾರಿ ಅಥವಾ ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲೆಗಳ ಮೂಲಕ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ಕ್ಕೆ ಹಾಜರುಪಡಿಸಲು ಕ್ರಮವಹಿಸಬೇಕು. ಈ ಸಂಬಂಧ ಡಿ.30ರೊಳಗೆ ಮಾಹಿತಿ ನೀಡುವಂತೆ ಆದೇಶ ಹೊರಡಿಸಲಾಗಿತ್ತು.

ಈ ಆದೇಶವನ್ನು ವಿರೋಧಿಸಿ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಕಾಯ್ದೆ 1966 ಪ್ರಕಾರ ಮಾನ್ಯತೆ ಪಡೆದ ಪ್ರೌಢಶಾಲೆಗಳ ವಿದ್ಯಾರ್ಥಿಗಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೊಂದಾಯಿಸಲು ಅವಕಾಶ ವಿರುತ್ತದೆ. ಮಾನ್ಯತೆ ನವೀಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸದನ ಸಮಿತಿ ರಚನೆಯಾಗಿದ್ದು, ಸಮಿತಿ ಸಭೆಯಲ್ಲಿ ಮಾನ್ಯತೆ ಪಡೆದಿರುವ ಮತ್ತು ನಾನಾ ಕಾರಣಗಳಿಂದ ಮಾನ್ಯತೆ ಪಡೆಯದಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಂದ ಅದೇ ಶಾಲೆಯಲ್ಲಿ ಪರೀಕ್ಷೆ ಬರೆಸಲು ಅವಕಾಶ ನೀಡಬೇಕೆಂದು ಸಮಿತಿ ನಿರ್ದೇಶನವಿದ್ದರೂ ಈ ರೀತಿಯ ಆದೇಶ ಹೊರಡಿಸಿರುವುದು ಸರಿಯಲ್ಲ. ಪ್ರಸ್ತುತ ಯಾವ ಶಾಲೆಯಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಅದೇ ಶಾಲೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಸಂಬಂಧಿಸಿದವರಿಗೆ ಆದೇಶ ಮಾಡಿ. ಈಗಾಗಲೇ ನೀಡಿರುವ ಆದೇಶವನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ನಾನು ಸಹ ಸದನ ಸಮಿತಿಯ ಸದಸ್ಯನಾಗಿ ಮಂಡಳಿ ಮುಂದೆ ಆದೇಶ ವಾಪಸ್ ಪಡೆಯುವವರೆಗೆ ಧರಣಿ ಮಾಡುತ್ತೇನೆ ಎಂದು ಪತ್ರದ ಮೂಲಕ ಆಗ್ರಹಿಸಿದ್ದರು.

ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸದನ ಸಮಿತಿಯ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕಾನಂದರು ಮತ್ತು ಬೋಜೇಗೌಡರು ಈ ವಿಷಯವನ್ನು ಪ್ರಸ್ತಾಪಿಸಿ ಇದಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿ ಹೊರಡಿಸಿದ ಸುತ್ತೋಲೆಯನ್ನು ಹಿಂಪಡೆಯುವಂತೆ ಸಭೆಯಲ್ಲಿ ಕೋರಿಕೊಳ್ಳಲಾಗಿತ್ತು. ಇದಕ್ಕೆ ಪುಟ್ಟಣ್ಣನವರು ಸಹಮತ ವ್ಯಕ್ತಪಡಿಸಿ ಸುತ್ತೋಲೆಯನ್ನು ಹಿಂಪಡೆಯಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜ.2– ವಿಜಯನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಜ.4 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಯಾದವಗಿರಿ ಕೈಗಾರಿಕಾ ಪ್ರದೇಶ, ಮಂಜುನಾಥಪುರ, ಜಾವಾ ಸರ್ಕಲ್, ಜಾಯ್ ಐಸ್ ಕ್ರೀಮ್ ಫ್ಯಾಕ್ಟರಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಸ್ವಚ್ಛತಾ ದೃಷ್ಟಿಯಿಂದ

ರಸ್ತೆ ಬದಿ ವ್ಯಾಪಾರಿಗಳ ವಲಯ ಸ್ಥಾಪನೆಗೆ ಸಂಸದ ಯದುವೀರ್ ಸೂಚನೆ



ಮೈಸೂರು ನಗರಪಾಲಿಕೆ ಸಭಾಂಗಣದಲ್ಲಿ ಸಂಸದ ಯದುವೀರ್, ಬೀದಿ ಬದಿ ವ್ಯಾಪಾರಿಗಳು ಮತ್ತು ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದರು

ಮೈಸೂರು, ಜ.2(ಎಂಕೆ)– ಮೈಸೂರಿನ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಬೀದಿ ಬದಿ ವ್ಯಾಪಾರಿಗಳ ವಲಯ ಸ್ಥಾಪಿಸುವಂತೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೂಚಿಸಿದರು.

ಮೈಸೂರು ನಗರಪಾಲಿಕೆ ಸಭಾಂಗಣದಲ್ಲಿ ಶುಕ್ರವಾರ ಬೀದಿ ಬದಿ ವ್ಯಾಪಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಬೀದಿ ಬದಿ ವ್ಯಾಪಾರಿಗಳಿಗೆ ಪೂರಕವಾದ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ ಎಂದರು.

ಮೈಸೂರಿನ ಸ್ವಚ್ಛತಾ ನಿರ್ವಹಣೆ ದೃಷ್ಟಿಯಿಂದ ಬೀದಿ ಬದಿ ವ್ಯಾಪಾರಿಗಳಿಗೂ ತೊಂದರೆಯಾಗದಂತೆ ವ್ಯಾಪಾರಿಗಳ ವಲಯಗಳನ್ನು ಅಭಿವೃದ್ಧಿ ಪಡಿಸಲು ಅಧಿಕಾರಿಗಳು ಯೋಜನೆ ರೂಪಿಸಬೇಕು. ಈ ಮೂಲಕ ನಗರದಲ್ಲಿ ಸುರಕ್ಷತೆಯನ್ನು ಖಚಿತಪಡಿಸಬೇಕು. ವಲಯಗಳನ್ನು ರಚಿಸುವ ಪ್ರಕ್ರಿಯೆಯಲ್ಲಿಯೂ ವ್ಯಾಪಾರಿಗಳಿಗೆ ತೊಂದರೆಯಾಗಬಾರದು ಎಂದು ಸೂಚನೆ ನೀಡಿದರು.

ಮೈಸೂರು ಸ್ವಚ್ಛತೆ ಮತ್ತು ಪರಂಪರೆಯನ್ನು ಹೊಂದಿರುವ ನಗರವಾಗಿದೆ. ಈ ನಿಟ್ಟಿನಲ್ಲಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸುವ ಮೂಲಕ ಮೈಸೂರಿನ ಪರಂಪರೆಯನ್ನು ಕಾಪಾಡಬೇಕಿದೆ. ಅಲ್ಲದೆ ಕಾರ್ಯಾನುಷ್ಠಾನವೂ ಆಗಬೇಕಿದೆ ಎಂದು ಹೇಳಿದರು.

ವಿಶೇಷ ಸಂದರ್ಭಗಳಲ್ಲಿ ಅವಕಾಶ: ಮೈಸೂರು ದಸರಾ, ಆಷಾಢಮಾಸ, ಇನ್ನಿತರೆ ರಥೋತ್ಸವಗಳ ಸಂದರ್ಭದಲ್ಲಿ ನಗರದಲ್ಲಿ ಜನದಟ್ಟಣೆ ಹೆಚ್ಚಳವಾದಾಗ ವ್ಯಾಪಾರಿಗಳ ವಲಯ ಹೆಚ್ಚು ಉಪಯುಕ್ತವಾಗಲಿವೆ. ಅಲ್ಲದೆ ಅಧಿಕಾರಿಗಳೊಂದಿಗೆ ವ್ಯಾಪಾರಿಗಳ ವಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮತ್ತಿತರರಿದ್ದರು.

ಇಂದಿನಿಂದ ಅಂಡರ್–14 ಅಂತರ ವಲಯ ಕ್ರಿಕೆಟ್ ಪಂದ್ಯಾವಳಿ

ಮೈಸೂರು ವಲಯ ಪ್ರತಿನಿಧಿ ಸಲ್ಲಿಸಿರುವ ನಿಖಿಲ್ ಜಿ.ಚೇತನ್



ನಿಖಿಲ್ ಜಿ.ಚೇತನ್

ಮೈಸೂರು, ಜ.2(ಎಂಕೆ)– ಬೆಂಗಳೂರಿನಲ್ಲಿ ನಾಳೆ(ಜ.3)ಯಿಂದ ಜ.14ರವರೆಗೆ ನಡೆಯುವ ಕೆಎಸ್‌ಸಿಎ(ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ) ಅಂಡರ್–14 ಅಂತರ ವಲಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆಎಸ್‌ಸಿಎ ಮೈಸೂರು ರೈನೋಸ್ ತಂಡವನ್ನು ನಿಖಿಲ್ ಜಿ.ಚೇತನ್ ಮುನ್ನಡೆಸಲಿದ್ದಾರೆ.

ಮೈಸೂರು ವಲಯವು ರಾಯಚೂರು ವಲಯ, ಬೆಂಗಳೂರು ವಲಯ, ಸಂಯೋಜಿತ ನಗರ ಇಲವೆನ್, ಮಂಗಳೂರು ವಲಯ ಮತ್ತು ಕಾರ್ಯದರ್ಶಿ ಇಲವೆನ್ ಜೊತೆಗೆ 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಬೆಂಗಳೂರಿನ ಬಿಜಿಎಸ್(ಟಿ) ಮೈದಾನದಲ್ಲಿ ನಾಳೆ(ಜ.3) ಬೆಂಗಳೂರು ವಲಯದ ವಿರುದ್ಧ ಮೊದಲ ಪಂದ್ಯವನ್ನಾಡಲಿದೆ.

ಮೈಸೂರು ರೈನೋಸ್ ತಂಡ: ನಿಖಿಲ್ ಜಿ.ಚೇತನ್(ನಾಯಕ), ಎಸ್. ಸಚಿನ್ ರಾಜ್ (ಉಪನಾಯಕ), ಆಯುಷ್ ಎ.ಅರಸ್, ಬೆನಕ ಆರ್.ಗೌಡ, ಜಿ.ಗುರುಪ್ರಸಾದ್, ಜಯಂತ್ ಆರ್.ಗೌಡ (ವಿಕೆಟ್ ಕೀಪರ್), ಸಿ.ಕೆ.ಲಿಕಿತ್ (ವಿಕೆಟ್ ಕೀಪರ್), ನಿಶಾಂತ್ ಅರುಣ್, ಆರ್.ಪ್ರಥಮ್, ಸಿ.ಎಸ್. ಪುನೀತ್ ಗೌಡ, ಶ್ಯಾಮ್ ಜಯ ಶಂಕರ್, ಎಸ್.ಎ.ಸತ್ರೀಕ್, ಎನ್.ಪಿ.ಶಿವಕುಮಾರ್, ಸೂರ್ಯ ವೆಂಕಟೇಶ್ ಮತ್ತು ಹೆಚ್.ಸ್ವರೂಪ್ ಕಣಕ್ಕಿಯಲಿದ್ದಾರೆ. ಹೆಚ್ಚುವರಿ ಆಟಗಾರರಾಗಿ ಎಸ್.ಎ.ಅರ್ಜುನ್, ಮಹಮ್ಮದ್ ಜೈನ್ ಷರೀಫ್, ರವಿ ಭಾರ್ಗವ್‌ಗೌಡ, ಕೆ.ಆರ್.ಸಮೃದ್ಧ್ ಮತ್ತು ಯು.ಸಮೃದ್ಧ್ ಆಯ್ಕೆಯಾಗಿದ್ದು, ಕೋಚ್ ಆಗಿ ಕಫೀಲ್ ಅಹಮದ್, ಮ್ಯಾನೇಜರ್ ಆಗಿ ಎಸ್. ಪ್ರಭಾಕರ ಕಾರ್ಯನಿರ್ವಹಿಸಲಿದ್ದಾರೆ.

ನಾಳೆ ನಾಮಧಾರಿಗೌಡ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ

ಮೈಸೂರು, ಜ.2(ಎಂಕೆ)– ನಾಮಧಾರಿಗೌಡ ಸಂಘ, ಮೈಸೂರು ನಗರ ವಲಯದ ವತಿಯಿಂದ ಜ.4 ರಂದು ಬೆಳಗ್ಗೆ 10.30ಕ್ಕೆ ಗಂಗೋತ್ರಿ ಬಡಾವಣೆಯಲ್ಲಿರುವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಸಂತೋಷಕೂಟ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ.ಎನ್.ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮಾರಂಭ ಉದ್ಘಾಟಿಸಲಿದ್ದು, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಂಘ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು. 1 ಸಾವಿರಕ್ಕೂ ಹೆಚ್ಚಿನ ಜನರು ಸೇರಲಿದ್ದು, ನಾಮಧಾರಿಗೌಡ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಬೇಕು. ಮೈಸೂರು ವಲಯದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಿಎ ನಿವೇಶನ ನೀಡಬೇಕು ಹಾಗೂ ಸಮುದಾಯದ ಅಭಿವೃದ್ಧಿ ಶಾಸಕರು ಹಾಗೂ ಸಂಸದರ ಅನುದಾನ ಕೋರಿ ಸಮಾರಂಭದಲ್ಲಿ ಮನವಿ ಮಾಡಲಾಗುವುದು ಎಂದರು.

ನಾಮಧಾರಿಗೌಡ ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಕೆ.ಟಿ.ಗೋವಿಂದರಾಜು, ಮೈಸೂರು ನಗರ ವಲಯ ಉಪಾಧ್ಯಕ್ಷರಾದ ಬಿ.ಎಸ್.ನಟರಾಜ್, ಬಿ.ಪಿ.ಸುರೇಶ್, ಕೆ.ಎಂ.ದೇವಣ್ಣ, ಜಂಟಿ ಕಾರ್ಯದರ್ಶಿ ಜ್ಞಾನಾನಂದ ಕಗ್ಗೆರೆ ಮತ್ತಿತರರಿದ್ದರು.

ಕೋಗಿಲು ನಿರಾಶ್ರಿತರಿಗೆ ಮನೆ ಕಲ್ಪಿಸಲು ಸರ್ಕಾರದ ತರಾತುರಿ ಕ್ರಮ

25 ವರ್ಷವಾದರೂ ಮೈಸೂರಿನ ಚಾಮರಾಜ ಕ್ಷೇತ್ರದ 475 ಫಲಾನುಭವಿಗಳಿಗಿಲ್ಲ ಸೂರು

- ಎರಡೂವರೆ ದಶಕದಿಂದ ಚಾತಕ ಪಕ್ಷಿಗಳಂತೆ ಕಾಯುತ್ತಿರುವರು
- 15,100 ಹಣ ಪಾವತಿಸಿದರೂ ದೊರೆಯದ ಮನೆ/ನಿವೇಶನ
- ಮನೆ ಪಡೆಯಲು 25 ವರ್ಷದಿಂದ ಒಂದಲ್ಲಾ ಒಂದು ಅಡ್ಡಿ
- ಕೋಗಿಲು ನಿರಾಶ್ರಿತರ ಮೇಲಿರುವ ಪ್ರೀತಿ ಇತರರ ಮೇಲೇಕಿಲ್ಲ

ಮೈಸೂರು, ಜ.2(ಬಿಎಲ್‌ಯು)– ರಾಜಧಾನಿ ಬೆಂಗಳೂರಿನ ಕೋಗಿಲು ಬಡಾವಣೆಯ ನಿರಾಶ್ರಿತರಿಗೆ ತರಾತುರಿಯಲ್ಲಿ ಮನೆ ನೀಡಲು ರಾಜ್ಯ ಸರ್ಕಾರ ಪ್ರಕ್ರಿಯೆ ಆರಂಭಿಸಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ, ಮೈಸೂರಿನ ಚಾಮರಾಜ ಕ್ಷೇತ್ರದ 475 ಆಶ್ರಯ ಫಲಾನುಭವಿಗಳು ಹಣ ಕಟ್ಟಿ 25 ವರ್ಷವಾದರೂ ಇನ್ನು ಕೂಡ ನಿವೇಶನ ಇಲ್ಲವೇ ಮನೆ ದೊರೆತಿಲ್ಲ.

ಹೆಚ್.ಎಸ್.ಶಂಕರಲಿಂಗೇಗೌಡರು ಚಾಮರಾಜ ಕ್ಷೇತ್ರದ ಶಾಸಕರಾಗಿದ್ದಾಗ 2000 ನೇ ಇಸವಿಯಲ್ಲಿ ನಗರ ಪಾಲಿಕೆ ವತಿಯಿಂದ ಆಶ್ರಯ ಮನೆ ಹಾಗೂ ನಿವೇಶನ ನೀಡಲು ಅರ್ಜಿ ಆಹ್ವಾನಿಸಲಾಗಿತ್ತು. ಸಾವಿರಾರು ಮಂದಿ ಅರ್ಜಿ ಸಲ್ಲಿಸಿದ್ದರು. ಅವರಲ್ಲಿ 475 ಅರ್ಹರನ್ನು ಗುರುತಿಸಲಾಗಿತ್ತು. ಆಯ್ಕೆಗೊಂಡ ಫಲಾನುಭವಿಗಳಿಂದ 10,100 ರೂಪಾಯಿಗಳನ್ನು ನಗರ ಪಾಲಿಕೆ ಪಾವತಿಸಿಕೊಂಡಿತು.

ಫಲಾನುಭವಿಗಳಿಗೆ ನಿವೇಶನ ನೀಡಲು ಮೈಸೂರಿನ ದಟ್ಟಗಳ್ಳಿ ರಿಂಗ್ ರಸ್ತೆಯ ಅಯ್ಯಜ್ಜನಹುಂಡಿಯಲ್ಲಿ ಸರ್ಕಾರಿ ಜಾಗವನ್ನು ಗುರುತಿಸಲಾಗಿತ್ತು. ತರುವಾಯ 2002ರಲ್ಲಿ ಮೈಸೂರಿನ ಪುರಭವನದಲ್ಲಿ ಲಾಟರಿ ಮೂಲಕ ಫಲಾನುಭವಿಗಳ ನಿವೇಶನಗಳ ಸಂಖ್ಯೆಯನ್ನು ಆಯ್ಕೆ ಮಾಡಲಾಯಿತು. ಇದರಲ್ಲಿ ಯಾವುದೇ ಲೋಪ ದೋಷ ನುಸುಳದೆ ಪಾರದರ್ಶಕವಾಗಿರಬೇಕೆಂದು ಲಾಟರಿ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ವಿಡಿಯೋ ಚಿತ್ರೀಕರಣ ಕೂಡ ಮಾಡಲಾಗಿತ್ತು.

ರಿಂಗ್ ರಸ್ತೆಯ ಆಯ್ಯಜ್ಜನಹುಂಡಿಯಲ್ಲಿ ಬಡಾವಣೆ ನಿರ್ಮಾಣ ಮಾಡುವ ಪ್ರಕ್ರಿಯೆ ಆರಂಭಿಸಲಾಗಿತ್ತು. ಆ ಜಾಗ ತಗ್ಗು ಪ್ರದೇಶದಿಂದ ಕೂಡಿರುವ ಹಿನ್ನೆಲೆಯಲ್ಲಿ ಮಣ್ಣು ತುಂಬಿಸಲು ಫಲಾನುಭವಿಗಳಿಂದ ಮತ್ತೆ 5 ಸಾವಿರ ರೂಪಾಯಿಯನ್ನು ನಗರ ಪಾಲಿಕೆ ಸಂಗ್ರಹಿಸಿತ್ತು. ಹತ್ತಾರು ವರ್ಷಗಳಿಂದ ಸೂರಿಲ್ಲದೆ ಸಂಕಷ್ಟದಲ್ಲಿದ್ದ ಫಲಾನುಭವಿಗಳು ಆಶ್ರಯ ಮನೆ ಸಿಕ್ಕಿತೆಂಬ ಸಂತಸದಲ್ಲಿದ್ದರು.

ಆದರೆ ಇನ್ನೇನು ಬಡಾವಣೆ ನಿರ್ಮಾಣ ಕಾರ್ಯ ಆರಂಭವಾಗಬೇಕು ಎನ್ನುವ ಸಂದರ್ಭದಲ್ಲಿ ಮನೆ ಹಂಚಿಕೆ ವಿಚಾರವಾಗಿ ಆಶ್ರಯ ಸಮಿತಿ ಸದಸ್ಯರಲ್ಲಿ ಮನಸ್ತಾಪ ಉಂಟಾಯಿತು. ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿಲ್ಲ, ಇದರಲ್ಲಿ ಗೋಲ್‌ಮಾಲ್ ನಡೆದಿದೆ ಎಂದು ಕೆಲವರು ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಕೈಗೆ ಬಂದ ತುತ್ತು ಬಾಯಿಗೆ ಸಿಗಲಿಲ್ಲ ಎಂಬ ಗಾದೆ ಮಾತಿನಂತೆ ಫಲಾನುಭವಿಗಳ ಆಸೆ ನಿರಾಸೆಯಾಯಿತು.

ಈ ಸಂಬಂಧ ನ್ಯಾಯಾಲಯದಲ್ಲಿ ಸುದೀರ್ಘ ವಿಚಾರಣೆ ನಡೆದು ಪ್ರಕರಣ ದಾಖಲಿಸಿದ್ದವರ ಅರ್ಜಿ ವಜಾ ಮಾಡಿದ ನ್ಯಾಯಾಲಯ ಫಲಾನುಭವಿಗಳ ಆಯ್ಕೆ ಪಟ್ಟಿ ಸಿಂಧುವಾಗಿದೆ ಎಂದು ತೀರ್ಪು ನೀಡಿತು. ನ್ಯಾಯಾಲಯದ ತೀರ್ಪಿನಿಂದ ಸಂತಸಗೊಂಡ ಫಲಾನುಭವಿಗಳು ಈಗಲಾದರೂ ನಮಗೆ ನಿವೇಶನ ದೊರೆಯುತ್ತದೆ ಎಂಬ ನಿರೀಕ್ಷೆಯಲ್ಲಿದ್ದರು.

ಆದರೆ, ಅಷ್ಟರಲ್ಲಿ ಅಯ್ಯಜ್ಜನಹುಂಡಿಯಲ್ಲಿ ಆಶ್ರಯ ಬಡಾವಣೆಗೆ ಮೀಸಲಿಟ್ಟ ಜಾಗ ಕೆರೆಗೆ ಸೇರಿದೆ ಎಂದು ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಅದನ್ನು ಕೆರೆ ಜಾಗವೆಂದು ಆದೇಶ ಹೊರಡಿಸಿದರು. ಹಾಗೆಯೇ ಭೂ ಮಾಫಿಯಾದವರ ಪಾಲಾಗದಂತೆ ಸುತ್ತ ತಂತಿ ಬೇಲಿ ಹಾಕಿಸಿದರು.

ಇದರಿಂದ 475 ಫಲಾನುಭವಿಗಳು ಮತ್ತೆ ಅತಂತ್ರರಾದರು. ಅಲ್ಲಿಂದ ಇಲ್ಲಿವರೆಗೆ 25 ವರ್ಷ ಕಾದರೂ ನಿವೇಶನ ಇಲ್ಲವೇ ಮನೆ ದೊರೆಯಲಿಲ್ಲ. ಇಂದಲ್ಲ ನಾಳೆ ತಮ್ಮ ಆಸೆ ಕೈಗೂಡಬಹುದು ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಕಳೆದ 25 ವರ್ಷದಿಂದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸರ್ಕಾರಗಳು ಬಂದು ಹೋಗುತ್ತಿವೆ. ಆದರೆ 475 ಫಲಾನುಭವಿಗಳ ಬೇಡಿಕೆ ಮಾತ್ರ ಇನ್ನು ಈಡೇರಿಲ್ಲ.

ಮುಂದಿನ ವರ್ಷ ಕೇರಳದಲ್ಲಿ ನಡೆಯುವ ವಿಧಾನಸಭಾ ಚುನಾವಣೆ ಹಿನ್ನೆಲೆ ಅಲ್ಪಸಂಖ್ಯಾತ ಸಮುದಾಯದವರ ಓಲೈಕೆಗಾಗಿ ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೋಗಿಲು ನಿರಾಶ್ರಿತರ ಪರ ಧ್ವನಿ ಎತ್ತಿದ್ದರು. ಇದರಿಂದ ಕೇರಳದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪೆಟ್ಟು ಬೀಳುತ್ತದೆ ಎಂದು ಕೇರಳದಿಂದ ಲೋಕಸಭೆಗೆ ಆಯ್ಕೆಯಾಗಿರುವ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಕೆಸಿ.ವೇಣು ಗೋಪಾಲ್ ಅವರು ಕೋಗಿಲು ನಿರಾಶ್ರಿತರಿಗೆ ಮನೆ ನೀಡುವಂತೆ ಹುಕ್ಕುಂ ಹೊರಡಿಸಿದ್ದರು.

ಈಗ ಕೋಗಿಲು ನಿರಾಶ್ರಿತರಿಗೆ ಗುಂಪು ಮನೆ ನೀಡುವ ಪ್ರಕ್ರಿಯೆ ಆರಂಭವಾಗಿದ್ದು, ಇನ್ನೆರಡು ದಿನದಲ್ಲಿ ಅವರಿಗೆ ಸೂರು ದೊರೆಯುವ ಸಾಧ್ಯತೆ ಇದೆ. ಆದರೆ, ಚಾಮರಾಜ ಕ್ಷೇತ್ರದ 475 ಫಲಾನುಭವಿಗಳಿಗೆ ಕಳೆದ 25 ವರ್ಷದಿಂದ ಮನೆ ಸಿಕ್ಕಿಲ್ಲ.

ಗುಂಪು ಮನೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ



ಚಾಮರಾಜ ಕ್ಷೇತ್ರದ 475 ಫಲಾನುಭವಿಗಳಿಗೆ ಗ್ರೂಪ್ ಹೌಸಿಂಗ್ ಸ್ಕೀಂ (ಜಿ ಪ್ಲಸ್ 3) ನಲ್ಲಿ ಮನೆ ನೀಡಲು ತೀರ್ಮಾನ ಮಾಡಲಾಗಿದೆ. ಮೈಸೂರಿನ ಭುಗತಗಳ್ಳಿಯಲ್ಲಿ ಇದಕ್ಕಾಗಿ ಭೂಮಿ ಗುರುತಿಸಲಾಗಿದೆ. ಮನೆ ನಿರ್ಮಾಣ ಮಾಡುವ ಸಂಬಂಧ ಡಿಪಿಆರ್ ಕೂಡ ಸಿದ್ಧಪಡಿಸಲಾಗಿದೆ. ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಲಾಗಿದೆ. ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೇ ಮನೆ ನಿರ್ಮಾಣ ಮಾಡಿ ಫಲಾನುಭವಿಗಳಿಗೆ ನೀಡಲಾಗುವುದು. ಇದಕ್ಕೂ ಮುನ್ನ 475 ಫಲಾನುಭವಿಗಳಲ್ಲಿ ಯಾರು ಅರ್ಹರು ಎಂದು ಮತ್ತೆ ಪರಿಶೀಲನೆ ಮಾಡಲಾಗುವುದು.

– **ಜಿ.ಲಕ್ಷ್ಮಿಕಾಂತರೆಡ್ಡಿ**, ಜಿಲ್ಲಾಧಿಕಾರಿ, ಮೈಸೂರು.

25 ವರ್ಷದಲ್ಲಿ ದೇವರ ಪಾದ ಸೇರಿರುವ ಹಲವು ಫಲಾನುಭವಿಗಳು

ಕಳೆದ 25 ವರ್ಷದಿಂದ ಮನೆಗಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿರುವ 475 ಫಲಾನುಭವಿಗಳಲ್ಲಿ ಕೆಲವರು ಸಾವನ್ನಪ್ಪಿದ್ದಾರೆ. ಕಳೆದ 25 ವರ್ಷದ ಹಿಂದೆ ಆಶ್ರಯ ಮನೆಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಬಹಳಷ್ಟು ಜನರು 40ರಿಂದ 50 ವರ್ಷ ವಯೋಮಾನದವರಾಗಿದ್ದರು. ಈ ಅವಧಿಯಲ್ಲಿ ಕೊರೊನಾ, ವಯೋಸಹಜ ಕಾಯಿಲೆ, ಅಪಘಾತ ಸೇರಿದಂತೆ ಹಲವು ಕಾರಣಗಳಿಂದ ಬಹಳಷ್ಟು ಜನರು ಮೃತಪಟ್ಟಿದ್ದಾರೆ. ಇಂತಹ ಜನರ ಬವಣೆ ಅರಿತು ಸರ್ಕಾರ ಮೃತ ಫಲಾನುಭವಿಗಳಿಗಾದರೂ ಮನೆ ನಿರ್ಮಾಣ ಮಾಡಿಕೊಡಬೇಕಿದೆ.

ಸಾಹಿತಿ ಚಂದ್ರಶೇಖರ ಕಂಬಾರರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ



ಚೆನ್ನೈ, ಜ.2– ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಗ್ರೂಪ್‌ನ 3ನೇ ಆವೃತ್ತಿಯ ರಾಮನಾಥ್ ಗೋಯೆಂಕಾ ಸಾಹಿತ್ಯ ಸಮ್ಮಾನ್ ಪ್ರಶಸ್ತಿಯನ್ನು ಜೀವಮಾನ ಸಾಧನೆಗಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಖ್ಯಾತ ಸಾಹಿತಿ, ಕಥೆಗಾರ, ಕವಿ, ಕಾದಂಬರಿಕಾರ, ನಾಟಕಕಾರ ಡಾ. ಚಂದ್ರಶೇಖರ ಕಂಬಾರ ಅವರಿಗೆ ಚೆನ್ನೈನಲ್ಲಿ ಪ್ರದಾನ ಮಾಡಲಾಯಿತು.

ಇಂದು ಚೆನ್ನೈನಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ತಮಿಳುನಾಡು ಸಚಿವರಾದ ಪಳನಿವೇಲ್ ತಿಯಾಗ ರಾಜನ್, ಮಾ. ಸುಬ್ರಮಣಿಯನ್, ಟಿಎನ್‌ಐಇ ಗ್ರೂಪ್ ಸಿಎಂಡಿ ಮನೋಜ್ ಕುಮಾರ್ ಸೊಂಥಾಲಿಯಾ, ಸಿಇಒ ಲಕ್ಷ್ಮಿ ಮೆನನ್, ಸಂಪಾದಕೀಯ ನಿರ್ದೇಶಕ ಪ್ರಭು ಚಾವ್ಲಾ, ಸಂಪಾದಕ ಸಾಂತ್ವಾನ ಭಟ್ಟಾಚಾರ್ಯ ಮತ್ತು ದಿನಮಣಿ ಸಂಪಾದಕ ಕೆ. ವೈದ್ಯನಾಥನ್ ಅವರು ಡಾ. ಚಂದ್ರಶೇಖರ ಕಂಬಾರ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಿದರು.

ಡಾ. ಚಂದ್ರಶೇಖರ ಕಂಬಾರ ಅವರ ಬರಹಗಳು ಮತ್ತು ನಾಟಕಗಳು ಶಾಸ್ತ್ರೀಯ, ಸಮಕಾಲೀನ, ಸ್ಥಳೀಯ ಮತ್ತು ಸಾರ್ವತ್ರಿಕವಾದವುಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತವೆ.

RNGSS 'ಅತ್ಯುತ್ತಮ ನಾನ್–ಫಿಕ್ಷನ್' ಪ್ರಶಸ್ತಿಯನ್ನು ಸುದೀಪ್ ಚಕ್ರವರ್ತಿ ಅವರ ಫಾಲನ್ ಸಿಟಿ: ಎ ಡಬಲ್ ಮರ್ಡರ್, ಪೊಲಿಟಿಕಲ್ ಇನ್‌ಸ್ಯಾನಿಟಿ ಮತ್ತು ಡೆಲ್ಲಿಸ್ ಡಿಸೆಂಟ್ ಫ್ರಮ್ ಗ್ರೇಸ್‌ಗಾಗಿ ನೀಡಲಾಗಿದೆ.

ಸಂಪ್ರದಾಯಗಳಲ್ಲಿ ಬೇರೂರಿರುವ ಮತ್ತು ಸಮಕಾಲೀನ ಸಾಹಿತ್ಯ ಸಂವೇದನೆಯಿಂದ ರೂಪುಗೊಂಡ, ಸುಬಿ ತಬಾ ಅವರ ಟೇಲ್ಸ್ ಫ್ರಮ್ ದಿ ಡಾನ್–ಲಿಟ್ ಮೌಂಟೇನ್ಸ್: ಸ್ಟೋರೀಸ್ ಫ್ರಮ್ ಅರುಣಾಚಲ ಪ್ರದೇಶಕ್ಕೆ RNGSS 'ಅತ್ಯುತ್ತಮ ಕಾದಂಬರಿ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇನ್ನು RNGSS 'ಅತ್ಯುತ್ತಮ ಚೊಚ್ಚಲ' ಪ್ರಶಸ್ತಿಯನ್ನು ನೇಹಾ ದೀಕ್ಷಿತ್ ಅವರಿಗೆ 'ದಿ ಮೆನಿ ಲೈವ್ಸ್ ಆಫ್ ಸೈದಾ ಎಕ್ಸ್: ದಿ ಸ್ಟೋರಿ ಆಫ್ ಆನ್ ಅನ್‌ನೋನ್ ಇಂಡಿಯನ್' ಗೆ ನೀಡಲಾಗಿದೆ.

ಭಾರತೀಯ ಪತ್ರಿಕೋದ್ಯಮದ ದಿಗ್ಗಜ ರಾಮನಾಥ್ ಗೋಯೆಂಕಾ ಅವರ ಸ್ಮರಣಾರ್ಥವಾಗಿ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್(TNIE) ಗ್ರೂಪ್, ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಾಗಿ ರಾಮನಾಥ್ ಗೋಯೆಂಕಾ ಸಾಹಿತ್ಯ ಸಮ್ಮಾನ್(RNGSS) ಪ್ರಶಸ್ತಿಯನ್ನು ನೀಡುತ್ತಿದೆ.

'ಜೀವಮಾನ ಸಾಧನೆ ಪ್ರಶಸ್ತಿ ಎರಡು ಲಕ್ಷ ರೂಪಾಯಿ ಬಹುಮಾನ, ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ಒಳಗೊಂಡಿದ್ದು, ಬೆಸ್ಟ್ ಫಿಕ್ಷನ್, ಬೆಸ್ಟ್ ನಾನ್–ಫಿಕ್ಷನ್ ಮತ್ತು ಬೆಸ್ಟ್ ಡೆಬ್ಯೂಟ್ ಪ್ರಶಸ್ತಿ ತಲಾ ಒಂದು ಲಕ್ಷ ರೂಪಾಯಿ ಬಹುಮಾನ, ಪ್ರಮಾಣ ಪತ್ರ ಮತ್ತು ನೆನಪಿನ ಕಾಣಿಕೆ ಒಳಗೊಂಡಿದೆ.

ಜಾತ್ಯಾತೀತವಾಗಿ ಕಾರ್ಯ ನಿರ್ವಹಿಸಿದರೆ ಸಮ ಸಮಾಜ ನಿರ್ಮಾಣ ಸಾಧ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಬೆಂಗಳೂರು, ಜ.2(ಕೆಎಂಶಿ)–ಅಧಿಕಾರಿಗಳು ಜಾತ್ಯಾತೀತ ದೃಷ್ಟಿಕೋನದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಕೆಎಎಸ್ ಅಧಿಕಾರಿಗಳ ಸಂಘದ ಕ್ಯಾಲೆಂಡರ್ ಮತ್ತು ದಿನಚರಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬಡವರು, ದಲಿತರು, ಅಲ್ಪಸಂಖ್ಯಾತರ ಶ್ರೇಯೋಭಿವೃದ್ಧಿಗೆ ವಿಶೇಷ ಕಾಳಜಿ ಹಾಗೂ ಹೊಸ ಉತ್ಸಾಹದಿಂದ ಎಲ್ಲರೂ ಕಾರ್ಯ ನಿರ್ವಹಿಸಬೇಕು ಎಂದರು.

ರಾಜಕೀಯ ಸ್ವಾತಂತ್ರ್ಯ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ಮೇಲೆ ಅವಲಂಬಿತವಾಗಿದೆ. ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಲು ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಇರಬೇಕು. ಇಲ್ಲವಾದರೆ ಅಸಮಾನತೆ ಹೋಗಲು ಸಾಧ್ಯವಿಲ್ಲ. ಅಸಮಾನತೆ ತೊಲಗದೇ, ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸುವುದೂ ಅಸಾಧ್ಯ. ಎಲ್ಲರಿಗೂ ಸಮಾನ ಅವಕಾಶ ದೊರೆತು, ಸಮಾಜದ ಮುಖ್ಯವಾಹಿನಿಗೆ ಬರುವಂತಾದಾಗ ಮಾತ್ರ ಸಮಾನತೆ ಬರಲು ಸಾಧ್ಯ. ನಮ್ಮ ಸಮಾಜ ಜಾತಿ ವ್ಯವಸ್ಥೆಯಿಂದ ಕೂಡಿದೆ. ಜಾತಿ ಮತ್ತು ವರ್ಗ ವ್ಯವಸ್ಥೆ ಅಳಿಯಬೇಕಾದರೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಿಗಲೇಬೇಕು.

ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳು ಕಳೆದರೂ ಇನ್ನೂ ಜಾತಿ ವ್ಯವಸ್ಥೆ ನಿರ್ಮೂಲನೆಯಾಗಿಲ್ಲ. ಯಾವುದೇ ಕಾರಣಕ್ಕೂ ಸ್ವಜಾತಿ ಪಕ್ಷಪಾತ ಮಾಡಬಾರದು. ಆಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ.

ಬಡವರ ಒಳಿತಿಗೆ ಕರ್ತವ್ಯ ನಿರ್ವಹಿಸುವಾಗ, ಅಧಿಕಾರಿಗಳು ಪ್ರಾಮಾಣಿಕವಾಗಿರಬೇಕು. ವ್ಯವಸ್ಥೆ ಸರಿ ಮಾಡುವ ಪ್ರಯತ್ನ ಮಾಡಬೇಕು. ತಹಶೀಲ್ದಾರ್, ಸಹಾಯಕ ಆಯುಕ್ತರು ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಎಲ್ಲರಿಗೂ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಬಡವರ ಸಂವಿಧಾನ ಹಕ್ಕುಗಳ ರಕ್ಷಣೆ ಮಾಡಬೇಕು ಎಂದರು.

ತಿರುಪತಿ ಲಡ್ಡು ವಿವಾದ: ಟಿಟಿಡಿ ಮಾಜಿ ಅಧ್ಯಕ್ಷರಿಗೆ ಮಧ್ಯಂತರ ಪರಿಹಾರ ನೀಡಲು ದೆಹಲಿ ಹೈಕೋರ್ಟ್ ನಕಾರ!

ನವದೆಹಲಿ, ಜ.2– ತಿರುಪತಿ ಲಡ್ಡು ಪ್ರಸಾದದ ಕಲಬೆರಕೆ ಕುರಿತು ಮಾನ ಹಾನಿಕರ ಪ್ರಕಟಣೆಯ ಆರೋಪದ ವಿರುದ್ಧ ತಿರುಮಲ ತಿರುಪತಿ ದೇವಸ್ಥಾನಂ (TTD) ಮಾಜಿ ಅಧ್ಯಕ್ಷ ವೈವಿ ಸುಬ್ಬಾ ರೆಡ್ಡಿ ಅವರಿಗೆ ಮಧ್ಯಂತರ ಪರಿಹಾರ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಜೂನ್ 2019ರಿಂದ ಆಗಸ್ಟ್ 2023ರವರೆಗೆ ಟಿಟಿಡಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ರೆಡ್ಡಿ ಅವರು, ಪ್ರತಿವಾದಿಗಳ (ಸಂಸ್ಥೆಗಳು, ಪ್ರಕಾಶಕರು ಮತ್ತು ಮಾನಹಾನಿಕರ ಲೇಖನಗಳ ಲೇಖಕರ) ಆರೋಪದ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು.

ಹಿಂದೂ ಧರ್ಮದ ನಂಬಿಕೆಯ ಪವಿತ್ರ ಕ್ಷೇತ್ರಗಳಲ್ಲಿ ಒಂದಾಗಿರುವ ತಿರುಮಲದ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ತುಪ್ಪ ಖರೀದಿಯಲ್ಲಿ ಕಲಬೆರಕೆ ಮಾಡಿದ್ದಾರೆ ಎಂದು ಆರೋಪಿಗಳು ಮಾನಹಾನಿಕರ ಪ್ರಕಟಣೆ ನೀಡಿದ್ದಾರೆ ಎಂದು ರೆಡ್ಡಿ ಮನವಿಯಲ್ಲಿ ಹೇಳಿದ್ದರು.

ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಮಧ್ಯಂತರ ತಡೆಯಾಜ್ಞೆಗಳನ್ನು ನೀಡಬಹುದು ಎಂದು ನ್ಯಾಯಮೂರ್ತಿಅಮಿತ್ ಬನ್ಸಲ್ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಪ್ರತಿವಾದಿಗಳ ಆಕ್ಷೇಪಾರ್ಹ ಹೇಳಿಕೆ, ಪೋಸ್ಟ್‌ಗಳು, ಲೇಖನಗಳ ವಿರುದ್ಧ ಮಧ್ಯಂತರ ತಡೆಯಾಜ್ಞೆ ನೀಡಲು ಕೋರ್ಟ್ ಒಲವು ಹೊಂದಿಲ್ಲ. ಪ್ರತಿವಾದಿಗಳು ತಮ್ಮ ಪ್ರಕಟಣೆಗಳು, ಪೋಸ್ಟ್‌ಗಳು ಮತ್ತು ಲೇಖನಗಳಿಗೆ ಸಂಬಂಧಿಸಿದಂತೆ ಪ್ರತಿವಾದವನ್ನು ಮಂಡಿಸಲು ಅವಕಾಶ ನೀಡುವುದು ಸಮಂಜಸವಾಗಿದೆ ಎಂದು ನ್ಯಾಯಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಅಪಘಾತದಲ್ಲಿ ಸಾವಿಗೀಡಾದ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಪುತ್ರಿಗೆ ನೌಕರಿ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಇತ್ತೀಚೆಗೆ ಮೃತಪಟ್ಟಿದ್ದ ಕರ್ನಾಟಕದ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರ ಪುತ್ರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ನೀಡಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟದಲ್ಲಿ ಮಹಾಂತೇಶ್ ಬೀಳಗಿ ಅವರ ಕುಟುಂಬಕ್ಕೆ ಅನುಕಂಪದ ಹುದ್ದೆ ನೀಡುವ ಬಗ್ಗೆ ಚರ್ಚೆಯಾಗಿದ್ದು, ಅಂತಿಮವಾಗಿ ಮಹಾಂತೇಶ್ ಬೀಳಗಿ ಅವರ ಪುತ್ರಿ ಚೈತನ್ಯ ಅವರಿಗೆ ಅನುಕಂಪದ ಆಧಾರದ ಮೇಲೆ ಗ್ರೂಪ್ ಸಿ ಹುದ್ದೆ ನೀಡಲು ಅನುಮೋದನೆ ನೀಡಿದೆ.



ಮಹಾಂತೇಶ್

2025ರ ನವೆಂಬರ್ 25ರಂದು ಜೇವರ್ಗಿ ಸಮೀಪ ಮಹಾಂತೇಶ್ ಬೀಳಗಿ ಸೇರಿ ನಾಲ್ವರು ಪ್ರಯಾಣಿಸುತ್ತಿದ್ದ ಇನ್ನೋವಾ ಕಾರು ನಿಯಂತ್ರ ತಪ್ಪಿ ಪಲ್ಟಿಯಾಗಿ ಭೀಕರ ಅಪಘಾತ ಸಂಭವಿಸಿತ್ತು. ಈ ಘಟನೆಯಲ್ಲಿ ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಗಂಭೀರವಾಗಿ ಗಾಯಗೊಂಡಿದ್ದ ಮಹಾಂತೇಶ್ ಬೀಳಗಿ ಅವರು ಚಿಕಿತ್ಸೆ ಫಲಕಾರಿಯಾಗದೇ ಕಲಬುರಗಿಯ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು
ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ, ನಗರ ಸಭೆ ಆವರಣ, ಹುಣಸೂರು–571105
Gmail.hunsurplanning@gmail.com Ph:08222-295122
ಸಂ.ಹು.ಯೋ.ಪ್ರಾ/ದೊ.ಹು.ಗ್ರಾ/ಭೂ.ಉ.ಬ/393/2025–26 ದಿ: 30.12.2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ)

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸ.ನಂ:169/3ರಲ್ಲಿ 2ಎ–26ಗುಂ ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಕೃಷಿ/ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಶ್ರೀಮತಿ.ವಿಯಲಕ್ಷ್ಮಿ ಕೋಂ ಚಿಕ್ಕದ್ಯಾವಣ್ಣ ರವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯು ಈ ಕೆಳಕಂಡಂತಿರುತ್ತದೆ.

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸ.ನಂ:169/3ರಲ್ಲಿ 2ಎ–26ಗುಂ ವಿಸ್ತೀರ್ಣದ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ಹುಣಸೂರು ಪಟ್ಟಣದ ಮಹಾಯೋಜನೆಯಲ್ಲಿ ವ್ಯವಸಾಯ/ಕೃಷಿ ವಲಯದಲ್ಲಿದ್ದು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ಸದರಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದ ನಂತರ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಸತಿ ಬಡಾವಣೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಬಡವರಿಗೆ ಕಡಿಮೆ ದರದಲ್ಲಿ ನಿವೇಶನವನ್ನು ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ಹೊಂದಿರುತ್ತೇವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರನ್ವಯ ಪ್ರಕಾರ ವ್ಯವಸಾಯ/ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– (ಶ್ರೀ.ಹೆಚ್.ಪಿ.ಅಮರ್‌ನಾಥ್)	ಸಹಿ/– (ಶ್ರೀಮತಿ.ಹೆಚ್.ಕೆ.ರೇಣುಕ)
ಅಧ್ಯಕ್ಷರು	ಸದಸ್ಯ ಕಾರ್ಯದರ್ಶಿಗಳು,
ಹುಣಸೂರು ಯೋಜನಾ ಪ್ರಾಧಿಕಾರ	ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು	ಹುಣಸೂರು ಯೋಜನಾ ಪ್ರಾಧಿಕಾರ,
DIPR/DDMYS/1459/KSMCA/829/2025-26	ಹುಣಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು ಸಿಟಿ–570032, ಬಸವನಪುರ, ವಿಜಯನಗರ 4ನೇ ಹಂತ, ಮನೆ ನಂ. 290 ರಲ್ಲಿ ವಾಸವಾಗಿರುವ ಲೇಟ್.ಎನ್.ಆರ್.ಲೋಕೇಶ್ ರವರ ಮಗನಾದ ಹರ್ಷಿತ್ ಎನ್.ಎಲ್ ಮತ್ತು ಶ್ರೀಮತಿ.ಗಗನ ಹೆಚ್.ಎಸ್ ಕೋಂ ಹರ್ಷಿತ್ ಎನ್.ಎಲ್ ರವರು ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಲೇಟ್.ಹರದೀಪ್ ಸಿಂಗ್ ರವರ ಮಗಳಾದ ಶ್ರೀಮತಿ. ಜಸ್‌ಪ್ರೀತ್ ಕೌರ್ ಒಸಹಾನ್ (Smt.Jaspreeth Kour Osahan D/o Late.Haradeep Singh) ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಕ್ರಯಪತ್ರವು ದಿನಾಂಕ 28.07.2025ರಂದು ದಸ್ತಾವೇಜು ಸಂಖ್ಯೆ ಎಂವೈಎಸ್–1–04793–2025–26 ರಂತೆ ನೋಂದಣಿ ಆಗಿರುತ್ತದೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ಯಾರಿ ಗಾದರೂ ಹಕ್ಕು, ಹಿತಾಸಕ್ತಿ, ಸ್ವಾಧೀನ ಸಂಬಂಧ ವಗೈರೆ ಗಳು ಇದ್ದಲ್ಲಿ ಈ ತಿಳುವಳಿಕೆ ಪ್ರಕಟಣೆಗೊಂಡ 07 ದಿನಗಳೊಳಗಾಗಿ ತಕರಾರನ್ನು ಸಲ್ಲಿಸತಕ್ಕದ್ದು. ನಂತರ ಬಂದ ಯಾವುದೇ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೋಗಾದಿ ಪಟ್ಟಣ ಪಂಚಾಯ್ತಿ ಮಾದಗಳ್ಳಿ ಗ್ರಾಮ, (ಬಸವನಪುರ ಗ್ರಾಮ) ವಾರ್ಡ್ ನಂ.13, ಅಸೆಸ್‌ಮೆಂಟ್ ನಂ.290. ಸ್ವತ್ತಿನ ಸಂಖ್ಯೆ : 4593370444, ಪೂರ್ವ–ಪಶ್ಚಿಮ 9.00 ಮೀಟರ್ ಉತ್ತರ–ದಕ್ಷಿಣ 12.00 ಮತ್ತು 2.86 ಮೀಟರ್, ಒಟ್ಟು 108 ಚದರ ಮೀಟರ್ ಸ್ವತ್ತಿಗೆ ಚಕ್ಕುಬಂದಿ :– ಪೂರ್ವಕ್ಕೆ : ವಿಜಯ್‌ಕುಮಾರ್ ವಿ ರವರ ಸ್ವತ್ತು ಮತ್ತು 10X30 ಅಡಿ ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ : ಬೋರಯ್ಯ ರವರ ಸ್ವತ್ತು, ಉತ್ತರಕ್ಕೆ : ಗೋವಿಂದರಾಜು ರವರ ಸ್ವತ್ತು, ದಕ್ಷಿಣಕ್ಕೆ : ಎಂ.ಎನ್.ನಾಗರಾಜು ರವರ ಸ್ವತ್ತು

ಸಹಿ/– ಲೋಹಿತ್ ಎನ್
ವಕೀಲರು, ಶ್ರೀ ಸಾಯಿ ಲಾ–ಅಸೋಸಿಯೇಟ್ಸ್
ನಂ. 2967/2, 14ನೇ ಮೇನ್,
2ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–570009
ಮೊ: 9611113323
ದಿನಾಂಕ: 02/01/2026, ಸ್ಥಳ : ಮೈಸೂರು

ಭಾವಪೂರ್ಣ ಶ್ರದ್ಧಾಂಜಲಿ



ಆರ್. ಚಂಚಲಲಕ್ಷ್ಮಿ
ನಿಧನ : 22.12.2025
ನಿಮ್ಮ ನೆನಪು ಸದಾ ಹಸಿರು
ದುಃಖತಪ್ತರು
ಅಕ್ಕ ಆರ್. ವಿಜಯಲಕ್ಷ್ಮಿ ಮತ್ತು ಮಕ್ಕಳು
ಅಣ್ಣ ಆರ್. ಪುರುಷೋತ್ತಮ ರೇಖಾ ಮತ್ತು ಮಕ್ಕಳು
ತಮ್ಮ ಆರ್.ಜಗದೀಶ್, ಗಾಯತ್ರಿ ಮತ್ತು ಮಗಳು
ಹಾಗೂ ರಾಘವಾಪುರ ಕುಟುಂಬ